# ಅಧ್ಯಯನ – 9 Study IX

# ಪಾಪನಿವೃತ್ತಿಯ ಆತ್ಮದ ದೀಕ್ಷಾಸ್ನಾನ, ಸಾಕ್ಷಿ ಹಾಗೂ ಮುದ್ರೆ

## The Baptism, Witness and Seal of the Spirit of Atonement

**ಆತ್ಮನ ದೀಕ್ಷಾಸ್ನಾನವು ಏಕಮಾತ್ರವಾಗಿದೆ – ಮೂರು ಭಾಗಗಳಲ್ಲಿ – ದೀಕ್ಷಾಸ್ನಾನದ ಮಹತ್ವ – "ಪರಲೋಕ ರಾಜ್ಯದ ಬೀಗದ ಕೈ" – ಎಲ್ಲಾ ದೇಹಗಳ ಮೇಲೆ ಆತ್ಮನ ಮತ್ತೊಂದು ದೀಕ್ಷಾಸ್ನಾನದ ವಾಗ್ದಾನವಿದೆ – ಅದರ ಮಹತ್ವ – ಆತ್ಮನಿಗಾಗಿ ಪ್ರಾರ್ಥನೆ – ಆತ್ಮನ ಸಾಕ್ಷಿ – ಅದರ ಪ್ರಾಮುಖ್ಯತೆ – ಅದಿಲ್ಲದೆ ದೇವರೊಂದಿಗೆ ಸಮಾಧಾನವಿಲ್ಲ – ಅದು ನಮ್ಮಲ್ಲಿ ಇದೆಯೋ ಇಲ್ಲವೋ ಯಾರಿಗೂ ತಿಳಿಯದು – "ಈ ಅಂಶವನ್ನು ತಿಳಿಯಬೇಕೆಂದು ನಾನು ಹಂಬಲಿಸುತ್ತೇನೆ" – ಆತ್ಮನ ಸಾಕ್ಷಿಯನ್ನು ಗ್ರಹಿಸುವುದು ಹೇಗೆ? – ಸೇವೆಗಳಲ್ಲಿ ಬೇರೆ ಬೇರೆ ವಿಧಗಳುಂಟು – ಆತ್ಮನ ಸಾಕ್ಷ್ಯ – ಆತ್ಮನಿಂದ ಪವಿತ್ರಗೊಳ್ಳುವುದು – ಆತ್ಮನ ಮುದ್ರೆ – ಅದು ಮುದ್ರಿಸುವ ವಾಗ್ದಾನ – ವಿಮೋಚನೆಯ ದಿನದ ವರೆಗೆ – ಅತ್ಯುನ್ನತವಾದ ಪ್ರಾಪ್ತಿಯನ್ನು ಗಳಿಸುವುದು – ಮತ್ತು ಕಾಪಾಡಿಕೊಳ್ಳುವುದು.**

**"ದೇವರು ನಮಗೆ ಕೊಟ್ಟಿರುವ ಆತ್ಮವು ಬಲ, ಪ್ರೀತಿ, ಶಿಕ್ಷಣಗಳ ಆತ್ಮವೇ ಹೊರತು ಹೇಡಿತನದ ಆತ್ಮವಲ್ಲ" (2 ತಿಮೋ. 1:7) "ಪಂಚಾಶತ್ತಮ ದಿನದ ಹಬ್ಬವು ಬಂದಿರಲಾಗಿ ಅವರೆಲ್ಲರೂ ಏಕಮನಸ್ಸುಳ್ಳವರಾಗಿ ಕೂಡಿದ್ದರು. ಆಗ ಬಿರುಗಾಳಿ ಬೀಸುತ್ತದೋ ಎಂಬಂತೆ ಫಕ್ಕನೆ ಆಕಾಶದೊಳಗಿಂದ ಒಂದು ಶಬ್ಧವುಂಟಾಗಿ ಅವರು ಕೂತಿದ್ದ ಮನೆಯನ್ನೆಲ್ಲಾ ತುಂಬಿಕೊಂಡಿತು. ಅದಲ್ಲದೆ ಉರಿಯಂತಿದ್ದ ನಾಲಿಗೆಗಳು ವಿಂಗಡಿಸಿಕೊಳ್ಳುವ ಹಾಗೆ ಅವರಿಗೆ ಕಾಣಿಸಿ ಅವರಲ್ಲಿ ಒಬ್ಬೊಬ್ಬರ ಮೇಲೆ ಒಂದೊಂದಾಗಿ ಕೂತುಕೊಂಡವು. ಆಗ ಅವರೆಲ್ಲರೂ ಪವಿತ್ರಾತ್ಮ ಭರಿತರಾಗಿ ಆ ಆತ್ಮ ತಮ ತಮಗೆ ನುಡಿಯುವ ಶಕ್ತಿಯನ್ನು ಕೊಡುವ ಪ್ರಕಾರ ಬೇರೆ ಬೇರೆ ಭಾಷೆಗಳಿಂದ ಮಾತಾಡುವುದಕ್ಕೆ ಪ್ರಾರಂಭಿಸಿದರು" – (ಅ.ಕೃ. 2:1–4).**

ಸುವಾರ್ತಾ ಸಭೆಯ ಇತಿಹಾಸದಲ್ಲಿ ಪಂಚಾಶತ್ತಮ ದಿನವು ಅತ್ಯಂತ ಗಮನಾರ್ಹವಾದ ದಿನವಾಗಿದೆ. ನಮ್ಮ ವಿಮೋಚಕನು ಅಂದಿಗೆ ಐವತ್ತು ದಿನಗಳ ಹಿಂದೆ ಕಲ್ವಾರಿಯಲ್ಲಿ ಯಶಸ್ವಿಯಾಗಿ ಪೂರೈಸಿದ ತನ್ನ ಸಮರ್ಪಣೆಯ ಅರ್ಹತೆಯನ್ನು ತಂದೆಯ ಮುಂದೆ ತೋಡಿಕೊಂಡವನಾಗಿ ನಮಗಾಗಿ ದೇವರ ಮುಂದೆ ನಮ್ಮ ಮಹಾ ಯಾಜಕನಾಗಿ ಕಾಣಿಸಿಕೊಂಡನೆಂದು ತೋರಿಬರುತ್ತದೆ: ತಂದೆಯು ಸಹಾ ಈ ತ್ಯಾಗದ ಬಲಿಯನ್ನು ಸಂಪೂರ್ಣವಾಗಿ ಅಂಗೀಕರಿಸಿದ್ದಾನೆ ; ಇದರ ಪರಿಣಾಮವಾಗಿ ಯೇಸುವನ್ನು ಅಂಗೀಕರಿಸಿದ ಅಪೋಸ್ತಲರುಗಳು ಮತ್ತು ಎಲ್ಲಾ ವಿಶ್ವಾಸಿಗಳು, ತಂದೆ ದೇವರನ್ನು ಸಮೀಪಿಸಿ ಆತನ ಮಕ್ಕಳಾಗುವ (ಯೋಹಾನ 1:12) ಅಭಿಲಾಷೆಯುಳ್ಳವರಾಗಿದ್ದು ಈಗ ಆ ರೀತಿಯಲ್ಲಿ ಗ್ರಹಿಸಲ್ಪಟ್ಟಿದ್ದಾರೆ – ಪವಿತ್ರಾತ್ಮನು ಈ ರೀತಿಯಲ್ಲಿ ಅವರ ಅಂಗೀಕಾರಕ್ಕೆ ಸಾಕ್ಷಿ ಹೇಳುವವನಾಗಿದ್ದಾನೆ; ಆದುದರಿಂದ ಅದನ್ನು ದೇವರ ಕುಟುಂಬಕ್ಕೆ (ಪುತ್ರ ಪದವಿಗಾಗಿ) "**ದತ್ತು ಸ್ವೀಕಾರದ ಆತ್ಮ**" (**Spirit of adoption**) ಎಂದು ಕರೆಯಲಾಗುವುದು. ಇಂಥಾಃ ಪ್ರಮುಖವಾದ ಘಟನೆಯು ನಿರೂಪಿಸಲ್ಪಡುವುದು ಯುಕ್ತವಾಗಿತ್ತು. ಅಪೋಸ್ತಲರುಗಳು ಹಾಗೂ ನಂಬಿಗಸ್ತರು ಪವಿತ್ರಾತ್ಮನನ್ನು ಹೊಂದಿ ಕೊಳ್ಳುವುದು, ದೇವರ ಕೃಪೆಯ ಆತ್ಮನು ಅವರ ಹೃದಯಗಳನ್ನು ಪ್ರವೇಶಿಸುವುದು ಮುಖ್ಯವಾದುದು ಮಾತ್ರವಲ್ಲ ಇದರ ಒಂದು ಬಾಹ್ಯ ಪ್ರಕಟನೆಯೂ ಉಂಟಾಗಿ ಅದರಿಂದ ಅವರು ತೃಪ್ತಿಕರವಾದ ರುಜುವಾತನ್ನು ಹೊಂದಿಕೊಳ್ಳಬೇಕಾಗಿತ್ತು. ಇದು ಅವರಿಗಾಗಿ ಮಾತ್ರವಲ್ಲ, ನಂತರ ಬರುವ ಎಲ್ಲಾ ನಂಬಿಗಸ್ತರಿಗೂ ಸಹಾ, ಹಾಗೂ ದೇವರು ಸಭೆಯವರನ್ನು ತನ್ನ ಮಕ್ಕಳೂ ಕ್ರಿಸ್ತನ ಸಹ ಬಾಧ್ಯಸ್ತರೂ ಆಗಿ ಸಂಪೂರ್ಣವಾಗಿ ಅಂಗೀಕರಿಸಿದ್ದಾನೆ ಎಂಬ ಭರವಸೆಯನ್ನುಂಟುಮಾಡುವುದಾಗಿತ್ತು.

ಆದರೆ ಈ ಸಂಬಂಧದಲ್ಲಿ ವಾಕ್ಯದ ಯಾವುದೇ ಅರ್ಥದಲ್ಲಿ ಪವಿತ್ರಾತ್ಮನನ್ನು ತಂದೆಯ ಮತ್ತು ಮಗನಿಂದ ಬೇರೆಯಾದ ಒಬ್ಬ ವ್ಯಕ್ತಿಯನ್ನಾಗಿ ಮಾಡುವುದಿಲ್ಲ. ಇದಕ್ಕೆ ತೀರಾ ವ್ಯತಿರಿಕ್ತವಾಗಿ, ಪವಿತ್ರಾತ್ಮವು ಅವರೆಲ್ಲರ ಮೇಲೆ ಇಳಿದು ಬಂತು ಎಂಬ ಸತ್ಯವು ಪವಿತ್ರಾತ್ಮನು ಒಬ್ಬ ವ್ಯಕ್ತಿಯಲ್ಲ, ಅದು ಪ್ರಭಾವವು, ಒಬ್ಬ ವ್ಯಕ್ತಿಯಿಂದ ಹೊರಟು ಬಂದ ಶಕ್ತಿಯಾಗಿದೆ ಮತ್ತು ಇದು ದೇವರ ಪ್ರಭಾವವೂ, ಶಕ್ತಿಯೂ ಆಗಿದ್ದು ಆತನ ನೂತನ ಮಕ್ಕಳಲ್ಲಿ ಮತ್ತು ಅವರ ಮೇಲೆ ಪ್ರಯೋಗಿಸಲ್ಪಟ್ಟಿತು ಎಂಬ ಅಭಿಪ್ರಾಯವನ್ನುಂಟು ಮಾಡುತ್ತದೆ. ಇನ್ನೂ ಮುಂದುವರೆದು ಇದು ಅಪೋಸ್ತಲರ ವಿವಿಧ ಶಕ್ತಿ ಮತ್ತು ತಲಾಂತುಗಳು ಈ ಪ್ರಭಾವದಿಂದ ಉಜ್ಜೀವಿಸಲ್ಪಟ್ಟವು, ಚುರುಕುಗೊಳಿಸಲ್ಪಟ್ಟವು ಮತ್ತು ವಿಸ್ತಾರಗೊಂಡವು ಎಂಬುದಕ್ಕೆ ಸಾಕ್ಷಿಯಾಗಿದೆ.

ನಮ್ಮ ಕರ್ತನಾದ ಯೇಸುವು ಇಲ್ಲಿ ತನ್ನ ಜನರಿಗೆ 'ವರಗಳನ್ನು – ಪವಿತ್ರಾತ್ಮವರಗಳನ್ನು' ನೀಡಿದನೆಂದು ಅಪೋಸ್ತಲನು ವಿವರಿಸುತ್ತಾನೆ (ಎಫೆಸ 4:8; ಕೀರ್ತನೆ 68:18 ನೋಡಿರಿ). ಆತನ ಸ್ವಂತ ಜೀವದ ಮಹಾ ದಾನವನ್ನು ಈಗಾಗಲೇ ನೀಡಲಾಗಿದೆ ಮತ್ತು ಆ ಮೂಲಕ

ಸಮಸ್ತ ಲೋಕದ ವಿಮೋಚನಾ ಸ್ಥಾಪನೆಯ ಬೆಲೆಯನ್ನು ತೆತ್ತಾಗಿದೆ – ಈಡುಬಲಿಯಿಂದ ವಿಮೋಚನೆ ಹೊಂದಿದ ಅಸಂಖ್ಯಾತರಲ್ಲಿ ಒಂದು ಭಾಗವಾದ 'ಚಿಕ್ಕಹಿಂಡು' ವಿಶೇಷವಾಗಿ ಕ್ರಿಸ್ತನಿಗೆ ಆತನ ಜೊತೆವಾರಸುದಾರರಾಗಿ ಮತ್ತು ಆತನ ರಾಜ್ಯದಲ್ಲಿ ಆತನ ಸಂಗಡಿಗರಾಗಿ ನೀಡಲ್ಪಡುವವರಾಗಿದ್ದಾರೆ. ಈ ಚಿಕ್ಕಹಿಂಡಿನ ಆಯ್ಕೆಯು ಈಗಾಗಲೇ ಆರಂಭವಾಗಿದೆ ಮತ್ತು ಪಂಚಾಶತ್ತಮ ದಿನದಲ್ಲಿ ದೈವಾಶೀರ್ವಾದಕ್ಕಾಗಿ ಕಾದುಕೊಂಡಿದ್ದಂತೆ ಇವರುಗಳು ಸಹಾ ಕಾಯುತ್ತಿದ್ದಾರೆ. ಅವರ ಮಾನ್ಯತೆಯ ಸಮಯ ಇದೀಗ ಬಂದಿದೆ. ಇಲ್ಲಿ ತಂದೆಯಾದ ದೇವರು ಆತನ ಪವಿತ್ರಾತ್ಮನ ಪಾಲು ಕೊಡುವಿಕೆಯ ಪ್ರಭಾವ ಮತ್ತು ಶಕ್ತಿಯನ್ನು ಕ್ರಿಸ್ತನ ಸಭೆಯನ್ನು ಮಾನ್ಯಮಾಡಿದ್ದಾನೆ ಎಂಬುದರ ಅರ್ಥವು ವಿಶ್ವಾಸಿಗಳ ಸಂಧಾನ ಎಂಬ ಅಭಿಪ್ರಾಯವನ್ನು ನೀಡುತ್ತದೆ ; ಆದುದರಿಂದ ಇನ್ನು ಮೇಲೆ ಅವರನ್ನು ಪಾಪಿಗಳೆಂದಾಗಲೀ ಅನ್ಯರೆಂದಾಗಲೀ ಅಥವಾ ಸೇವಕರೆಂದಾಗಲೀ ನಡೆಸಿಕೊಳ್ಳುವುದಿಲ್ಲ. ಈಗ ಅವರು ದೇವರ ಮಕ್ಕಳಾಗಿ ಪರಲೋಕದ ವರಗಳಲ್ಲಿ ಪಾಲುದಾರರಾಗಿದ್ದಾರೆ. ಪವಿತ್ರಾತ್ಮನು, ಅದರ ಬುಗ್ಗೆ ಅಥವಾ ಮೂಲನಾದ ತಂದೆ ದೇವರಿಂದ ಉಕ್ಕುವ ಪವಿತ್ರ ಪ್ರಭಾವವು. ಪವಿತ್ರ ಶಕ್ತಿಯಾಗಿ ಸುರಿಯಲ್ಪಡುತ್ತದೆ ಎಂಬುದಾಗಿ ನಮಗೆ ತಿಳಿಸಲ್ಪಟ್ಟಿದೆ. ಪರಂತು, ದೇವರ ಪ್ರತಿಯೊಂದು ಆಶೀರ್ವಾದವೂ ನಮಗೆ ದೊರೆಯುವ ಮತ್ತು ಮುಂದೆಯೂ ದೊರೆಯಲಿರುವ ಆತನ ಗೌರವಾನ್ವಿತ ಪ್ರತಿನಿಧಿಯಾದ ಕರ್ತನಾದ ಯೇಸುಕ್ರಿಸ್ತನ ಮೂಲಕ ಯುಕ್ತವಾಗಿ ದೊರೆಯುತ್ತದೆ.

ಅಪೋಸ್ತಲನಾದ ಪೇತ್ರನು, ಪವಿತ್ರಾತ್ಮ ಸ್ಫೂರ್ತಿಯಿಂದ ಮಾತನಾಡುತ್ತಾ ನಮಗೆ ಈ ಬಗ್ಗೆ ವಿವರಗಳನ್ನು ನೀಡುವವನಾಗಿ ಪವಿತ್ರಾತ್ಮನು ತಂದೆಯದು ಮತ್ತು ಮಗನದು **"ಆತನು (ಯೇಸು ಕ್ರಿಸ್ತನು) ದೇವರ ಬಲಗೈಯಿಂದ ಉನ್ನತ ಸ್ಥಾನಕ್ಕೆ ಏರಿಸಲ್ಪಟ್ಟು ವಾಗ್ದಾನವಾಗಿದ್ದ ಪವಿತ್ರಾತ್ಮ ವರವನ್ನು ತಂದೆಯಿಂದ ಹೊಂದಿ ನೀವು ನೋಡಿ ಕೇಳುವುದನ್ನು ಸುರಿಸಿದ್ದಾನೆ"** (ಅ.ಕೃ. 2:33) ಎಂದಿದ್ದಾನೆ. ಅದೇ ಪ್ರಕಾರವಾಗಿ, ಪವಿತ್ರಾತ್ಮನ ದೀಕ್ಷಾಸ್ನಾನದ ಬಗ್ಗೆ ಹೆಚ್ಚಾದ ಒತ್ತಡ ಇರುವುದಿಲ್ಲ. ಇದು ಸಭೆಯ ಅಂಗೀಕಾರವನ್ನು ಗುರುತಿಸುತ್ತದೆ. ಇದಿಲ್ಲದೆ ನಮಗೆ ಕರ್ತನ ತ್ಯಾಗವನ್ನು ಅಂಗೀಕರಿಸಿರುವ ಮತ್ತು ನಮ್ಮ ನೀತಿನಿರ್ಣಯದ ಯಾವ ಸಾಕ್ಷ್ಯವೂ ಇರುವುದಿಲ್ಲ.

ಹೀಗಿದ್ದಾಗ್ಯೂ, ಅನೇಕ ನಿಷ್ಠಾವಂತ ಕ್ರೈಸ್ತರಲ್ಲಿರುವ ಸಾಮಾನ್ಯವಾದ ಆದರೆ ತಪ್ಪಾದ ಹಾಗೂ ದೇವರ ವಾಕ್ಯದಲ್ಲಿಲ್ಲದ ಅಭಿಪ್ರಾಯಗಳಿಗೆ ಅಂದರೆ ಪವಿತ್ರಾತ್ಮನ ದೀಕ್ಷಾಸ್ನಾನವನ್ನು ಅಡಿಗಡಿಗೆ ನಾವು ನಿರೀಕ್ಷಿಸಬೇಕು ಮತ್ತು ಅರಸಬೇಕು ಎಂಬುದಕ್ಕೆ ನಾವು ಹೆಚ್ಚು ನಿಶ್ಚಯಪೂರ್ವಕವಾಗಿ ವಿರೋಧ ವ್ಯಕ್ತಪಡಿಸಬೇಕಾಗುತ್ತದೆ. ಅಂಥಾಃ ನಿರೀಕ್ಷೆಗಳು ದೇವರ ವಾಕ್ಯದಲ್ಲಿ ನಮಗೆ ನೀಡಿರುವ ಯಾವುದೇ ವಾಗ್ದಾನಗಳ ಮೇರೆಗೆ ಅಸಮರ್ಥನೀಯ ವಾದುದು. ಅವುಗಳಲ್ಲಿ ನೀಡಿರುವ ದೈವಿಕ ವ್ಯವಸ್ಥೆಗೆ ಇದು ತೀವ್ರವಾಗಿ ಭಿನ್ನವಾಗಿದೆ. ದೇವರ ವಾಕ್ಯದಲ್ಲಿ ಪವಿತ್ರಾತ್ಮನ ಮೂರು ದೀಕ್ಷಾಸ್ನಾನದ ಮತ್ತು ಇವುಗಳ ಅಗತ್ಯತೆಗಳ ಬಗ್ಗೆ ಹೇಳಲಾಗಿದೆ ಎಂಬುದನ್ನು ನಾವು ಗಮನಿಸಬೇಕು. ಈ ಮೂರೂ ಒಂದೇ ದೀಕ್ಷಾಸ್ನಾನದ ಭಾಗಗಳಾಗಿವೆ (1) ನಮ್ಮ ಕರ್ತನಾದ ಯೇಸುಕ್ರಿಸ್ತನ ದೀಕ್ಷಾಸ್ನಾನ (2) ಪಂಚಾಶತ್ತಮ ಹಬ್ಬದಲ್ಲಿ ನಡೆದ ದೀಕ್ಷಾಸ್ನಾನ (3) ದೇವರ ಮಗನೆಂದು ಅಂಗೀಕರಿಸಲ್ಪಟ್ಟ ಮೊಟ್ಟಮೊದಲ ಅನ್ಯನಾದ ಕೊರ್ನೇಲ್ಯನ ದೀಕ್ಷಾಸ್ನಾನ. ಈ ಪವಿತ್ರಾತ್ಮ ದೀಕ್ಷಾಸ್ನಾನವನ್ನು ನಾವು ಈ ಕ್ರಮದಲ್ಲಿ ಪರೀಕ್ಷಿಸೋಣ :

(1) ನಮ್ಮ ಕರ್ತನ ಪವಿತ್ರಾತ್ಮ ಸ್ನಾನವು ಆತನ ದೈವಿಕ ಶಕ್ತಿಯ ಪಾಲುದಾರನಾಗುವಂತೆ ಆತನಿಗೆ ಅವಶ್ಯವಾಗಿದ್ದುದು ಮಾತ್ರವಲ್ಲ, ಆತನು ಒಬ್ಬ ದೇವರ ಪಾರುಪತ್ಯನಾಗಿರಲು ಮತ್ತು ಆತನ ಬಾಧ್ಯಸ್ಥರಲ್ಲಿ ಅತ್ಯಂತ ನಿಷ್ಠೆಯುಳ್ಳವನಾಗಿರಲು ಮತ್ತು ದೇವರ ಸ್ವಭಾವವನ್ನು ಪಡಕೊಳ್ಳಲು ಸಹಾ ಇದು ಅವಶ್ಯವಾಗಿತ್ತು; ಆದರೆ ಅಂಥಾಃ ಬಾಹ್ಯ ಪ್ರಕಟನೆಯು, ಆತನನ್ನು ಮಾನ್ಯಮಾಡುವುದು ಸಹಾ ಇತರರು ಆತನನ್ನು ದೇವರಿಂದ ಅಭಿಷೇಕಿಸಲ್ಪಟ್ಟವನು ಎಂದು ಗ್ರಹಿಸಿಸಲು ಸದಾ ಇದು ಸಮಂಜಸವಾಗಿದೆ. ಈ ಪ್ರಕಟನೆಯೆಂದರೆ ಪರಿವಾಳವೂ, ಪ್ರಕಾಶವೂ ಆತನ ಮೇಲೆ ಇಳಿದು ಬಂದುದು. ಸಾಮಾನ್ಯ ಜನರು ದೇವರ ಕೃಪೆಯಾದ ಈ ಪ್ರಕಟನೆಯನ್ನು ಕಣ್ಣಾರೆ ಕಂಡವರು ಎಂದು ನಮಗೆ ತಿಳಿದು ಬರುವುದಿಲ್ಲ; ದೈವಕೃಪೆಯು ಪ್ರಕಟಿಸುವುದೇನೆಂದರೆ, ಆ ಕಾಲದಲ್ಲಿ ಇಸ್ರೇಲಿನಲ್ಲಿ ಸುಧಾರಣಾ ಕಾರ್ಯವನ್ನು ನಿರ್ವಹಿಸುತ್ತಿದ್ದ, ಪ್ರವಾದಿಯೆಂದು ಪರಿಗಣಿಸಲ್ಪಟ್ಟಿದ್ದ, ಕರ್ತನ ಸೇವಕನಾದ ಸ್ನಾನಿಕನಾದ ಯೋಹಾನನು ಮಾತ್ರವೇ ಆತ್ಮನು ಯೇಸುವಿನ ಮೇಲೆ ಇಳಿದು ಬಂದುದನ್ನು ಕಂಡವನು ಮತ್ತು ಇದಕ್ಕೆ ಆತನೇ ಸಾಕ್ಷಿಹೇಳುವವನಾಗಿ – **"ದೇವರಾತ್ಮನು ಪಾರಿವಾಳದಂತೆ ಆಕಾಶದಿಂದ ಇಳಿಯುವುದನ್ನು ನೋಡಿದೆನು. ಅದು ಆತನ ಮೇಲೆ ನೆಲೆಗೊಂಡಿತು. ನನಗೂ ಆತನ ಗುರುತಿರಲಿಲ್ಲ.; ಆದರೆ ನೀರಿನ ಸ್ನಾನವನ್ನು ಮಾಡಿಸುವುದಕ್ಕೆ ನನ್ನನ್ನು ಕಳುಹಿಸಿದಾತನು – ಯಾವನ ಮೇಲೆ ಆತ್ಮವು ಇಳಿದು ಬಂದು ಇರುವುದನ್ನು ನೀನು ನೋಡುವಿಯೋ ಆತನೇ ಪವಿತ್ರಾತ್ಮದ ಸ್ನಾನವನ್ನು ಕೊಡುವವನು ಎಂದು ತಾನೇ ನನಗೆ ಹೇಳಿದನು. ನಾನು ಅದನ್ನು ನೋಡಿ ಈತನೇ ದೇವಕುಮಾರನೆಂದು ಸಾಕ್ಷಿಕೊಟ್ಟಿದ್ದೇನೆ"** (ಯೋಹಾನ 1:32–33) ಎಂದಿದ್ದಾನೆ.

(2) ಪಂಚಾಶತ್ತಮ ದಿನದಂದು ನಡೆದ ಪವಿತ್ರಾತ್ಮನ ದೀಕ್ಷಾಸ್ನಾನವು, ಸ್ನಾನಿಕನಾದ ಯೋಹಾನನು

ಯೇಸುವಿನಿಂದ ಮಾಡಲ್ಪಡಬೇಕಾದುದು ಎಂದು ವಿವರಿಸುವವನಾಗಿ **"ನಾನು ನಿಮಗೆ ನೀರಿನ ಸ್ನಾನ ಮಾಡಿಸಿದೆನು; ಆತನಾದರೋ (ಕ್ರಿಸ್ತನಾದರೋ) ನಿಮಗೆ ಪವಿತ್ರಾತ್ಮದ ಸ್ನಾನ ಮಾಡಿಸುವನು"** (ಮಾರ್ಕ 1:8) ಎಂದಿದ್ದಾನೆ. ಪೇತ್ರನು ಇದನ್ನು ದೃಢಪಡಿಸುವವನಾಗಿ ಕ್ರಿಸ್ತನು ತನ್ನ ಪವಿತ್ರಾತ್ಮನನ್ನು ಸುರಿಸಿದ್ದಾನೆ ಎಂದಿದ್ದಾನೆ. ಆತನು ಮಾತ್ರವೇ ಈ ರೀತಿ ಮಾಡಬಲ್ಲನು, ಯಾಕೆಂದರೆ ಆತನು ಈ ಲೋಕವನ್ನು ವಿಮೋಚಿಸಿದ್ದಾನೆ. ಸಮಸ್ತರನ್ನು ತನ್ನ ಅಮೂಲ್ಯ ರಕ್ತದ ಬೆಲೆ ತೆತ್ತು ಕೊಂಡುಕೊಂಡಿದ್ದಾನೆ. ಯಾರೂ ಆತನ ಮೂಲಕವಲ್ಲದೆ ದೇವರ ಬಳಿಗೆ ಬರಲಾರರು ಮತ್ತು ಏಕೆಂದರೆ ತಂದೆಯು ತೀರ್ಪುಮಾಡುವುದಿಲ್ಲ, ತೀರ್ಪು ಮಾಡುವ ಕಾರ್ಯವನ್ನು ತನ್ನ ಮಗನಿಗೆ ವಹಿಸಿಕೊಟ್ಟಿದ್ದಾನೆ. ಯಾಕೆಂದರೆ ಮಗನು ಅತ್ಯುನ್ನತ ಸ್ಥಾನಕ್ಕೆ ಏರಿಸಲ್ಪಟ್ಟಿದ್ದಾನೆ ಮತ್ತು ಆತನು ತಂದೆಯ ಪ್ರತಿನಿಧಿಯಾಗಿದ್ದು ತನ್ನ ಮೂಲಕವಾಗಿ ತಂದೆಯ ಬಳಿಗೆ ಬರುವವರನ್ನು ತಂದೆಯ ಪೂರ್ಣ ಸಾಂಗತ್ಯಕ್ಕೆ ಪರಿಚಯಿಸುವವನಾಗಿದ್ದಾನೆ. ಪವಿತ್ರಾತ್ಮನ ಮೂಲಕ ಸಭೆಗೆ ಉಂಟಾದ ಈ ದೀಕ್ಷಾಸ್ನಾನವು ಒಂದು ಸಾಕ್ಷವಾಗಿ ಅಗತ್ಯವಾಗಿತ್ತೆಂದು ನಾವೀಗಾಗಲೇ ನೋಡಿದ್ದೇವೆ. ಅದೇ ರೀತಿಯಲ್ಲಿ ಕರ್ತನಾದ ಯೇಸುವಿನ ದೀಕ್ಷಾಸ್ನಾನವನ್ನು ಕಣ್ಣಾರೆ ಕಂಡು ಸಾಕ್ಷಿನೀಡಬೇಕಾಗುತ್ತದೆ.

ರಭಸದಿಂದ ಬಂದ ಬಿರುಗಾಳಿಯು ಅವರು ಕೂತಿದ್ದ ಮನೆಯನ್ನು ಆವರಿಸಿಕೊಂಡು, ಉರಿಯಂತಿದ್ದ ನಾಲಿಗೆಗಳು ವಿಂಗಡಿಸಿಕೊಳ್ಳುವ ಹಾಗೆ ಅವರಿಗೆ ಕಾಣಿಸಿ ಅವರಲ್ಲಿ ಒಬ್ಬೊಬ್ಬರ ಮೇಲೆ ಒಂದೊಂದಾಗಿ ಕೂತುಕೊಂಡವು (ಅ.ಕೃ. 2:3) [ಬಹುಶಃ ಅಲ್ಲಿದ್ದವರು ಕರ್ತನ ವಿಶೇಷ ಪ್ರತಿನಿಧಿಗಳೂ ಆತನ ವಕ್ತಾರರೂ ಎಂದು ಮಾನ್ಯತೆ ಪಡೆದ ಹನ್ನೊಂದು ಮಂದಿ ಅಪೋಸ್ತಲರು ಮಾತ್ರವೇ (ವ. 14 ನೋಡಿರಿ).] ಇವುಗಳೆಲ್ಲವೂ ಪವಿತ್ರಾತ್ಮವಾಗಿರದೆ ಕೇವಲ ಅವರ ವಿವೇಕಕ್ಕೆ ಮಾತ್ರವೇ ಅದೃಶ್ಯ ರೂಪದಲ್ಲಿ ಉಂಟಾದ ಪ್ರಕಟನೆಯಾಗಿತ್ತು. ಶಾಂತಿಯ ಮತ್ತು ಪರಿಶುದ್ಧತೆಯ ಲಾಂಛನವಾದ ಪಾರಿವಾಳವು ಯೇಸುವಿನಲ್ಲಿ ದೇವರ ಪ್ರೀತಿಯ ಆತ್ಮನನ್ನು ಸೂಕ್ತವಾದ ರೀತಿಯಲ್ಲಿ ಪ್ರಕಟಿಸುವುದಾಗಿತ್ತು; ಉರಿಯಂತಿದ್ದ ನಾಲಿಗೆಗಳು ಪವಿತ್ರಾತ್ಮನ ಅಡಿಯಲ್ಲಿ ಅಪೋಸ್ತಲರ ನಿಯೋಗವನ್ನು ಮತ್ತು ಸಾಕ್ಷಿಯನ್ನು ಸೂಕ್ತ ರೀತಿಯಲ್ಲಿ ಪ್ರತಿನಿಧಿಸುವುದಾಗಿತ್ತು. (ಅ.ಕೃ. 2:32, 3:15. 5:32; 10:39,41, 13:31 ಇವುಗಳನ್ನು ನೋಡಿರಿ).

(3) ದೇವರ ಕಡೆಗೆ ಪರಿವರ್ತಿತನಾದ ಪ್ರಪಥಮ ಅನ್ಯಜನವಾಗಿದ್ದ ಕೊರ್ನೇಲ್ಯನ ಅಂಗೀಕಾರ ಸಮಯದಲ್ಲಿ ದೇವರ ಶಕ್ತಿಯ ವಿಶೇಷವಾದ ಪ್ರಕಟನೆಯೊಂದು ಅಗತ್ಯವಾಗಿತ್ತು (ಅ.ಕೃ. 10ನೇ ಅಧ್ಯಾಯ ಓದಿರಿ). ಯಾಕೆಂದರೆ, ಅಲ್ಲಿಯವರೆಗೆ ಅನ್ಯಜನರು ಯೆಹೂದ್ಯರಿಂದ ಬಹಿಷ್ಕರಿಸಲ್ಪಟ್ಟವರಾಗಿದ್ದರು ಮತ್ತು ಆ ಜನರು ದೇವರ ದಾಸರಾಗಿರಲೂ ಯೋಗ್ಯರಲ್ಲ ಎಂಬ ಭಾವನೆ ಯೆಹೂದ್ಯರಲ್ಲಿತ್ತು. ಇದರ ಪರಿಣಾಮವಾಗಿ ಯೆಹೂದ್ಯ ವಿಶ್ವಾಸಿಗಳಿಗೆ ಯಾರಾದರೂ ಅವರುಗಳೂ ಸಹಾ ಈ ಕೃಪೆಗೆ ಪಾತ್ರರಾದಾರೆಂದು ಪ್ರಕಟಿಸುವವರೆಗೆ ಈ ಅನ್ಯಜನರೂ ದೇವರ ಮಕ್ಕಳೆಂಬ ಉನ್ನತ ಸ್ಥಾನಕ್ಕೆ ಏರಿಸಲ್ಪಡುತ್ತರೆಂದು ಕಂಡುಬಂದಿರಲಿಲ್ಲ.

ಯೆಹೂದ್ಯರ ಎಪ್ಪತ್ತುವಾರಗಳ ಕೃಪಾಕಾಲದ ಅಂತ್ಯದವರೆಗೆ, ಅಂದರೆ ಪಂಚಾಶತ್ತಮ ದಿನದಿಂದ ಮೂರುವರೆ ವರ್ಷಗಳ ಕಾಲದವರೆಗೆ ಅನ್ಯಜನರನ್ನು ಅಂಗೀಕರಿಸುವುದು ದೇವರ ಯೋಜನೆಯಲ್ಲಿರಲಿಲ್ಲ ಎಂಬುದನ್ನು ನಾವೀಗಾಗಲೇ ನೋಡಿದ್ದೇವೆ* ಆದುದರಿಂದ ಅನ್ಯಜನರಿಂದ ಪರಿವರ್ತನೆಹೊಂದಿದವರು ಯೆಹೂದ್ಯರೊಂದಿಗೆ ಸರಿಸಮಾನವಾಗಿ ಜೊತೆ ಬಾಧ್ಯಸ್ಥರಾಗುತ್ತಾರೆಂಬ ಸತ್ಯದ ಸೂಚನೆಯು ಪಂಚಾಶತ್ತಮ ದಿನದ ಪವಿತ್ರಾತ್ಮನ ದೀಕ್ಷಾಸ್ನಾನದಲ್ಲಿ ಕಂಡುಬರುವುದಿಲ್ಲ.

ಅಪೋಸ್ತಲರಲ್ಲಿಯೂ, ಇತರ ಯೆಹೂದ್ಯರಲ್ಲಿಯೂ ಆಳವಾಗಿ ತಳವೂರಿದ್ದ ಅಸೂಯೆಯ ದೃಷ್ಟಿಯಿಂದ ಪಂಚಾಶತ್ತಮ ದಿನದಲ್ಲಿ ತೋರಿಬಂದಂಥಾಃ ಮತ್ತೊಂದು ಪ್ರಕಟನೆಯು ಅಪೋಸ್ತಲರ ತಿಳುವಳಿಕೆಗೆ ತೋರಿಬರುವುದು ಬಹಳ ಸಮಂಜಸವಾಗಿತ್ತು. ಕೊರ್ನೇಲ್ಯನ ಮೇಲೆಯೂ ಉರಿಯುಂತಿದ್ದ ನಾಲಿಗೆಯೊಂದು ಬಂದು ಕುಳಿತಿತು ಎಂದು ಊಹಿಸಬೇಕಾಗಿಲ್ಲ. ಆತನು ಬಹುಶಃ ಪಂಚಾಶತ್ತಮ ದಿನದಂದು ಯೆಹೂದ್ಯ ಪರಿವರ್ತಿತರ ಮೇಲೆ ಇಳಿದು ಬಂದ ವರಗಳಿಗೆ ಸಮವಾಗಿ ಕೆಲವೊಂದು ವರಗಳನ್ನು ಮಾತ್ರವೇ ಪಡೆದನು.

ಅನ್ಯಜನರು ಸಹಾ ಕರ್ತನಿಂದ ಅಂಗೀಕರಿಸಲ್ಪಟ್ಟರು ಎಂಬುದನ್ನು ನಾವು ತಿಳುಕೊಳ್ಳುವುದಾದರೂ ಹೇಗೆ? ಆತ್ಮನ ಸ್ನಾನ ಮತ್ತು ಪಂಚಾಶತ್ತಮ ದಿನದ ಆಶೀರ್ವಾದಗಳು ಕೇವಲ ಅಬ್ರಹಾಮನ ಸ್ವಾಭಾವಿಕ ಸಂತಾನದವರಾದ ವಿಶ್ವಾಸಿಗಳ ಮೇಲೆ ಮಾತ್ರವೇ ಬರುವುದಾದರೆ, ಇದು ನಮ್ಮನ್ನು ಸ್ವಾಭಾವಿಕವಾದ ಸಂತಾನದಲ್ಲಿ ಅನ್ಯಜನರಾದ ದೇವರ ಮಕ್ಕಳ ನೆಲೆಯ ಬಗ್ಗೆ ಸುವಾರ್ತಾ ಕಾಲದವರೆಗೂ ಅನುಮಾನದಲ್ಲಿ ಸಿಲುಕಿಸುತ್ತಿತ್ತು. ಆದರೆ ಕೊರ್ನೇಲ್ಯನಿಗುಂಟಾದ ಪವಿತ್ರಾತ್ಮನ ಸ್ನಾನದ ಮೂಲಕ ಕರ್ತನು ಇನ್ನುಮುಂದೆ ಯೆಹೂದ್ಯರಿಗೂ, ಅನ್ಯಜನರಿಗೂ, ಬಂಧಿತರಿಗೂ,

*Scripture Studies Vol II Chapter 7 ನೋಡಿರಿ.

ಮುಕ್ತರಾದವರಿಗೂ, ಗಂಡಸರಿಗೂ, ಹೆಂಗಸರಿಗೂ ಆತನೊಂದಿಗೆ ಕ್ರಿಸ್ತನಲ್ಲಿ ಅಂಗೀಕಾರದ ಬಗ್ಗೆ ಯಾವುದೇ ಬೇಧವಿರುವುದಿಲ್ಲ ಎಂಬುದನ್ನು ಪೂರ್ಣವಾಗಿ ಪ್ರಕಟಪಡಿಸುತ್ತಾನೆ. ಅನೀತಿಯವರಾದ ಯಾರೂ ತಮಗೆ ತಾವೇ ಅಂಗೀಕಾರಾರ್ಹರಲ್ಲ. ಆದ್ದರಿಂದ ದೇವರ ಪ್ರಿಯ ಕುಮಾರನ ಮೂಲಕ ಬರುವವರು ಮಾತ್ರವೇ ಅಂಗೀಕಾರಾರ್ಹರು (1 ಕೊರಿಂಥ 12:13).

ಪವಿತ್ರಾತ್ಮನ ಈ ಮೂರು ದೀಕ್ಷಾಸ್ನಾನವನ್ನು ಬಿಟ್ಟರೆ ಈ ವಿಷಯವಾಗಿ ವೇದದಲ್ಲಿ ಬೇರೆ ಯಾವ ಪ್ರಸ್ತಾಪವೂ ಇಲ್ಲ. ಪರಿಣಾಮವಾಗಿ ಬಹಳ ಮಂದಿ ದೇವರ ಮಕ್ಕಳಲ್ಲಿ ಬರುವ ಯೋಚನೆಯು ದೀಕ್ಷಾಸ್ನಾನವನ್ನು ನಿರೀಕ್ಷಿಸುವ, ಅದಕ್ಕಾಗಿ ಪ್ರಯಾಸಪಡುವ ಮತ್ತು ಮೇಲಿಂದ ಮೇಲೆ ಪವಿತ್ರಾತ್ಮನ ದೀಕ್ಷಾಸ್ನಾನವನ್ನು ಪ್ರಾರ್ಥಿಸುವದು ಅನಧಿಕೃತವಾಗಿದೆ. ಅಂತಹ ದೀಕ್ಷಾಸ್ನಾನವು ಅನವಶ್ಯಕವು. ಏಕೆಂದರೆ ಪಂಚಾಶತ್ತಮದಿಂದ ಆ ಒಂದು ದೀಕ್ಷಾಸ್ನಾನ, ಕೊರ್ನೇಲ್ಯನ ಮೇಲೆ ಅನುಭಂದಪಟ್ಟದ್ದು ಎಲ್ಲಾ ಅವಶ್ಯಕತೆಯನ್ನು ಪೂರೈಸುತ್ತದೆ. ಆ ದೀಕ್ಷಾಸ್ನಾನವು ಕೇವಲ ಆಶೀರ್ವಾದವನ್ನು ಆನಂದಿಸಿದ ವ್ಯಕ್ತಿಗಳ ಮೇಲೆ ಮಾತ್ರ ಬರಲಿಲ್ಲ. ಆದರೆ ಸಭೆಗಾಗಿ ಕ್ರಿಸ್ತನ ಶರೀರಪೂರ್ಣವಾಗಿ ಅದನ್ನು ಪ್ರತಿನಿಧಿಸಲು ಬಂದಿತು. ಪ್ರತಿನಿಧಿಸುವ ಕಾರ್ಯವು ಸಭೆಗೆ ಎರಡು ಭಾಗದಲ್ಲಿ ಬಂದಿರುವುದೆ ನಿಜ – ಪಂಚಾಶತ್ತಮದಂದು ಯೆಹೂದ್ಯ ನಂಬಿಗಸ್ತರಿಗೆ, ಮತ್ತು ಮೊದಲನೆಯ ಅನ್ಯಜನಾಂಗದ ನಂಬಿಗಸ್ತನಾದ ಕೊರ್ನೇಲ್ಯನ ಮನೆಗೆ. ನಮ್ಮ ಕರ್ತನು ಶಿಲುಬೆಗೇರುವ ಮೊದಲು ಪೇತ್ರನಿಗೆ ತಿಳಿಸಿದ ಹೇಳಿಕೆಗೆ ಸಮರಸವಾಗಿದೆ "ಪರಲೋಕ ರಾಜ್ಯದ ಬೀಗದ ಕೈಗಳನ್ನು ನಿನಗೆ ಕೊಡುವೆನು" (ಮತ್ತಾಯ 16:19). ಬೀಗದ ಕೈ ಬೀಗವನ್ನು ಬಿಚ್ಚುವ ತೆರೆಯುವ ಅಧಿಕಾರವನ್ನು ಸೂಚಿಸುತ್ತದೆ. ಕೈಗಳು ಎಂದಾಗ ಒಂದಕ್ಕಿಂತ ಹೆಚ್ಚಾದುದನ್ನು ತೆರೆಯುವುದನ್ನು ಸೂಚಿಸುತ್ತದೆ. ವಾಸ್ತವವಾಗಿ ಎರಡೇ ಬಾಗಿಲುಗಳು ಇವೆ; ಎರಡೇ ಬೀಗದ ಕೈಗಳು. ಅಪೋಸ್ತಲನಾದ ಪೇತ್ರನು ಎರಡೂ ಬೀಗದ ಕೈಗಳನ್ನು ಉಪಯೋಗಿಸಿದ್ದಾನೆ – ಕರ್ತನು ಮುಂತಿಳಿಸಿದಂತೆ ಯೆಹೂದ್ಯರಿಗೂ ಮತ್ತು ಅನ್ಯಜನರಿಗೂ ಬೀಗ ತೆರೆಯುವ ಕಾರ್ಯವನ್ನು ಮಾಡಿರುವನು. ಪಂಚಾಶತ್ತಮದಂದು ಆತನು ಮೊದಲ ಬೀಗದ ಕೈಯನ್ನು ಉಪಯೋಗಿಸಿರುವನು. ಅಲ್ಲಿ ಆತನು ಮೊದಲನೆಯ ಮುಖ್ಯವಾದ ಪ್ರಧಾನ ಉಪನ್ಯಾಸಕನು. 3000 ಜನರಿಗೆ ಆತ್ಮನು ನೂತನ ದೈವಸಂಕಲ್ಪವನ್ನು ಪರಿಚಯಿಸುವನು. ಒಡನೆಯೇ ಅವರೆಲ್ಲರೂ ನಂಬಿ ಆ ವಿಶೇಷ ಅನುಗ್ರಹಕ್ಕೆ ಒಳಹೊಕ್ಕರು (ಅ.ಕೃ. 2:37–41) ಮತ್ತೂ ಅನ್ಯಜನರಿಗೆ ಸುವಾರ್ತೆಯನ್ನು ಬೋಧಿಸಲು ತಕ್ಕ ಸಮಯ ಬಂದಾಗ, ಕರ್ತನು, ತನ್ನ ಆಯ್ಕೆಯಂತೆ ಪೇತ್ರನನ್ನು ಆ ಕೆಲಸಕ್ಕೆ ಕಳುಹಿಸಿದನು. ಕೊರ್ನೇಲ್ಯನಿಗೆ ಪೇತ್ರನನ್ನು ಕರೆಯಲು ಹೇಳಿದನು. ಹಾಗೂ ಕೊರ್ನೇಲ್ಯನಿಗೂ ಆತನ ಮನೆಯವರಿಗೂ ಸುವಾರ್ತೆಯನ್ನು ತಿಳಿಸಲು ಹೇಳಿದನು. ಈ ಸಂದರ್ಭದಲ್ಲಿ ಪೇತ್ರನು ಎರಡನೆಯ ಕೀಲಿಯನ್ನು ಉಪಯೋಗಿಸಿದನು. ಅನ್ಯಜನಾಂಗಕ್ಕೆ ಸುವಾರ್ತೆಯ ಬಾಗಿಲನ್ನು ತೆರೆದನು. ದೇವರು ಅದ್ಭುತವಾಗಿ ತನ್ನ ಪವಿತ್ರಾತ್ಮವನ್ನು ಅನ್ಯಜನಾಂಗದವರಲ್ಲಿ ಕೊರ್ನೆಲನಿಗೆ ಮತ್ತು ಇತರ ಪ್ರತಿಷ್ಠಿತ ನಂಬಿಗಸ್ತರಿಗೆ ಪ್ರಕಟಿಸಿ ಅದಕ್ಕೆ ಸಾಕ್ಷಿಯಾದನು.

ಪವಿತ್ರಾತ್ಮನ ದೀಕ್ಷಾಸ್ನಾನದ ಬಗ್ಗೆ ಉಚಿತವಾದ ಆಲೋಚನೆ ಏನೆಂದರೆ, ಅದು ತುಂಬಿ ಹೊರಸೂಸುವಂಥಾದ್ದು, ಚೆಲ್ಲಿಹೋಗುವಂಥಾದ್ದು, ಅಭಿಷೇಕಪಡಿಸುವಂಥಾದ್ದು, ಆದಾಗ್ಯೂ ಇದು ಸಂಪೂರ್ಣವಾದುದು (ದೇಹದ ಎಲ್ಲಾ ಸದಸ್ಯರನ್ನು ಆವರಿಸುವಂಥಾದ್ದು) ಇದನ್ನು ಯುಕ್ತವಾದ ರೀತಿಯಲ್ಲಿ 'ಮುಳುಗಿಸುವಿಕೆ' ಅಥವಾ 'ದೀಕ್ಷಾಸ್ನಾನ' ಎಂದು ಹೆಸರಿಸಬಹುದು. ಇದೇ ರೀತಿಯ ಅಭಿಷೇಕ ಅಥವಾ ದೀಕ್ಷಾಸ್ನಾನವು ಸಭೆಯ ಮೇಲೆ ಯುಗದುದ್ದಕ್ಕೂ ಜಾರಿಯಲ್ಲಿದ್ದು ಅಭಿಷೇಕಗೊಂಡ ದೇಹದ ಅಂಗಾಗಗಳಾಗಿ ಬರುವವರ ಮೇಲೆ ಅಂದಿನಿಂದ ಇಂದಿನವರೆಗೂ ಆವರಿಸಲ್ಪಟ್ಟಿದೆ, ವ್ಯಾಪಿಸಲ್ಪಟ್ಟಿದೆ, ಪವಿತ್ರಗೊಳಿಸುವುದಾಗಿದೆ, ಆಶೀರ್ವಾದದಾಯಕವಾಗಿದೆ. ಇದು ಕೊನೆಯ ಸದಸ್ಯನು ಸ್ವೀಕರಿಸಿ ಪೂರ್ತಿಯಾಗಿ ಅಭಿಷೇಕ ಹೊಂದುವವರೆಗೂ ಮುಂದುವರೆಯುತ್ತದೆ. ಅಪೋಸ್ತಲನಾದ ಯೋಹಾನನು ಈ ಪವಿತ್ರ ಸ್ನಾನದ ಬಗ್ಗೆ ಮಾತನಾಡುತ್ತಾ ಇದು ಅಭಿಷೇಕಗೊಳಿಸುವಂಥಾದ್ದು ಎಂದು ಹೇಳುವಂತೆ – **"ಆತನಿಂದ ನೀವು ಹೊಂದಿದ ಅಭಿಷೇಕವು ನಿಮ್ಮಲ್ಲಿ ನೆಲೆಗೊಂಡಿರುವುದರಿಂದ ಯಾವನಾದರೂ ನಿಮಗೆ ಉಪದೇಶ ಮಾಡುವುದು ಅಗತ್ಯವಿಲ್ಲ"** (1 ಯೋಹಾನ 2:27) ಎಂದಿದ್ದಾನೆ. ಆತನು ನೀವು ಸ್ವೀಕರಿಸುವ ಅನೇಕ ಅಭಿಷೇಕಗಳ ಬಗ್ಗೆ ಹೇಳುವುದಿಲ್ಲ ಆದರೆ ದೈವಿಕ ವ್ಯವಸ್ಥೆಗೆ ಅನುಗುಣವಾಗಿ ಸಾಮರಸ್ಯಗೊಳಿಸುವ ಅಭಿಷೇಕದ ಬಗ್ಗೆಯಷ್ಟೇ ಹೇಳುವವನಾಗಿದ್ದಾನೆ.

ದೈವಿಕ ದೃಷ್ಟಿಕೋನದಂತೆ ಸಮಗ್ರ ಸಭೆಯನ್ನು ಒಂದಾಗಿ – ಪೂರ್ಣವಾದುದೆಂದು ಪರಿಗಣಿಸಲಾಗಿದೆ. ಯಾಕೆಂದರೆ **"ಹೇಗೆ ದೇಹವು ಒಂದಾಗಿದ್ದರೂ ಅದಕ್ಕಿರುವ ಅಂಗಗಳು ಅನೇಕವಾಗಿವೆಯೋ, ಹೇಗೆ ದೇಹದ ಅಂಗಗಳೆಲ್ಲವೂ ಅನೇಕವಾಗಿದ್ದು ಒಂದೇ ದೇಹವಾಗಿದೆಯೋ ಹಾಗೆಯೇ, ಕ್ರಿಸ್ತನು"** (1 ಕೊರಿಂಥ 12:12 ಮತ್ತು ವ: 27 ಸಹಾ ನೋಡಿರಿ) ಎಂದು ಬರೆಯಲ್ಪಟ್ಟಿದೆ. ಈ ಪ್ರಸ್ತಾಪದ ದೇವರ ವಾಕ್ಯದ ಪ್ರಸ್ತುತಿಯ ಆಲೋಚನೆಗಳಿಗೆ ಸಾಮರಸ್ಯವಾಗಿ ದೇವರು ನಮ್ಮನ್ನು ವ್ಯಕ್ತಿಗತವಾಗಿ ಪರಿಗಣಿಸುವವನಾದಾಗ್ಯೂ, ಅನೇಕ ವಿಧದಲ್ಲಿ

ವ್ಯಕ್ತಿಗತವಾಗಿ ನಮ್ಮೊಡನೆ ವ್ಯವಹರಿಸುವವನಾದರೂ, ನಾವು ನಮ್ಮ ತಂದೆಯ ಮುಂದೆ ನಿಲ್ಲುವಾಗ ಅದು ಏಕ ಪ್ರಮಾಣವಾಗಿರದೆ ಅದು ಒಂದು ಪ್ರಮಾಣದ ಅಂಗ ಅಥವಾ ಭಾಗದಂತಿರುತ್ತದೆ ಮತ್ತು ಆ ಪ್ರಮಾಣವು ಸಭೆಯೆಂಬ ದೇಹದ ಶಿರಸ್ಸಾಗಿರುವ ಕ್ರಿಸ್ತನಾಗಿದ್ದಾನೆ. ಆದುದರಿಂದ ನಾವು ನಂಬಿದ ಮೇಲೆ ನಮ್ಮ ಮುಂದಿನ ಹೆಜ್ಜೆಯು ಕ್ರಿಸ್ತನ ದೇಹವನ್ನು ಸೇರಿಕೊಳ್ಳುವುದು ಅಂದರೆ ಆತನ ದೇಹದೊಳಗೆ ದೀಕ್ಷಾಸ್ನಾನ ಹೊಂದಿಕೊಳ್ಳುವುದು.

ನಾವಿಲ್ಲಿ ದೀಕ್ಷಾಸ್ನಾನದ ಸಾಮಾನ್ಯವಾದ ಪ್ರಸ್ತಾಪವನ್ನು ನಮ್ಮ ಮುಂದಿನ ಪರಿಗಣನೆಗೆ ಕಾದಿರಿಸುವ ಪ್ರಯುಕ್ತ ಈಗ ಚರ್ಚಿಸುವುದಿಲ್ಲ. ಆದರೆ ವಿಶ್ವಾಸಿಗಳನ್ನು ಕ್ರಿಸ್ತನ ದೇಹದೊಳಕ್ಕೆ ಅಭಿಷೇಕಿಸಲ್ಪಡುವಂತೆ ಮತ್ತು ಆ ಮೂಲಕ ಅವರುಗಳು ಪವಿತ್ರಾತ್ಮನ ಸ್ನಾನದೀಕ್ಷೆಯೊಳಗೆ ಬರುವಂತೆ ಅಹ್ವಾನಿಸಲಾಗಿದೆ ಎಂಬ ಸತ್ಯವನ್ನು ಗಮನಿಸಬೇಕಾಗುತ್ತದೆ. ಪವಿತ್ರಾತ್ಮ ಎಂಬುದು ಒಂದು ವ್ಯಕ್ತಿಯಾಗಿರದೆ ಅದು ಸಭೆಯು ಹೊಂದಿರುವ ಒಂದು ಶಕ್ತಿಯಾಗಿರುವ ಕಾರಣ, ಈ ಆಶೀರ್ವಾದ ಹೊಂದಿದ ಎಲ್ಲರೂ ಈ ಸಭೆಯ ಸಂಬಂಧಕ್ಕೆ ಬರಲೇಬೇಕಾಗುತ್ತದೆ. – ಕ್ರಿಸ್ತನ ಶರೀರ, ಇಲ್ಲವಾದಲ್ಲಿ ಇದನ್ನು ಹೊಂದಿಕೊಳ್ಳಲಾಗದು. ನಾವು ಈ ಲೋಕದ ಸಭೆಯೊಂದರ ಸದಸ್ಯರಾಗುವುದರ ಮೂಲಕ ಅಂದರೆ ಮೆಥೋಡಿಸ್ಟ್ ದೇಹ, ಪ್ರೆಸ್ಬಿಟೇರಿಯನ್ ದೇಹ. ರೋಮನ್ ಕಥೋಲಿಕ್ ದೇಹ ಅಥವಾ ಮಾನವ ಸಂಸ್ಥೆಯೊಂದರ ದೇಹ ಅಥವಾ ಸದಸ್ಯರಾಗುವುದರ ಮೂಲಕ ಎಂಬ ಅರ್ಥವಲ್ಲ. ನಾವು ಪವಿತ್ರ ಕ್ರೈಸ್ತ ಸಭೆಯ ಸದಸ್ಯರಾಗಬೇಕು ಎಂಬುದು ಇದರ ಅರ್ಥ. ಇದರ ಸದಸ್ಯರುಗಳನ್ನು ಅವರು ಹೊಂದಿರುವ ಪ್ರೀತಿಯ ಪವಿತ್ರಾತ್ಮನ ದೆಸೆಯಿಂದ ಖಚಿತವಾಗಿ ಗುರುತಿಸಬಹುದು – ನಾವು ಈ ಹಿಂದೆ ಕಂಡುಕೊಂಡಂತೆ ಅದರ ವಿವಿಧ ಫಲಗಳ ದೆಸೆಯಿಂದ ಅವರನ್ನು ಪ್ರಾಮಾಣೀಕರಿಸಲೂ ಬಹುದು.

ಕ್ರಿಸ್ತನೊಂದಿಗೆ ನಿಜವಾಗಿ ಯಾರು ಅನ್ಯೋನ್ಯತೆ ಹೊಂದಿಕೊಳ್ಳುತ್ತಾರೋ, ಮತ್ತು ಆ ಮೂಲಕ ಕ್ರಿಸ್ತನ ದೇಹದ ವಿವಿಧ ಅಂಗಗಳೊಡನೆ ಅನ್ಯೋನ್ಯತೆಯಲ್ಲಿರುತ್ತಾರೋ ಅಂಥವರೂ ಪ್ರಸ್ತುತದಲ್ಲಿ ಅಥವಾ ಭವಿಷ್ಯದಲ್ಲಿ ಪಂಚಾಶತ್ತಮ ಆಶೀರ್ವಾದಗಳನ್ನು ಬೇಡಿಕೊಳ್ಳುವ ಅಗತ್ಯವಿರುವುದಿಲ್ಲ. ಆದರೆ ಅವರು ಸಂತೋಷ ಮತ್ತು ದೃಢವಿಶ್ವಾಸದೊಡನೆ ಮೂಲ ಪಂಚಾಶತ್ತಮ ದಿನದ ಮತ್ತು ಕೊರ್ನೇಲ್ಯನು ಹೊಂದಿದ ಆಶೀರ್ವಾದಗಳ ಕಡೆಗೆ ಅವುಗಳು ತಂದೆಯಾದ ದೇವರು ಕ್ರಿಸ್ತನ ಮೂಲಕವಾಗಿ ಅವರನ್ನು ತನ್ನ ಸಭೆಯೆಂದು ಅಂಗೀಕಾರ ಮಾಡಿದುದರ ಒಟ್ಟಾರೆಯಾದ ಸಾಕ್ಷ್ಯಗಳು ಎಂಬಂತೆ ಹಿಂತಿರುಗಿ ನೋಡಬಹುದು; ದೈವಿಕ ವ್ಯವಸ್ಥೆಯಿಂದ ಎಲ್ಲರೂ ಪೂರ್ಣ ತೃಪ್ತರಾಗ ಬೇಕಾಗುತ್ತದೆ. ತಮ್ಮ ತಪ್ಪಾದ ಆಲೋಚನೆಯ ದೆಸೆಯಿಂದ ಆತನ ಚಿತ್ತಕ್ಕೆ ವಿರೋಧವಾಗಿ ಅನೇಕ ಪಂಚಾಶತ್ತಮ ದಿನಗಳನ್ನು ಬೇಡಿಕೊಳ್ಳುವವರ ಬಗ್ಗೆ ನಮ್ಮ ಕರ್ತನು ಕೋಪಗೊಳ್ಳುತ್ತಾನೆಂದು ನಾವು ಹೇಳುತ್ತಿಲ್ಲ. ಬದಲಾಗಿ ಆತನು ಅವರ ಅಜ್ಞಾನದ ಬಗ್ಗೆ ಮತ್ತು ಮಾರ್ಗತಪ್ಪಿದ ಪ್ರಾರ್ಥನೆಗಳ ಬಗ್ಗೆ ಸಹಾನುಭೂತಿಯುಳ್ಳವನಾಗಿದ್ದಾನೆ ಮತ್ತು ಆತನು ತನ್ನ ಸ್ವಂತ ಯೋಜನೆಗಳನ್ನು ಮತ್ತು ಏರ್ಪಾಟಗಳನ್ನು ಬದಲಾಯಿಸದೆ, ಅವರ ತಪ್ಪಾದ ನಿರೀಕ್ಷೆಗಳು ಮತ್ತು ಅವರು ಆತನ ಮಾತಿನ ಬಗ್ಗೆ ಅವರ ನಿರ್ಲಕ್ಷ್ಯ ಇವುಗಳು ಅನುಮತಿಸುವಷ್ಟು ಆಶೀರ್ವಾದಗಳನ್ನು ಅವರ ಮೇಲೆಯೂ ಸುರಿಸುತ್ತಾನೆ ಮತ್ತು ದೈವಿಕ ಅನ್ಯೋನ್ಯತೆಗಾಗಿ ಅವರ ಆತ್ಮಗಳ ರೋಧನವನ್ನು ಆತನು ಅಂಗೀಕರಿಸುತ್ತಾನೆ ಎಂದು ಯೋಚಿಸಿಕೊಳ್ಳಬೇಕು.

ಆತ್ಮೀಕ ಸ್ನಾನಕ್ಕಾಗಿ ನಿರಂತರವಾಗಿ ಪ್ರಾರ್ಥಿಸುತ್ತಿರುವ ನಮ್ಮ ಪ್ರೀತಿಯ ಸ್ನೇಹಿತರುಗಳು ಗಮನಿಸಬೇಕಾಗಿರುವುದು ಅಪೋಸ್ತಲರುಗಳು ಭವಿಷ್ಯದಲ್ಲಿ ಇಂಥಾಃ ಮತ್ತೊಂದು ಪಂಚಾಶತ್ತಮಕ್ಕಾಗಿ ಪ್ರಾರ್ಥಿಸಲಿಲ್ಲ, ಅಥವಾ ಆ ಬಗ್ಗೆ ಸಭೆಗೆ ಪ್ರಾರ್ಥಿಸಲು ಉಪದೇಶಿಸಲೂ ಇಲ್ಲ ಎಂಬುದನ್ನು ಎಂದೂ ಗಮನಿಸದಿರುವುದು ಆಶ್ಚರ್ಯವಾಗಿದೆ. ಅಂಥಾಃ ಸ್ನೇಹಿತರುಗಳು ತಾವು ಸ್ಫೂರ್ತಿಭರಿತ ಅಪೋಸ್ತಲರುಗಳಿಗಿಂತಲೂ ಹೆಚ್ಚು ಬುದ್ಧಿವಂತರೆಂದು, ಅವರಿಗಿಂತಲೂ ಪವಿತ್ರರು ಮತ್ತು ಪವಿತ್ರಾತ್ಮಭರಿತರಾಗಲು ತಾವುಗಳೂ ಇನ್ನೂ ಹೆಚ್ಚಿನ ಆಕಾಂಕ್ಷಿಗಳು ಎಂದು ಭಾವಿಸಿದ್ದಾರೆಯೋ? ಅವರಲ್ಲಿ ಅಂಥಾಃ ಯಾವುದೇ ಅಹಂಭಾವನೆಗಳಿಂದ ಕೂಡಿದ ಊಹನಾ ಭಾವನೆಗಳು ಇರಲಿಕ್ಕಿಲ್ಲ ಮತ್ತು ಅವರ ಎಲ್ಲಾ ಭಾವನೆಗಳೂ ಮುಗ್ಧ ಬಾಲಕರ ಭಾವನೆಗಳಾಗಿವೆ ಎಂದು ನಾವು ನಂಬುತ್ತೇವೆ. ಈ ಮುಗ್ಧ ಮಕ್ಕಳು ಅಲೋಚನೆಗಳಿಲ್ಲದೆ, ಕೆಲವೊಮ್ಮೆ ಮುಂಗೋಪಗೊಂಡವರಾಗಿ ಅನಾವಶ್ಯಕವಾಗಿ ಮತ್ತು ಅವರಿಗೆ ನೀಡಲಾಗದ ಮತ್ತು ವಾಗ್ದಾನಿಸದ ಆಶೀರ್ವಾದಗಳಿಗಾಗಿ ಮತ್ತು ಕರುಣೆಗಳಿಗಾಗಿ ತಮ್ಮ ದಯಾಪರ ತಂದೆತಾಯಿಗಳಿಗೆ ಕೀಟಲೆ ಮಾಡುವವರಾಗಿದ್ದಾರೆ.

## ಪವಿತ್ರಾತ್ಮನ ಸರ್ವಸಮಾನ್ಯವಾದ ದೀಕ್ಷಾಸ್ನಾನ
## The General Baptism of the Spirit

**"ತರುವಾಯ ನಾನು ಎಲ್ಲಾ ಮನುಷ್ಯರ ಮೇಲೆ ನನ್ನ ಆತ್ಮವನ್ನು ಸುರಿಸುವೆನು"** (ಯೋವೇಲ 2:28)

ಕ್ರಿಸ್ತನ ಅಮೂಲ್ಯ ರಕ್ತದಿಂದ ಬಿಡುಗಡೆ ಹೊಂದಿಕೊಂಡ ಪಾಪಿಗಳ ಸಂತಾನದವರಿಗೂ, ಸರ್ವಶಕ್ತನಾದ ದೇವರಿಗೂ ಪವಿತ್ರಾತ್ಮನೇ ಪುನಃ ಸಂಧಾನದ ವಾಹಿನಿಯಾಗಿರತಕ್ಕದ್ದು. ಕ್ರಿಸ್ತನ ಈ ಮಹಾ

ಬಲಿದಾನದ ಉದ್ದೇಶವು ದೇವರು ನ್ಯಾಯವಂತನಾಗಿದ್ದು ಮತ್ತು ತನ್ನನ್ನು ನಂಬುವವರ ಮತ್ತು ಕ್ರಿಸ್ತನ ಮೂಲಕ ತಂದೆಯ ಬಳಿಗೆ ಬರಲು ಬಯಸುವವರ ಬಗ್ಗೆ ಇನ್ನೂ ಹೆಚ್ಚು ನ್ಯಾಯವಂತನಾಗುವ ದಾರಿಯೊಂದನ್ನು ತೆರೆಯುವುದಾಗಿದೆ. ಹೀಗಾಗಿ ಒಬ್ಬ ಮಹಿಮೆಹೊಂದಿದ ಮಧ್ಯಸ್ಥಗಾರನಾಗಿ ಆತನ ಕಾರ್ಯವು ವಿಮೋಚನೆಗೊಂಡ ಸಂತಾನದ ಅನೇಕರು ಪೂರ್ಣ ಜ್ಞಾನ ಮತ್ತು ಅವಕಾಶಗಳು ದೊರೆತಾಗ ಈ ಸಹವಾಸಕ್ಕೆ ಹಿಂತಿರುಗಲು ಸಿದ್ಧರಾದವರನ್ನು ತಂದೆಯಾದ ದೇವರೊಂದಿಗೆ ಪೂರ್ಣ ಸಹವಾಸಕ್ಕೆ ತರುವಂಥಾದ್ದಾಗಿದೆ. ಪತನಗೊಂಡ ಜನಾಂಗದವರನ್ನು ದೇವರ ಸಹವಾಸಕ್ಕೆ ಹಿಂದಿರುಗಿಸುವ ಈ ಕಾರ್ಯವನ್ನು ಎರಡು ಭಾಗಗಳನ್ನಾಗಿ ಮಾಡಿರುವುದನ್ನು ನಾವು ನೋಡಬಹುದು (1) ಈ ಸುವಾರ್ತಾ ಯುಗದ ಸಭೆ (2) ಬರಲಿರುವ ಮಿಲಿಯಾಂತರ ಯುಗದಲ್ಲಿ ಮಾನವ ಜಾತಿಯ ಉಳಿದವರಲ್ಲಿ ಇಚ್ಛೆಯುಳ್ಳ ಅನೇಕರು.

ದೇವರು ಪಾಪವನ್ನು ಕ್ಷಮಿಸುತ್ತಾನೆ ಮತ್ತು ಅವುಗಳನ್ನು ಮನ್ನಿಸಿಬಿಡುತ್ತಾನೆ ಮತ್ತು ಪಾಪಿಗಳಾದ ನಮ್ಮನ್ನು ಆತನ ಕೃಪಾಸಹವಾಸಕ್ಕೆ ಹಿಂತಿರುಗಲು ಅನುಮತಿಸುತ್ತಾನೆ ಎಂಬುದು ಈ ಸಾಮರಸ್ಯದ ತಳಹದಿಯಲ್ಲ ಎಂದು ನಾವು ಕಂಡುಕೊಂಡಿದ್ದೇವೆ. ಆದರೆ ಪಾಪಿಗಳು ತಮ್ಮ ಪಾಪಗಳನ್ನು ತ್ಯಜಿಸಿಬಿಟ್ಟು, ದೇವರ ನೈತಿಕ ಮಟ್ಟವನ್ನು ಹೃದಯ ಪೂರ್ವಕವಾಗಿ ಒಪ್ಪಿಕೊಳ್ಳಬೇಕು ಮತ್ತು ಆತನ ಪೂರ್ಣ ಸಾಂಗತ್ಯಕ್ಕೆ ಹಿಂತಿರುಗಬೇಕು; ಹೀಗಾಗಿ ಅವರುಗಳು ನೇಮಿತ ವಾಹಿನಿಗಳ ಮೂಲಕ ಮತ್ತು ಕ್ರಿಸ್ತ ಯೇಸುವಿನ ಮೇಲ್ವಿಚಾರಣೆಯಲ್ಲಿ ಪರಲೋಕದ ತಂದೆಯ ಪವಿತ್ರಾತ್ಮನನ್ನು, ಮನಸ್ಸನ್ನು, ಚಿತ್ತವನ್ನು, ಪ್ರವೃತ್ತಿಗಳನ್ನು ಬಯಸಿ ಅವುಗಳನ್ನು ಪಡಕೊಳ್ಳುತ್ತಾರೆ ಮತ್ತು ತಮ್ಮ ಮನಸ್ಸುಗಳನ್ನು ನವೀಕರಿಸಿಕೊಳ್ಳುವುದರ ಮೂಲಕ ಪರಿವರ್ತನೆ ಹೊಂದಿಕೊಳ್ಳುತ್ತಾರೆ. ಇದನ್ನು, ಸಭೆಗೆ ನಾವು ದೇವರ ಯೋಜನೆಯಾಗಿ ಕಂಡುಕೊಂಡಿದ್ದೇವೆ ಮತ್ತು ಇದು ಮುಂದಿನ ಯುಗದಲ್ಲಿ ತನ್ನೊಡನೆ ಲೋಕದ ಪುನಃ ಸಂಧಾನಕ್ಕಾಗಿರುವ ದೇವರ ಯೋಜನೆಯಾಗಿದೆಯೆಂದು ನಮ್ಮ ಕರ್ತನಾದ ಕ್ರಿಸ್ತ ಯೇಸುವು ಸಹಾ ಪ್ರಕಟಿಸಿದ್ದಾನೆ. ದೇವರ ಧರ್ಮನಿಯಮಗಳ ಒಂದು ಬಿಂದುವನ್ನಾದರೂ ಮಾರ್ಪಡಿಸಲಾಗದು; ಪಾಪ ಮತ್ತು ಅಸಮರ್ಪಕತೆಗಳನ್ನು ಕ್ಷಮಿಸಲಾಗದು ಮತ್ತು ಅವುಗಳನ್ನು ನೀತಿವಂತಿಕೆ ಮತ್ತು ಸಮರ್ಪಕತೆಗಳೆಂದು ಪರಿಗಣಿಸಲಾಗದು.

ಆದಾಮನ ಪಾಪದ ಸಲುವಾಗಿ ಕಳಕೊಂಡ ದೈವ ಸ್ವರೂಪದ ಸುಧಾರಣೆ ಮತ್ತು ಪುನಃಸ್ಥಾಪನೆಯ ಸಲುವಾಗಿ ಮಾನವ ಜಾತಿಯ ಈ ಪ್ರಪಂಚವು ಕ್ರಿಸ್ತನ ಕೈಯಲ್ಲಿರುವುದು. ಪುನಃ ದೇವರ ಸಾಮರಸ್ಯಕ್ಕೆ ಹಿಂತಿರುಗಿಸುವ ಸಾಧನದ ಭಾಗವಾಗಿ, ಮಾನವ ಜಾತಿಯನ್ನು ಭದ್ರವಾಗಿ ಬಂಧಿಸಿರುವ ಮತ್ತು ಕುರುಡಾಗಿಸಿರುವ ಸೈತಾನನ ಪ್ರಭಾವವನ್ನು ತೆಗೆದುಹಾಕಲಾಗುವುದು (2 ಕೊರಿಂಥ 4:4 ; ಪ್ರಕಟನೆ 20:2 ಇವುಗಳನ್ನು ನೋಡಿರಿ). ಇದಾದ ನಂತರ ಈ ಲೋಕವು ವಂಚನೆ, ತಪ್ಪು, ಅಪರಾಧಗಳು, ಅಜ್ಞಾನ ಮತ್ತು ಮೂಢ ನಂಬಿಕೆಗಳು ಇವುಗಳ ಆತ್ಮನ ಪ್ರಭಾವದಲ್ಲಿರದೆ ಅದು ಸತ್ಯ, ನೀತಿವಂತಿಕೆ ಮತ್ತು ಪ್ರೀತಿಯ ಆತ್ಮನ ಪ್ರಭಾವಕ್ಕೆ ಒಳಗಾಗುತ್ತದೆ. ಮಾನವರ ಹೃದಯಗಳ ಮೇಲೆ ಕೋಪವು, ಅಸೂಯೆ ಮತ್ತು ಮತ್ಸರಗಳು, ಕಚ್ಚಾಟ ಹಾಗೂ ಸ್ವಾರ್ಥತೆ ಇವುಗಳನ್ನುಂಟುಮಾಡಬಲ್ಲ ಬಾಹ್ಯ ಪ್ರಭಾವಗಳ ಒತ್ತಡ ಉಂಟಾಗುವುದಕ್ಕಿಂತ ಇವುಗಳು ಹತೋಟಿಯಲ್ಲಿ ಇಡಲ್ಪಡುತ್ತವೆ ಮತ್ತು ಅಂತಿಮವಾಗಿ ಆ ಪ್ರಭಾವಗಳು ನಾಶಗೊಳ್ಳುತ್ತವೆ. ವಿರೋಧಾತ್ಮಕವಾದ ಪ್ರಭಾವ ಅಥವಾ ನೀತಿವಂತಿಕೆಯ ಆತ್ಮವು, ಒಳ್ಳೆಯತನವು, ಕರುಣೆ, ಅನುಕಂಪ, ಪ್ರೀತಿ ಮುಂತಾದವುಗಳು ವೃದ್ಧಿಹೊಂದುತ್ತವೆ. ಈ ರೀತಿಯಲ್ಲಿ ಕ್ರಿಸ್ತನ ಮೂಲಕ ದೇವರ ಪವಿತ್ರಾತ್ಮವು ಮಾನವ ಜಾತಿಯ ಪ್ರಪಂಚದ ಮೇಲೆ ಸುರಿಸಲ್ಪಡುವುದು – ಮೊದಲಿಗೆ ಅವರಿಗೆ ಜ್ಞಾನೋದಯವನ್ನು ನೀಡುವಂತೆ, ಎರಡನೆಯದಾಗಿ, ಅವರುಗಳು ವಂಶಪಾರಂಪರ್ಯವಾಗಿ ಪಡಕೊಂಡು ಬಂದ ಧೋರಣೆಗಳನ್ನು ಗೆದ್ದುಕೊಳ್ಳುವಂತೆ ಅವರಿಗೆ ಬೇಕಾಗುವ ನೆರವು, ಸಹಾಯ, ಬಲ ಇವುಗಳನ್ನು ನೀಡುವಂತೆ; ಮೂರನೆಯದಾಗಿ ಅವರನ್ನು ಬೋಧಿಸುವಂತೆ ಮತ್ತು ಅವರು ಆದಾಮನ ಅವಿಧೇಯತೆಯ ಕಾರಣ ಕಳಕೊಂಡ ದೇವರ ಸ್ವರೂಪವನ್ನು ಪುನಃ ಪಡಕೊಳ್ಳುವಂತೆ ಇದಾಗುವುದು.

ಈ ಪ್ರತೀಕ್ಷಿತ ಪ್ರಯೋಜನಗಳು ಮತ್ತು ಲೋಕಕ್ಕೆ ಒದಗಲಿರುವ ಆಶೀರ್ವಾದಗಳು ಮಹಿಮೆಯುಳ್ಳವುಗಳಾಗಿದ್ದು ಇವುಗಳು ದೇವಜನರು ಈ ಹಿಂದೆ ಕಂಡುಕೊಂಡ ಯಾವುದೇ ಸಂಗತಿಗಳಿಗಿಂತ ಹೆಚ್ಚು ಸಂತೋಷದಾಯಕವಾದವುಗಳಾಗಿವೆ. ಪರಂತು, ಕರ್ತನ ಶತ್ರುಗಳಿಗೆ ಅಥವಾ ಪವಿತ್ರಾತ್ಮನನ್ನು ಸ್ವೀಕರಿಸುವ ಮತ್ತು ಅವರಿಂದ ತುಂಬಿದವರಾಗುವ ಅವಕಾಶ ದೊರೆತಾಗ ಅದನ್ನು ನಿರಾಕರಿಸಿದವರಿಗೆ ಯಾವುದೇ ಸಾಂತ್ವನಗಳನ್ನು ನೀಡುವುದಿಲ್ಲ. ಎಲ್ಲಾ ಮನುಷ್ಯರ ಮೇಲೆ ಆತ್ಮವು ಸುರಿಸಲ್ಪಡುವುದು, ಆದರೆ ಅದರಲ್ಲಿ ಸಂತೋಷ ಪಡುವವರು ಅದರ ವಿವಿಧ ಪ್ರಯೋಜನಗಳನ್ನು ಪಡಕೊಂಡು ಅದರಿಂದ ಲಾಭ ಹೊಂದಿಕೊಳ್ಳುವುದು ಅಗತ್ಯವಾಗಿದೆ. ಹೇಗೆ ಪವಿತ್ರಾತ್ಮನ ಆಶ್ರಯಕ್ಕೆ ಬಂದು ಅದರ ಆಶೀರ್ವಾದಗಳನ್ನು ಪಡಕೊಳ್ಳುವ ಈ ಸುವಾರ್ತಾ ಯುಗದ ನಂಬಿಗಸ್ತರಿಗೆ ಇದರ ಅನುಕೂಲತೆಗಳನ್ನು ಉಪಯೋಗಿಸುವುದು ಅಗತ್ಯವಾಗಿದ್ದ ಹಾಗೆಯೇ; ಅಂದರೆ, ಅವರು ತಮ್ಮನ್ನು ಪ್ರತಿಷ್ಠಿಸಿಕೊಂಡು ಸತ್ಯದ

ಫಲಗಳನ್ನು ಸೇವಿಸಬೇಕಾಗಿದೆ ಮತ್ತು ಆ ಮೂಲಕ ಸತ್ಯದ ಆತ್ಮನನ್ನು ಹೊಂದಿಕೊಳ್ಳಬೇಕಾಗಿದೆ. ಮಹಾ ಪ್ರವಾದಿ, ಜೀವದಾಯಕನು, ಮೆಲ್ಕಿಜೆದೇಕನ ತರಹದ ಮಹಾಯಾಜಕನು (ಕ್ರಿಸ್ತನು, ದೇಹ ಮತ್ತು ಶಿರಸ್ಸು, ಪೂರ್ತಿಯಾಗಿ ಸಂಪೂರ್ಣನು) ಮುಂದೆ ನಿಂತು ಈ ಲೋಕವನ್ನು ಆಶೀರ್ವದಿಸುವಾಗ, ಆ ಪ್ರವಾದಿಯ ಮಾತನ್ನು ಕೇಳಿಸಿಕೊಂಡು ಅವುಗಳಿಗೆ ವಿಧೇಯ ರಾಗುವವರೆಲ್ಲರೂ ತಮ್ಮ ಈ ವಿಧೇಯತೆಯ ದೆಸೆಯಿಂದ ನಿತ್ಯಜೀವದ ಆಶೀರ್ವಾದ ಹೊಂದುವರು, ಅದೇ ಸಮಯದಲ್ಲಿ ಆತನನ್ನು ಕೇಳಲು ನಿರಾಕರಿಸುವವರೆಲ್ಲರೂ ಎರಡನೆಯ ಮರಣವನ್ನು ಹೊಂದಿಕೊಳ್ಳುವರು ಎಂಬರ್ಥ. ಯಾಕೆಂದರೆ **"ಆ ಪ್ರವಾದಿಯ ಮಾತನ್ನು ಕೇಳದಿರುವ ಪ್ರತಿಯೊಬ್ಬನು ನಮ್ಮ ಜನರೊಳಗಿಂದ ಸಂಪೂರ್ಣವಾಗಿ ನಾಶವಾಗುವನು"** (ಅ.ಕೃ. 3:23) ಎಂದು ಬರೆದದೆ.

ಯೋವೇಲನ ಪ್ರವಾದನೆಯಲ್ಲಿ ಗಮನಿಸುವಂತೆ ಇದು ಅದರ ನೆರವೇರಿಕೆಯನ್ನು ತಿರುಗುಮುರುಗಾದ ಕ್ರಮದಲ್ಲಿ (reverse order) ಹೇಳಿಯದೆ. ಎಲ್ಲಾ ಮನುಷ್ಯರಿಗೆ ಆಶೀರ್ವಾದಗಳನ್ನು ಮೊದಲಿಗೆ ಹೇಳಿಯದೆ ಮತ್ತು ಕಡೆಯಲ್ಲಿ ಸಭೆಯ ಆಶೀರ್ವಾದದ ಬಗ್ಗೆ ಹೇಳಿದೆ.

ಈ ಕ್ರಮದ ಹೇಳಿಕೆಯು ಕರ್ತನ ವಿನ್ಯಾಸವಾಗಿದೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಇದು ಆ ಮಹಾ ವಾಗ್ದಾನದ ಕೆಲವೊಂದು ಮಹಿಮಾಯುತ ಲಕ್ಷಣಗಳನ್ನು ಅದು ಅರ್ಥವಾಗುವ ಸೂಕ್ತ ಸಮಯ ಬರುವವರೆಗೆ ಮುಚ್ಚಲು ಅಥವಾ ಮರೆಮಾಡುವ ಸಲುವಾಗಿ – **"ಈ ಮಾತುಗಳು ಅಂತ್ಯಕಾಲದವರೆಗೆ ಮುಚ್ಚಲ್ಪಟ್ಟು ಮುದ್ರಿತವಾಗಿದೆ... ಅನೇಕರು ತಮ್ಮನ್ನು ಶುದ್ಧೀಕರಿಸಿ ಶುಭ್ರಮಾಡಿಕೊಂಡು ಶೋಧಿತರಾಗುವರು"** (ದಾನಿಯೇಲ 12:9,10). ಶತಮಾನಗಳ ಕಾಲದಿಂದಲೂ ನಾವು ಅವನ್ನು ಓದುತ್ತಿರುವೆವಾದರೂ ದೇವರು ನೇಮಿಸಿದ ಸೂಕ್ತಕಾಲ ಬರುವವರೆಗೂ ಅದರ ಅದ್ಭುತವಾದ ನಿಕ್ಷೇಪವು ತೆರೆಯಲಾಗದಾಗಿದೆ. ಈ ಸುವಾರ್ತಾ ಯುಗದುದ್ದಕ್ಕೂ ಕರ್ತನು ತನ್ನ ಆತ್ಮವನ್ನು ತನ್ನ ದಾಸದಾಸಿಯರ ಮೇಲೆ ಮಾತ್ರವೇ ಸುರಿಸುತ್ತಾ ಇದ್ದಾನೆ. ಅದನ್ನು ಪಡಕೊಂಡವರು – ಕರ್ತನ ದೇಹದೊಳಕ್ಕೆ ಮುಣುಗಿರುವವರು ಮತ್ತು ಆತನ ಪುತ್ರರೆಂದು ಪಾಲುದಾರರಾಗಿ ಮಾಡಲ್ಪಟ್ಟ ಎಲ್ಲರೂ ಆಶೀರ್ವಾದದಾಯಕ ಅನುಭವಗಳನ್ನು ಹೊಂದಿಕೊಳ್ಳುತ್ತಾ ಇದ್ದಾರೆ. ಈ ಲಕ್ಷಣದ ಬಗ್ಗೆ ಅಪೋಸ್ತಲನಾದ ಪೇತ್ರನು ತನ್ನ ಪಂಚಾಶತ್ತಮ ದಿನದ ಪ್ರವಚನದಲ್ಲಿ ಉಲ್ಲೇಖಿಸಿದ್ದಾನೆ. ಆತನು ಪ್ರವಾದನೆಯ ಎರಡೂ ಭಾಗವನ್ನು ಉಲ್ಲೇಖಿಸಿದ್ದಾನೆ, ಆದರೆ ಪವಿತ್ರಾತ್ಮನ ಮಾರ್ಗದರ್ಶನದಲ್ಲಿ, ಆತನು ಮೊದಲನೆಯ ಭಾಗವನ್ನು ವ್ಯಾಖ್ಯಾನಿಸಲೂ ಇಲ್ಲ, ಅದನ್ನು ಪ್ರಕಾಶಗೊಳಿಸಲೂ ಇಲ್ಲ; ಯಾಕೆಂದರೆ, ಅದನ್ನು ಅರ್ಥಮಾಡಿಕೊಳ್ಳುವ ಕಾಲ ಇನ್ನೂ ಬಂದಿರಲಿಲ್ಲ. ಆದುದರಿಂದ, ದಾಸ ದಾಸಿಯರ ಮೇಲೆ ಈ ಸುವಾರ್ತಾ ಯುಗದಲ್ಲಿ ಸುರಿಯುವ ಪವಿತ್ರಾತ್ಮನಿಗೂ ಮತ್ತು ನಂತರದ ಮುಂದಿನ ಕಾಲದಲ್ಲಿ ಎಲ್ಲಾ ಮನುಷ್ಯ ದೇಹಗಳ ಮೇಲೆ ಸುರಿಯುವ ಪವಿತ್ರಾತ್ಮನಿಗೂ ಇರುವ ವ್ಯತ್ಯಾಸವನ್ನು ಆತನು ವಿವರಿಸುವ ಬದಲು ಆತನು ಕೇವಲ ತನ್ನ ಮತ್ತು ಇತರ ವಿಶ್ವಾಸಿಗಳ ಮೇಲೆ ಸುರಿಯಲ್ಪಟ್ಟ ಪವಿತ್ರಾತ್ಮನ ಬಗ್ಗೆ ಮಾತನಾಡುತ್ತಾನೆ. ಇದನ್ನೇ – ಅದರ ಒಂದು ಭಾಗವನ್ನು, ಅದರ ಪ್ರಾರಂಭವನ್ನು ಪ್ರವಾದಿಯಾದ ಯೋವೇಲನು ಹೇಳಿದ್ದು. ಎಲ್ಲಾ ಮಾನವ ದೇಹಗಳ ಮೇಲೆ ಆತ್ಮನ ಸುರಿಯುವಿಕೆ ಆಗುವವರೆಗೂ ಇದು ಪೂರ್ಣಗೊಳ್ಳುವುದಿಲ್ಲ. ಅದಿನ್ನೂ ನೆರವೇರಿಲ್ಲ. ಆತನು ಸೂರ್ಯ ಮತ್ತು ಚಂದ್ರರು ಕತ್ತಲಾಗುವ ಬಗ್ಗೆ, ಕರ್ತನ ಬರೋಣದ ಗಮನೀಯ ದಿನದ ಬಗ್ಗೆ ಹೇಳುತ್ತಾನೆ. ಈ ಘಟನೆಗಳು ಸಮೀಪದಲ್ಲಿ ನೆರವೇರಲಿವೆ. ರೌದ್ರದ ಆ ಮಹಾದಿನವು ಮಧ್ಯೆ ಪ್ರವೇಶಿಸಿ ಸಭೆಯ ಮೇಲೆ ಅಂದರೆ ಕರ್ತನ ದಾಸ ದಾಸಿಯರ ಮೇಲೆ ಹಾಗೂ ನಂತರದಲ್ಲಿ ಎಲ್ಲಾ ಮನುಷ್ಯರ ಮೇಲೆ ಪವಿತ್ರಾತ್ಮನ ಸುರಿಯುವಿಕೆಯನ್ನು ಪ್ರತ್ಯೇಕಗೊಳಿಸುತ್ತದೆ.

ನಾವೀಗಾಗಲೇ ಕಂಡುಕೊಂಡಂತೆ, ಮುಂದಿನ ಯುಗದಲ್ಲಿ ಲೋಕದ ಮೇಲೆ ಸುರಿಯಲಿರುವ ದೇವರ ಆತ್ಮನಿಗೂ, ಈ ಯುಗದಲ್ಲಿ ಕರ್ತನ ಸಭೆಯ ಮೇಲೆ ಸುರಿಸಲ್ಪಡುತ್ತಿರುವ ಆತ್ಮನಿಗೂ ಯಾವುದೇ ವ್ಯತ್ಯಾಸ ಇರುವುದಿಲ್ಲ. ಯಾಕೆಂದರೆ, ಇದು ಅದೇ ಸತ್ಯದ, ನೀತಿವಂತಿಕೆಯ, ಪವಿತ್ರತೆಯ, ಪವಿತ್ರಪಡಿಸುವಿಕೆಯ ಆತ್ಮವಾಗಿದೆ, ದೇವರೊಂದಿಗೆ ಸಾಮರಸ್ಯಗೊಳಿಸುವ ಆತ್ಮ ಅಥವಾ ಪ್ರಭಾವವಾಗಿದ್ದು ಇದನ್ನು ದೇವರು ನೀತಿವಂತಿಕೆ, ಒಳ್ಳೆಯತನ ಮತ್ತು ಸತ್ಯದ ಸಲುವಾಗಿ ಪ್ರಯೋಗಿಸುವವನಾಗಿದ್ದಾನೆ. ಆದಾಗ್ಯೂ, ಅದು ಎಲ್ಲಾ ನಿರ್ದಿಷ್ಟ ಸಂಗತಿಗಳಲ್ಲಿಯೂ ಅದು ಈಗಿರುವ ಅರ್ಥದ್ದಾಗಿರುವುದಿಲ್ಲ. ಈಗ ದೇವರ ಪವಿತ್ರಾತ್ಮನನ್ನು ಹೊಂದಿಕೊಳ್ಳುವುದು ಮತ್ತು ಆತನೊಂದಿಗೆ ಸಾಮರಸ್ಯದಲ್ಲಿ ಜೀವಿಸುವುದು ಅಂದರೆ ಅಗತ್ಯವಾಗಿ ಎಲ್ಲೆಡೆ ತುಂಬಿಕೊಂಡಿರುವ ಈ ಲೋಕದ ಆತ್ಮನೊಂದಿಗೆ ತಿಕ್ಕಾಟಕ್ಕೆ ಕಾರಣವಾಗುತ್ತದೆ. ಈ ಕಾರಣದಿಂದ ಪವಿತ್ರಾತ್ಮನನ್ನು ಈಗ ಪಡಕೊಳ್ಳುವವರು, ಮತ್ತು ಅದರೊಂದಿಗೆ ಸಾಮರಸ್ಯದಲ್ಲಿ ನಡೆಯುವವರು ಆತ್ಮನನ್ನು ಹೊಂದಿಲ್ಲದ ಬಹುಪಾಲು ಜನರಿಂದ ಹಿಂಸೆಯನ್ನೂ, ವಿರೋಧವನ್ನೂ ನಿರೀಕ್ಷಿಸಬೇಕಾಗುತ್ತದೆಂದು ಆದೇಶಿಸಲಾಗಿದೆ.

ಮುಂದಿನ ಕಾಲದಲ್ಲಿ ಪವಿತ್ರಾತ್ಮನನ್ನು ಹೊಂದಿಕೊಳ್ಳುವುದೆಂದರೆ ಹಿಂಸೆ ಎಂಬರ್ಥವಲ್ಲ, ಯಾಕೆಂದರೆ ಮುಂದಿನ ಕಾಲದಲ್ಲಿ ಕ್ರಮವು, ವ್ಯವಸ್ಥೆಯು, ಆಡಳಿತವು ಇಂದಿನವುಗಳಿಗಿಂತ ಬಹು ವಿಭಿನ್ನವಾಗಿರುತ್ತವೆ;

ಕಾರಣವೆಂದರೆ, ಈ ಲೋಕದ ಪ್ರಭುವು ಸೈತಾನನಾಗಿದ್ದಾನೆ. ಆದರೆ ಮುಂಬರುವ ಕಾಲದಲ್ಲಿ ಆ ರಾಜನು ಯೇಸುಕ್ರಿಸ್ತನಾಗಿದ್ದಾನೆ. ಮಾನವ ಜಾತಿಯಲ್ಲಿ ಇಂದು ಹೆಚ್ಚಿನವರು ಇಚ್ಛಾಪೂರ್ವಕವಾಗಿ ಅಥವಾ ಇಚ್ಛೆಯಿಲ್ಲದೆ, ತಿಳಿದೋ, ತಿಳಿಯದೆಯೋ ಸೈತಾನನ ಪ್ರಭಾವಕ್ಕೆ ಒಳಗಾಗಿದ್ದಾರೆ. ಮುಂಬರುವ ಯುಗದಲ್ಲಿ ಇಡೀ ಲೋಕವು ಕ್ರಿಸ್ತನ ಮತ್ತು ಆತನ ನೈತಿಕ ರಾಜ್ಯದ ಪ್ರಭಾವಕ್ಕೆ ಒಳಗಾಗಿರುತ್ತದೆ. ಆಗ ಸತ್ಯವನ್ನು ಎಲ್ಲರಿಗೂ, ಕೆಳಗಿನವರಿಂದ ಉನ್ನತ ಮಟ್ಟದಲ್ಲಿರುವವರೆಲ್ಲರಿಗೂ ಮುಕ್ತವನ್ನಾಗಿಯೂ ಸರ್ವ ಸಾಮಾನ್ಯವನ್ನಾಗಿಯೂ ಮಾಡಲಾಗುತ್ತದೆ. ಮುಂದಿನ ಯುಗದ ನೀತಿ ನಿಯಮವು ನೈತಿಕತೆ, ಸತ್ಯ, ಒಳ್ಳೆಯತನ ಮತ್ತು ಪ್ರೀತಿ ಇವುಗಳು ಆಗಿರುವುದರಿಂದ, ಆಡಳಿತವು ದೇವರ ರಾಜ್ಯವಾಗಿರು ವುದರಿಂದ, ಆ ಆಡಳಿತದೊಂದಿಗೆ ಮತ್ತು ಅದರ ನಿಯಮಗಳೊಂದಿಗೆ ಸಾಮರಸ್ಯಕ್ಕೆ ಬರುವವರು, ಸತ್ಯದ ಆತ್ಮನನ್ನು ಹೊಂದಿರುವವರು ಅವುಗಳ ಫಲವಾಗಿ ಯಾವುದೇ ಹಿಂಸೆಗೆ ತುತ್ತಾಗುವುದಿಲ್ಲ. ಅದಕ್ಕೆ ವ್ಯತಿರಿಕ್ತವಾಗಿ ಅವರುಗಳು ಕೃಪೆ ಮತ್ತು ಆಶೀರ್ವಾದಗಳನ್ನು ಅನುಭವಿಸುವರು ಮತ್ತು ಅವರು ಹೊಂದಿಕೊಳ್ಳುವ ಪವಿತ್ರತೆಯ ಆತ್ಮನ ಅನುಪಾತಕ್ಕನುಸಾರವಾಗಿ ಪ್ರಗತಿಯನ್ನು ಹೊಂದಿಕೊಳ್ಳುವರು.

ಮಿಲಿಯಾಂತರ ಯುಗದಲ್ಲಿ ಪವಿತ್ರಾತ್ಮನನ್ನು ಹೊಂದಿಕೊಳ್ಳುವುದು ಈ ಯುಗದಂತೆ ಆತ್ಮೀಕ ಸ್ವಭಾವಗಳನ್ನು ಹೊಂದಿಕೊಳ್ಳುವಂತೆ ಆತ್ಮನಿಂದ ಪಡಕೊಳ್ಳುವಿಕೆ ಅಥವಾ ಕ್ರಿಸ್ತನೊಂದಿಗೆ ಆತನ ರಾಜ್ಯದಲ್ಲಿ ಬಾಧ್ಯಸ್ಥರಾಗುವುದು ಇವುಗಳನ್ನು ಸೂಚಿಸುವುದಿಲ್ಲ. ಆ ವಾಗ್ದಾನವು ಈ ಸುವಾರ್ತಾ ಯುಗದಲ್ಲಿನ ಕರ್ತನ ದಾಸ ದಾಸಿಯರ ವರ್ಗದವರಿಗೆ ಮಾತ್ರವೇ ಅನ್ವಯವಾಗುತ್ತದೆ. ಅವರು ಪವಿತ್ರಾತ್ಮನನ್ನು ಈ ಯುಗದಲ್ಲಿ ಹೊಂದಿಕೊಂಡು ಅದರಿಂದ ಪ್ರೇರೇಪಿಸಲ್ಪಡುತ್ತಾರೆ. ಕೆಡುಕನ ಪ್ರಭುತ್ವದ ಪರಿಣಾಮವಾಗಿ ಅವರು ನೀತಿವಂತಿಕೆಯ ಕಾರಣ ಶ್ರಮೆಯನ್ನನುಭವಿಸಬೇಕಾಗುತ್ತದೆ. ಆದ ಕಾರಣ ಅವರ ಮೇಲೆ ತೇಜೋಮಯನಾದ ದೇವರಾತ್ಮನು ನೆಲೆಗೊಂಡಿರುತ್ತಾನೆ (1 ಪೇತ್ರ 4:14).

ಮಿಲಿಯಾಂತರ ಯುಗದಲ್ಲಿ ಪವಿತ್ರಾತ್ಮನನ್ನು ಹೊಂದಿರುವುದು ಅದನ್ನು ಹೊಂದಿರುವವರು ಮಧ್ಯಸ್ಥಗಾರನಾದ ಯೇಸುವಿನೊಂದಿಗೆ ಸಾಮರಸ್ಯ ದಲ್ಲಿದ್ದರೆಂದು ಸರಳವಾಗಿ ಸೂಚಿಸುತ್ತದೆ. ಆತನ ಆ ಆಳತೆಯಲ್ಲಿ ದೇವರೊಂದಿಗೆ ಸಾಮರಸ್ಯದಲ್ಲಿರುತ್ತಾನೆ ಮತ್ತು ದೇವರು ಮಾನವ ಜಾತಿಯವರಿಗೆ ಸಾಮಾನ್ಯವಾಗಿ ದಯಪಾಲಿಸಿರುವ ಆಶೀರ್ವಾದಗಳನ್ನು ಹೊಂದುವ ಸಾಲಿನಲ್ಲಿರುತ್ತಾನೆ. ಈ ಆಶೀರ್ವಾದಗಳು ಸ್ವಭಾವವು ದೇವರ ಸ್ವಭಾವಕ್ಕೆ ಬದಲಾವಣೆಯಲ್ಲ ಆದರೆ ಆದಾಮನ ವಿಫಲತೆಯ ಕಾರಣ ಕಳೆದುಕೊಂಡವುಗಳೆಲ್ಲವನ್ನು ಪುನಃವಶಪಡಿಸಿಕೊಳ್ಳುವುದಾಗಿದೆ. (ಅ.ಕೃ. 3:19–21 ನೋಡಿರಿ). ಅಂಥವರು ಪವಿತ್ರಾತ್ಮನನ್ನು ಹೊಂದಿಕೊಳ್ಳುವುದು ಎಂದರೆ ಎರಡನೆಯ ಆದಾಮನಿಂದ ಪುನಃಶ್ಚೇತನ ಹೊಂದಿ ಮನುಷ್ಯ ಸ್ವಭಾವದಲ್ಲಿ ಪರಿಪೂರ್ಣತೆ ಪಡೆಯುವದಾಗಿದೆ ಮತ್ತು ಇದನ್ನು ಮಹಾ ಪಾಪ ಪ್ರಾಯಶ್ಚಿತ್ತ ಬಲಿಯ ಬೆಲೆತೆತ್ತು ಕೊಂಡುಕೊಂಡಿರುವುದು ಅವರಲ್ಲಿ ತನ್ನ ಕಾರ್ಯಾರಂಭವನ್ನು ಮಾಡುತ್ತದೆ; ಮತ್ತು ಅದು ಮುಂದುವರೆದರೆ ಅದು ಅಂತಿಮವಾಗಿ ಮಾನವರನ್ನು ದೈವಿಕ ತಂದೆಯ ಹೋಲಿಕೆಗೆ ಪುನಃವಶ ಪಡಿಸುತ್ತದೆ.

ನಮ್ಮ ಕರ್ತನಾದ ಯೇಸುವು ಮಿಲಿಯಾಂತರ ಯುಗದಲ್ಲಿ ಈ ಲೋಕದ ಪುನಃಶ್ಚೇತಕನಾಗಿ ಲೋಕಕ್ಕೆ ನೀಡಲಿರುವ ಆಶೀರ್ವಾದಗಳನ್ನು ಆತನು ಸ್ವಂತ ಬಲಿದಾನದ ಬೆಲೆತೆತ್ತು ಕೊಂಡುಕೊಂಡಿದ್ದಾನೆ ಎಂಬುದನ್ನು ನಾವು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಆತನು ಮಾನವನಾದ ಯೇಸುಕ್ರಿಸ್ತನಾಗಿ ದಂಡನೆಗೊಳಗಾಗಿದ್ದ ಮಾನವ ಆದಾಮನ ಅನುರೂಪವಾದ ಬೆಲೆಯನ್ನು ತೆತ್ತಿದ್ದಾನೆ. ಹೀಗಾಗಿ ಆತನು ಪುರುಷತ್ವ, ಹಕ್ಕುಗಳು, ಸೌಕರ್ಯಗಳು, ಜೀವ ಮತ್ತು ಆದಾಮನ ರಾಜ್ಯ ಇವುಗಳೆಲ್ಲವನ್ನೂ ಪಾಪ ಪ್ರಾಯಶ್ಚಿತ್ತ ಮಹಾ ಬಲಿದಾನದ ಮೂಲಕ ಕೊಂಡುಕೊಂಡನು. ಈ ಕೊಂಡುಕೊಂಡ ಸಂಗತಿಗಳು ಪುನಃಶ್ಚೇತಗೊಂಡ ಲೋಕಕ್ಕೆ ಅದರ ಪುನಃಶ್ಚೇತಕ ಅಥವಾ ತಂದೆಯ ಮೂಲಕ, ಅಂದರೆ ಎರಡನೆಯ ಆದಾಮನಾದ ಕ್ರಿಸ್ತ ಯೇಸುವಿನಲ್ಲಿ ಪುನಃವಶಪಡಿಸಲಾಯಿತು – ಎಫೆಸ 1:14; ಅ.ಕೃ. 3:19–23.

ನಮ್ಮ ಕರ್ತನಾದ ಯೇಸುವು ಮನುಷ್ಯ ದೇಹಧಾರಿಯಾಗಿದ್ದಾಗ ಆತನು ಎರಡನೆಯ ಆದಾಮನಾಗಿರಲಿಲ್ಲ ಆದರೆ ಪುನರುತ್ಥಾನದ ನಂತರ ಆತನು ಮಹಿಮಾ ಶರೀರಧಾರಿಯಾಗಿ ಎರಡನೆಯ ಆದಾಮನಾದನು ಎಂಬ ಸತ್ಯವು ಆತನು ಜನಾಂಗದ ಎರಡನೆಯ ತಂದೆಯಾಗಿ ಪುನಃಶ್ಚೇತನದಲ್ಲಿ ಮನುಕುಲಕ್ಕೆ ಆತ್ಮೀಕ ಜೀವ ಅಥವಾ ಆತ್ಮೀಕ ವ್ಯಕ್ತಿಯನ್ನು ನೀಡುವನು ಎಂಬ ಅಭಿಪ್ರಾಯವನ್ನು ನೀಡುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಇಲ್ಲಿ ಉಪಯೋಗಿಸಿರುವ 'ತಂದೆ' ಎಂಬುದರ ಆಲೋಚನೆಯು ಯಾವುದೇ ಸ್ವಭಾವಕ್ಕೆ ಸಂಬಂಧಿಸದೆ 'ಜೀವದಾಯಕ' ಎಂಬುದಾಗಿದೆ. ಈ ರೀತಿಯಾಗಿ ತಂದೆಯಾದ ಆದಾಮನ ಸೃಷ್ಟಿಯಲ್ಲಿ ಆತನನ್ನು ದೇವರ ಮಗನು ಎಂದು ಕರೆಯಲಾಗಿದೆ. ಆತನು ದೇವರ ನೈತಿಕತೆಗೆ ತಕ್ಕಂತೆ ಮತ್ತು ದೇವರ ಸ್ವರೂಪದಲ್ಲಿ ಉಂಟುಮಾಡಲ್ಪಟ್ಟನೇ ಹೊರತು ದೈವಿಕ ಸ್ವಭಾವದಲ್ಲಿ ಆತನು ಉಂಟುಮಾಡಲ್ಪಟ್ಟನು ಎಂಬ ಅಭಿಪ್ರಾಯ

ದಿಂದಲ್ಲ; ಯಾಕೆಂದರೆ ಆತನು ಈ ಲೋಕಕ್ಕೆ ಬಂದು, ಲೌಕಿಕನೂ ಆಗಿದ್ದಾನೆ ಆದರೆ ದೇವರು ಆತ್ಮ ಸ್ವರೂಪಿ ಎಂದು ನಾವು ತಿಳಿದಿದ್ದೇವೆ. ದೇವರು ಜೀವದಾಯಕನಾಗಿ, ಆತನ ಸಕ್ರಿಯ ಕಾರ್ಯಕರ್ತನೂ ಮತ್ತು ನಮ್ಮ ಕರ್ತನೂ ಆದಾತನ ಮೂಲಕ ಎಲ್ಲಾ ಸೃಷ್ಟಿಗಳ ತಂದೆಯಾಗಿದ್ದಾನೆ ಎಂಬ ತತ್ವವು ಒಳಗೊಂಡಿರುವ ಶಕ್ತಿಯ ಬಗ್ಗೆ ಮುಂದಿನ ಅಧ್ಯಾಯದಲ್ಲಿ 'ನಿಷ್ಕಳಂಕನು' ಎಂಬ ತಲೆಬರಹದಡಿಯಲ್ಲಿ ಹೆಚ್ಚು ವಿಶಿಷ್ಟವಾಗಿ ತೋರಿಸಲಾಗಿದೆ. ಇಲ್ಲಿ ನಾವು ಕೇವಲ ಆ ಪ್ರಸ್ತಾಪದ ಬಗ್ಗೆ ತಪ್ಪುಗ್ರಹಿಕೆ ಉಂಟಾಗದಂತೆ ಗಮನ ಸೆಳೆಯುವವರಾಗಿದ್ದೇವೆ. ಲೋಕದ ಸೃಷ್ಟಿಗೆ ಸಂಬಂಧಿಸಿದಂತೆ, ಮನುಷ್ಯನು ಲೋಕದ ನಿವಾಸಿ ಹಾಗೂ ಒಡೆಯನು ಹಾಗೂ ಕೆಳವರ್ಗದ ಪ್ರಾಣಿಗಳು ಆತನ ಅಧೀನದಲ್ಲಿರುವುದನ್ನು ಮನುಷ್ಯನ ಅವಿಧೇಯತೆ ಮತ್ತು ಬೀಳುವಿಕೆಯ ಕಾರಣ ದೇವರು ತನ್ನ ಉದ್ದೇಶವನ್ನು ಬದಲಾವಣೆ ಮಾಡಿರುವುದಿಲ್ಲ ವಿರೋಧಿಯು ಪ್ರಯತ್ನಿಸಿದ ಕೆಡಕುತನವು ಸಂಪೂರ್ಣವಾಗಿ ತೊಡೆದುಹಾಕಿದ ಮೇಲೆ ದೇವರ ಯೋಜನೆಯ ಮೂಲದಲ್ಲಿ ವಿನ್ಯಾಸಗೊಂಡಂತೆ ಕ್ರಿಸ್ತನ ಮೂಲಕ ಪೂರ್ಣವಾಗಿ ನೆರವೇರಲಿದೆ. ಸುವಾರ್ತಾ ಯುಗದ ಸಭೆಯು ನಾವು ಕಂಡಂತೆ ಉನ್ನತ ಮಟ್ಟಕ್ಕೆ ಏರಿಸಲ್ಪಡುವುದು ಮತ್ತು ಕ್ರಿಸ್ತನ ಮದಲಗಿತ್ತಿಯೂ, ಜೊತೆ ಬಾಧ್ಯಸ್ಥವೂ ಎಂಬಂತೆ ಮಹಿಮೆ ಹೊಂದಿಕೊಳ್ಳುವುದು. ಇದು ಮಾನವ ಜಾತಿಯು ಪುನಃವಶಕ್ಕೆ ವಿನಾಯತಿಯಾಗಿದೆ; ಅದನ್ನು ಒಂದು ವಿಶೇಷವಾದ ಉದ್ದೇಶಕ್ಕಾಗಿ ಆಯ್ದುಕೊಂಡು ಕರೆಯಲಾಗಿದೆ ಮತ್ತು ಉನ್ನತ ಏಳಿಗೆಗೆ ಮತ್ತು ಕ್ರಿಸ್ತನೊಂದಿಗೆ ಜೊತೆ ವಾರಸುದಾರಿಕೆಗೆ ಒಪ್ಪುವ ವಿಶಿಷ್ಟವಾದ ಪರೀಕ್ಷೆಗಳಿಗೆ ಒಳಪಡಿಸಲಾಗಿದೆ. – ಇದು ಮಾನವ ಸ್ವಭಾವದಿಂದ ದೇವದೂತರ ಸ್ವಭಾವಕ್ಕೂ ಹೆಚ್ಚಾದ ಸ್ವಭಾವಕ್ಕೆ – "ದೇವದೂತರಿಗೂ", ಪ್ರಭುತ್ವಗಳಿಗೂ ಎಲ್ಲಾ ಅಧಿಕಾರಗಳಿಗೂ ಮಿಗಿಲಾದ ಸ್ವಭಾವವಾಗಿದೆ.

ನಾವು ವಾಗ್ದಾನಮಾಡದ ಪವಿತ್ರಾತ್ಮನ ನೂತನ ದೀಕ್ಷಾಸ್ನಾನಕ್ಕಾಗಿ ಪ್ರಾರ್ಥಿಸಬಾರದಾಗಿರುವುದರಿಂದ ನಾವು ಹೆಚ್ಚು ಸಕಾರಾತ್ಮಕವಾಗಿ ತೃಪ್ತಿಪಡಿಸುವ ಭಾಗವಾಗಿ ಆತ್ಮನನ್ನು ಬಯಸಿ ಅದಕ್ಕಾಗಿ ಪ್ರಾರ್ಥಿಸುವಂತೆ ಕಲಿಸಿಕೊಡಲಾಗಿದೆ.

## ಪವಿತ್ರಾತ್ಮನಿಗಾಗಿ ಪ್ರಾರ್ಥಿಸುವುದು
## Praying for The Holy Spirit

**"ಕೆಟ್ಟವರಾದ ನೀವು ನಿಮ್ಮ ಮಕ್ಕಳಿಗೆ ಒಳ್ಳೇ ಪದಾರ್ಥಗಳನ್ನು ಕೊಡಬಲ್ಲವರಾದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ತನ್ನನ್ನು ಬೇಡಿಕೊಳ್ಳುವವರಿಗೆ ಎಷ್ಟೋ ಹೆಚ್ಚಾಗಿ ಪವಿತ್ರಾತ್ಮವರವನ್ನು ಕೊಡುವನಲ್ಲವೇ?"** – ಲೂಕ 11:13.

'ಎಲ್ಲಾ ಸಂಗತಿಗಳೂ ಮಗನಿಂದ' ಆದರೂ ಇಲ್ಲಿ ಎಲ್ಲೆಡೆಗಳಂತೆ ಆತನು ಮಹಿಮೆ ಮತ್ತು ಗೌರವಗಳನ್ನು ಆಶೀರ್ವಾದ ಬುಗ್ಗೆಯಾಗಿ ತಂದೆಗೆ ಅರ್ಪಿಸುತ್ತಾನೆ. ವಿಮೋಚನೆಯ ಮತ್ತು ಪುನಃಸಂಧಾನದ ಸಮಗ್ರ ಕಾರ್ಯವು ಮಗನ ಮೂಲಕವಾಗಿ ತಂದೆಯ ಕಾರ್ಯವಾಗಿದೆ. ನಾವು ಹೆಚ್ಚು ಹೆಚ್ಚಾಗಿ ಆತನ ಪವಿತ್ರ ಆತ್ಮನನ್ನು ಹೊಂದಿಕೊಳ್ಳುವುದು ತಂದೆಯ ಇಷ್ಟಾನುಸಾರ ವಾಗಿದೆಯೆಂದು ನಮ್ಮ ಕರ್ತನು ಪ್ರಕಟಿಸುತ್ತಾನೆ. ನಾವು ಅದನ್ನು ಮಹತ್ವವಾದ ಆಶೀರ್ವಾದವನ್ನಾಗಿ ಬಯಸುವಂತೆಯೂ, ಅದನ್ನು ಕೇಳಿಕೊಳ್ಳುವಂತೆಯೂ ಆತನು ನಮಗೆ ಅಪ್ಪಣೆನೀಡುತ್ತಾನೆ. ನಮ್ಮ ಪ್ರಾಪಂಚಿಕವಾದ ಆಶೀರ್ವಾದಗಳ ಬಗ್ಗೆ ನಮ್ಮ ವಿಮೋಚಕನು ಹೇಳುವಂತೆ ನಮ್ಮ ಪರಲೋಕದ ತಂದೆಗೆ ನಮಗೆ ಯಾವ ಸಂಗತಿಗಳು ಬೇಕೆಂದು ತಿಳಿದದೆ – ನಮಗೆ ಯಾವ ಪ್ರಾಪಂಚಿಕ ಆಶೀರ್ವಾದಗಳು ಅಗತ್ಯವೆಂದು, ಯಾವುದು ಹಾನಿಕರವೆಂದು ನಮಗಿಂತ ಹೆಚ್ಚಾಗಿ ಆತನಿಗೆ ತಿಳಿದಿದೆ. ಆದುದರಿಂದ, ಪಶ್ಚಾತಾಪಪಡದವರಂತೆ, ಅನ್ಯಜನರಂತೆ ನಾವು ಆಲೋಚಿಸಿ ಪ್ರಾಪಂಚಿಕ ಆಶೀರ್ವಾದಗಳನ್ನು ಬೇಡಿಕೊಳ್ಳಬಾರದು; ಆದರೆ ಅದಕ್ಕೆ ಬದಲಾಗಿ ಮಕ್ಕಳ ಸಂಬಂಧಕ್ಕೆ ಬಂದವರಂತೆ ಮತ್ತು ತಂದೆಯ ನೀಡುವಿಕೆಯ ಬಗ್ಗೆ ಪೂರ್ಣ ಭರವಸೆಯುಳ್ಳವರಾಗಿ ಆತನು ಯಾವುದು ಉತ್ತಮವಾಗಿದೆಯೋ ಅವುಗಳನ್ನೇ ನೀಡುವನೆಂದು ನಾವು ನಿರೀಕ್ಷಿಸಬೇಕು ಮತ್ತು ನಾವುಗಳು ಆ ವಾಗ್ದಾನ ಮತ್ತು ನಂಬಿಕೆಗಳಲ್ಲಿ ಹೆಚ್ಚು ತೃಪ್ತಿಗೊಳ್ಳಬೇಕು.

ಪರಲೋಕದ ತಂದೆಯು ನಾವು ಹೆಚ್ಚು ಹೆಚ್ಚಾಗಿ ಪವಿತ್ರಾತ್ಮನನ್ನು ಬಯಸಿ ಅದಕ್ಕಾಗಿ ಬೇಡುಕೊಳ್ಳುವುದರಲ್ಲಿ ಸಂತೋಷಿಸುತ್ತಾನೆ. ಇದು ಆತನ ಆತ್ಮನೊಂದಿಗೆ ಪೂರ್ಣ ಸಾಮರಸ್ಯದಲ್ಲಿರುವ ಪ್ರವೃತ್ತಿಯಾಗಿದೆ. ಆದುದರಿಂದ ಯಾರು ಈ ರೀತಿಯಾಗಿ ಬಯಸಿ ಅದಕ್ಕಾಗಿ ಬೇಡಿಕೊಳ್ಳುತ್ತಾರೋ ಅವರು ತಮ್ಮ ಈ ಒಳ್ಳೆಯವುಗಳನ್ನು ಆತನ ಇಚ್ಛಾನುಸಾರವಾಗಿ ಹೊಂದಿಕೊಳ್ಳುವರು. ತಂದೆಯು ಅವರಲ್ಲಿ ಅಥವಾ ಅವರ ಸುತ್ತಮುತ್ತಲೂ ಇರುವ ಎಲ್ಲಾ ಅಡ್ಡಿ ಆತಂಕಗಳನ್ನೂ ಅವರುಗಳು ಜಯಿಸಲಿಕ್ಕಾಗುವಂತೆ ಮತ್ತು ಅವುಗಳು ನಿವಾರಣೆಯಾಗುವಂತೆ ಮತ್ತು ಆತನ ಪ್ರೀತಿಯ ಆತ್ಮವು ಅವರಲ್ಲಿ ಹೆಚ್ಚಾಗಿ ತುಂಬಿಕೊಳ್ಳುವಂತೆ ಅಪ್ಪಣೆಕೊಡಲು ಸಂತೋಷಿಸುತ್ತಾನೆ. ಆದರೆ, ಇದರಲ್ಲಿ ಪವಿತ್ರಾತ್ಮನ ಸ್ನಾನವನ್ನು ಹೊಸದಾಗಿ ಹೊಂದಿಕೊಳ್ಳಬೇಕಾದ ಅಗತ್ಯತೆ ಇರುವುದಿಲ್ಲ; ಈ ದೀಕ್ಷಾಸ್ನಾನವು ಪ್ರಾರಂಭದಲ್ಲಿ ಉಂಟಾಯಿತು. ಆದರೆ ಈಗ ಉಳಿದಿರುವುದು ಎಲ್ಲಾ ದಿಕ್ಕುಗಳಲ್ಲಿಯೂ ತೂಬುಗಳನ್ನು ತೆರೆಯುವುದು. ಹೀಗಾಗಿ ಪ್ರೀತಿಯ ಮತ್ತು ಸತ್ಯದ ಪವಿತ್ರಾತ್ಮನು ಒಳನುಗ್ಗಲು ಮತ್ತು ನಮ್ಮಗಳ ಎಲ್ಲಾ ಕೃತ್ಯಗಳಲ್ಲಿ, ಮಾತುಗಳಲ್ಲಿ,

ಆಲೋಚನೆಗಳಲ್ಲಿ ವ್ಯಾಪಿಸಿಕೊಳ್ಳಲು ಅನುಕೂಲವಾಗುವುದು. ಯಾವುದು ಈ ತೂಬನ್ನು ಅಡ್ಡಗಟ್ಟುತ್ತದೆ ಮತ್ತು ಇತರ ಅಡೆತಡೆಗಳನ್ನುಂಟು ಮಾಡುತ್ತದೆ ಎಂದು ತಿಳಿದುಕೊಳ್ಳಲು ನಮಗೆ ದೈವಿಕ ಸಹಾಯದ, ದೇವರ ಜ್ಞಾನದ ಮತ್ತು ಅನುಗ್ರಹದ ಕಾರ್ಯಾಚರಣೆಯ ಅವಶ್ಯಕತೆ ಇದೆ. ಇದು ಈ ಅಡ್ಡಿ ಆತಂಕಗಳನ್ನು ನಿವಾರಿಸಿಕೊಳ್ಳಲು ಸಹಾಯಕವಾಗುತ್ತದೆ.

ಪ್ರಾಮಾಣಿಕವಾದ ಪ್ರಾರ್ಥನೆಯ ಮೂಲಕವಾಗಿ ಬಯಸಿ ಅದಕ್ಕಾಗಿ ಶ್ರಮಿಸುವವರು ಮಾತ್ರವೇ ಪವಿತ್ರತೆಯ ಆತ್ಮನನ್ನು ವಿಫುಲವಾಗಿ ಹೊಂದಿಕೊಳ್ಳಲು ಸಾಧ್ಯ. ಈ ಲೋಕದ ಮನಸ್ಸು ಮತ್ತು ಆತ್ಮನನ್ನು ನಮ್ಮ ಹೃದಯಗಳಿಂದ ಹೊಡೆದೋಡಿಸಬೇಕು, ಅದರಲ್ಲಿ ಪವಿತ್ರಾತ್ಮ, ಪವಿತ್ರ ಮನಸ್ಸು ಮತ್ತು ಪ್ರಭಾವ ಇವುಗಳ ಅನುಪಾತವಾಗಿ ತುಂಬಬೇಕು. ಸ್ವಚಿತ್ತವೂ ಸ್ಥಳಬಿಡಬೇಕು. ನಾವು ಉಳಿದವುಗಳೆಲ್ಲದರಿಂದ ಖಾಲಿಯಾದಲ್ಲಿ ಮಾತ್ರವೇ ಅದರ ಅನುಪಾತಕ್ಕನುಸಾರವಾಗಿ ಆತನ ಸಂಪೂರ್ಣತೆಯನ್ನು ಹೊಂದಿಕೊಳ್ಳಲು ಸಾಧ್ಯವಾಗುತ್ತದೆ. ಆದುದರಿಂದ ಕರ್ತನು ನಾವು ಈ ಸ್ಥಿತಿಗೆ ಬರುವಂತೆ ಅಂದರೆ ಆತನ ಪವಿತ್ರಾತ್ಮನಿಂದ ತುಂಬಿಕೊಳ್ಳುವಂಥಾಃ ಪ್ರಾಮಾಣಿಕ ಸ್ಥಿತಿಗೆ ಬರುವಂತೆ ಮಾಡುತ್ತಾನೆ ಮತ್ತು ಎಲ್ಲಾ ವಿರುದ್ಧವಾದ ಪ್ರಭಾವವನ್ನೂ, ಚಿತ್ತವನ್ನು ನಿವಾರಿಸಲು ಅಪೇಕ್ಷಿಸುವಂಥಾಃ ಮನಸ್ಸನ್ನು ನಮ್ಮಲ್ಲಿ ಉಂಟುಮಾಡುತ್ತಾನೆ.

ಎಫೆಸ ಸಭೆಯವರಿಗೆ ಮಾಡಿದ ಈ ಪ್ರಾರ್ಥನೆಯಲ್ಲಿ ಇದು ಅಪೋಸ್ತಲನ ನಿಶ್ಚಯಪೂರ್ವಕವಾದ ಆಲೋಚನೆಯಾಗಿತ್ತು – **"ಕ್ರಿಸ್ತನು ನಿಮ್ಮ ನಂಬಿಕೆಯ ಮೂಲಕ ನಿಮ್ಮ ಹೃದಯಗಳಲ್ಲಿ ವಾಸಮಾಡುವ ಹಾಗೆಯೂ ಆತನು ತನ್ನ ಮಹಿಮಾತಿಶಯದ ಪ್ರಕಾರ ಅನುಗ್ರಹಿಸಲಿ; ನೀವು ದೇವರ ಪ್ರೀತಿಯಲ್ಲಿ ನೆಲೆಗೊಂಡು ಅದರ ಅಗಲ ಉದ್ದ ಎತ್ತರ ಆಳ ಎಷ್ಟೆಂಬುದನ್ನು ದೇವಜನರೆಲ್ಲರೊಂದಿಗೆ ಗ್ರಹಿಸಲೂ ಜ್ಞಾನಕ್ಕೆ ಮೀರುವ ಕ್ರಿಸ್ತನ ಪ್ರೀತಿಯನ್ನು ತಿಳುಕೊಳ್ಳಲೂ ಪೂರ್ಣ ಶಕ್ತರಾಗಿದ್ದು ದೇವರ ಸಂಪೂರ್ಣತೆಯ ಮಟ್ಟಿಗೂ ಪರಿಪೂರ್ಣರಾಗುವ ಹಾಗೆ ನಿಮಗೆ ದಯಪಾಲಿಸಲಿ ಎಂದು ಆತನನ್ನು ಬೇಡಿಕೊಳ್ಳುತ್ತೇನೆ"** (ಎಫೆಸ 3:17–19). ಕ್ರಿಸ್ತನ ಆತ್ಮನಿಂದ ತುಂಬಿಕೊಂಡಿರುವವರು, ಮತ್ತು ಆತನು ಪ್ರಕಟಿಸಿದ ಪ್ರೀತಿಯಲ್ಲಿ ಸಂಪೂರ್ಣವಾಗಿ ಮೆಚ್ಚಿಕೊಂಡಿರುವವರು ತಂದೆಯ ಆತ್ಮನನ್ನು ಪೂರ್ಣಪ್ರಮಾಣದಲ್ಲಿ ಹೊಂದಿಕೊಳ್ಳುವರು.

ನಾವು ಪರೀಕ್ಷಿಸುತ್ತಿರುವ ವೇದಭಾಗದಲ್ಲಿ ಯಾವುದೇ ರೀತಿಯಲ್ಲಿ ಪರಲೋಕದ ತಂದೆಯು ತನ್ನ ಮಕ್ಕಳು ಮತ್ತೊಬ್ಬ ದೇವರಿಗಾಗಿ – ತ್ರೈಯೇಕತ್ವದ ಮೂರನೆಯ ವ್ಯಕ್ತಿಗಾಗಿ ಕೇಳುಕೊಳ್ಳುವಲ್ಲಿ ಸಂತೋಷಿಸುತ್ತಾನೆ ಎಂಬ ಅಭಿಪ್ರಾಯವು ವ್ಯಕ್ತವಾಗುವುದಿಲ್ಲ. ಅಂಥಾಃ ಆಲೋಚನೆಯು ಈ ವಾಕ್ಯ ಪರಿಚ್ಛೇದಕ್ಕೆ ಅದಕ್ಕೆ ಸಂಬಂಧವಾದವುಗಳಿಗೆ ವಿರುದ್ಧವಾಗಿದೆ: ಅಂಥಾಃ ತಪ್ಪು ದೃಷ್ಟಿಕೋನವನ್ನು ಹೊಂದಿರುವವರು ಅಗತ್ಯವಾಗಿ ಆ ಮಟ್ಟಿಗೆ ಈ ವಾಗ್ದಾನದ ನಿಜವಾದ ಸೌಂದರ್ಯಕ್ಕೆ ಮತ್ತು ಬಲಕ್ಕೆ ಕುರುಡರಾಗಿದ್ದಾರೆ. ಸರಿಸಮಾನರಾದ ತ್ರೈಯೇಕತ್ವದ ದೇವರುಗಳಲ್ಲಿ ಒಬ್ಬರು ಮತ್ತೊಬ್ಬನನ್ನು ಅಂದರೆ ಮೂರನೆಯ ವ್ಯಕ್ತಿಯನ್ನು ಈ ಲೋಕದ ತಂದೆತಾಯಿಗಳಂತೆ ತಮ್ಮ ಮಕ್ಕಳಿಗೆ ರೊಟ್ಟಿ, ಮೀನು ಮತ್ತು ಮೊಟ್ಟೆಗಳನ್ನು ನೀಡುವಂತೆ ನೀಡಲು ಸಮರ್ಥ ಎಂದು ಹೇಳುವುದು ಆಶ್ಚರ್ಯವೆನಿಸುತ್ತದೆ. (ಮುಂಚಿತವಾಗಿ ಬರುವ ವಾಕ್ಯಗಳನ್ನು ನೋಡಿರಿ). ಪವಿತ್ರಾತ್ಮನನ್ನು ದೇವಜನರ ಆತ್ಮೀಕ ಬೆಳವಣಿಗೆಗಾಗಿ ಮತ್ತು ಸಮಾಧಾನಕ್ಕಾಗಿ ದಯಪಾಲಿಸಿರುವ ದೈವಿಕ ಮನಸ್ಸು ಅಥವಾ ಪ್ರಭಾವ ಎಂದು ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಂಡಾಗಲೇ ಈ ಇಡೀ ಪರಿಚ್ಛೇದವು ನಮಗೆ ಸಮಂಜಸವಾಗಿ ಕಂಡುಬರುತ್ತದೆ.

ನಮ್ಮ ಈ ವಾಕ್ಯಭಾಗದಲ್ಲಿ ಈ ಲೋಕದ ತಂದೆತಾಯಿಗಳು ತಮ್ಮ ಮಕ್ಕಳಿಗೆ ಸ್ವಾಭಾವಿಕವಾದ ಆಹಾರಗಳನ್ನು ನೀಡುವಂತೆ ನಮ್ಮ ಪರಲೋಕದ ತಂದೆಯು ತನ್ನನ್ನು ಕೇಳಿಕೊಳ್ಳುವವರಿಗೆ ಪವಿತ್ರಾತ್ಮನನ್ನು ನೀಡುವುದರೊಂದಿಗೆ ಹೋಲಿಕೆಯೊಂದನ್ನು ನೀಡಲಾಗಿದೆ. ಆದರೆ, ಈ ಲೋಕದ ತಂದೆತಾಯಿಗಳು ಪ್ರಾಕೃತಿಕ ಆಹಾರವನ್ನು ತಮ್ಮ ಕುಟುಂಬದವರ ಕೈಗೆಟಕುವಂತೆ ಸಿದ್ಧಪಡಿಸಿದ್ದು ಅದನ್ನು ಯಾರಿಗೂ ಬಲವಂತಪಡಿಸದೇ ಇರುವಂತೆಯೇ ಪರಲೋಕದ ತಂದೆಯೂ ತನ್ನ ಆತ್ಮೀಕ ಕುಟುಂಬದವರಿಗೆ ಎಟಕುವಂತೆ ಆತನ ಒಳ್ಳೆಯ ಕೊಡುಗೆಯಾದ ಕೃಪೆಯನ್ನು ಸಿದ್ಧಪಡಿಸಿರುತ್ತಾನೆ. ಆದರೆ ಅದನ್ನು ಆತನು ನಮ್ಮ ಮೇಲೆ ಬಲವಂತ ಪಡಿಸುವುದಿಲ್ಲ. ನಾವು ಅವುಗಳಿಗಾಗಿ ಹಸಿದುಕೊಳ್ಳಬೇಕು ಮತ್ತು ಬಾಯಾರಬೇಕು, ನಾವು ಅವುಗಳನ್ನು ಬಯಸಬೇಕು. ಆದರೆ ಅನುಮಾನದೊಂದಿಗೆ ಅಲ್ಲ, ವಿಶ್ವಾಸಪೂರ್ವಕವಾಗಿ ಆತನು ಒಳ್ಳೆಯವುಗಳನ್ನು ನಮಗೆ ಕೊಡುವ ಮನಸ್ಸನ್ನು ನಾವು ಗೌರವಿಸಬೇಕು. ಆದುದರಿಂದ, ನಾವು ಪವಿತ್ರಾತ್ಮನಿಗಾಗಿ ಬೇಡಿಕೊಳ್ಳುವಾಗ, ಮತ್ತು ಕರ್ತನ ಆತ್ಮನಿಂದ ತುಂಬಿಕೊಳ್ಳಲು ಬಯಸುವಾಗ, ನಾವು ನಮ್ಮ ಬಗ್ಗೆ ನೋಡಿಕೊಳ್ಳಬೇಕು ಮತ್ತು ಈ ಪ್ರಾರ್ಥನೆಯನ್ನು ಉತ್ತರಿಸುವ ಸಲುವಾಗಿ ಆತನು ಮಾಡಿರುವ ಪೂರ್ವಸಿದ್ಧತೆಗಳನ್ನು ಕಂಡುಕೊಳ್ಳಬೇಕು. ಆತನು ಅವುಗಳನ್ನು ಆ ರೀತಿಯಾಗಿ ಸ್ಫೂರ್ತಿಗೊಳಿಸಿರುತ್ತಾನೆ ಮತ್ತು ನಿರ್ದೇಶಿಸಿರುತ್ತಾನೆ.

ನಾವು ಈ ಪೂರ್ವ ಸಿದ್ಧತೆಗಳನ್ನು ಸತ್ಯದ ಮಾತುಗಳಲ್ಲಿ ಕಾಣುತ್ತೇವೆ; ಆದರೆ ಅವುಗಳು ಎಲ್ಲಿವೆ ಎಂದು ಕಂಡುಕೊಂಡರಷ್ಟೇ ಸಾಲದು; ನಾವು ತುಂಬಿಸಿಕೊಳ್ಳಬೇಕಾದರೆ ತಿನ್ನಬೇಕಾಗುತ್ತದೆ. ನಿಜವಾಗಿಯೂ ನಾವು ಔತಣದಲ್ಲಿ ಭಾಗವಹಿಸಬೇಕು. ಇಲ್ಲವಾದಲ್ಲಿ, ತಿನ್ನುವದರಲ್ಲಿ ದೊರೆಯುಲು ವಿನ್ಯಾಸಗೊಂಡಿರುವ ತೃಪ್ತಿಯು ನಮಗೆ ದೊರೆಯದು. ಪೂರ್ಣವಾದ ಮೇಜಿನಿಂದ ತಿನ್ನದೇ ಇರುವವನು ಖಾಲಿಯಾಗಿದ್ದು ಸತ್ಯವಾಗಿ ಆಹಾರವಿಲ್ಲವೋ ಎಂಬಂತೆ ಪುನಃ ಹಸಿದುಕೊಳ್ಳುವನು. ಕೇವಲ ಆಹಾರಕ್ಕಾಗಿ ಬೇಡಿಕೊಳ್ಳುವುದರಿಂದ ನಮಗೆ ಹೊಟ್ಟೆ ತುಂಬದೆ, ನಂತರದಲ್ಲಿ ನಾವು ಅದನ್ನು ಸೇವಿಸಬೇಕಾಗುವಂತೆ ದೇವರ ವಾಕ್ಯಗಳನ್ನು ಹೊಂದಿಕೊಳ್ಳುವುದೂ, ದೇವರಾತ್ಮನಿಂದ ತುಂಬಿಕೊಳ್ಳುವಂತೆಯೂ ಆತನಿಗೆ ವಿಜ್ಞಾಪಿಸಿಕೊಳ್ಳುವುದೂ ಮಾತ್ರವೇ ಸಾಲದು, ನಾವು ದೇವರ ವಾಕ್ಯಗಳ ಮೂಲಕ ಆತನ ಆತ್ಮನನ್ನು ಪಡಕೊಳ್ಳಲು ನಾವು ಅವನ್ನು ಸೇವಿಸಬೇಕಾಗುತ್ತದೆ.

**"ನಾನು ನಿಮಗೆ ಹೇಳಿರುವ ಮಾತುಗಳೇ ಆತ್ಮವಾಗಿಯೂ, ಜೀವವಾಗಿಯೂ ಅವೆ"** (ಯೋಹಾನ 6:63) ಎಂದು ಯೇಸು ಹೇಳಿದ್ದಾನೆ ಮತ್ತು ಆತ್ಮನಿಂದ ತುಂಬಿಸಲ್ಪಟ್ಟವರಿಗೆ ಇದು ನಿಜವಾಗಿದೆ ಎಂಬಂತೆ ಪ್ರವಾದಿಯು **"ನನಗೆ ದೊರೆತ ನಿನ್ನ ಮಾತುಗಳನ್ನು ಆಹಾರಮಾಡಿಕೊಂಡೆನು"** (ಯೆರೆಮೀಯ 15:16; ಪ್ರಕಟನೆ 10:9 ಸಹಾ ನೋಡಿರಿ) ಎಂದಿದ್ದಾನೆ. ನಮಗೆ ತುಂಬಿಸಿಕೊಳ್ಳುವುದಕ್ಕಾಗಿ ನೀಡಿದ ಆತ್ಮದ ಸತ್ಯ ವಾಕ್ಯಗಳನ್ನು ನಿರಾಕರಿಸುತ್ತಾ ಕರ್ತನನ್ನು **"ಕರ್ತನೇ ನಮಗೆ ಆತ್ಮನನ್ನು ದಯಪಾಲಿಸು"** ಎಂದು ಬೇಡಿಕೊಳ್ಳುವುದು ನಿರಪೇಕ್ಷವಾಗಿ ವ್ಯರ್ಥವೇ ಸರಿ. ನಾವು ಕೇವಲ ಆತ್ಮನಿಗಾಗಿ ಬೇಡಿಕೊಂಡು ಅದನ್ನು ಪಡಕೊಳ್ಳುವ ಸಾಧನವನ್ನು ಸರಿಯಾಗಿ ಉಪಯೋಗಿಸಿಕೊಳ್ಳದೇ ಹೋದಲ್ಲಿ ನಾವು ಹೆಚ್ಚೆಂದರೆ ಕ್ರಿಸ್ತನ ಶಿಶುಗಳಾಗಿ ಮುಂದುವರೆಯುತ್ತೇವೆ ಮತ್ತು ಕರ್ತನೊಂದಿಗೆ ನಮ್ಮ ಸಂಬಂಧದ ಕುರುಹಾಗಿ ಆತನು ಒದಗಿಸುವ ಸತ್ಯ ವಾಕ್ಯದ ಮೂಲಕವಾಗಿ ದೊರೆಯುವ ಆಂತರಿಕ ಸಾಕ್ಷಿಯನ್ನಲ್ಲದೆ ಕೇವಲ ಬಾಹ್ಯ ಸಂಕೇತಗಳನ್ನು ಮಾತ್ರವೇ ಬಯಸುವವರಾಗುತ್ತೇವೆ.

## ಪವಿತ್ರಾತ್ಮನ ಸಾಕ್ಷಿ
## The Witness of The Holy Spirit

**"ನಾವು ದೇವರ ಮಕ್ಕಳಾಗಿದ್ದೇವೆಂಬುದಕ್ಕೆ ಪವಿತ್ರಾತ್ಮನೇ ನಮ್ಮ ಆತ್ಮದೊಂದಿಗೆ ಸಾಕ್ಷಿಹೇಳುತ್ತಾನೆ"** (ರೋಮಾ. 8:16)

ಇದಕ್ಕಿಂತಲೂ ಕೆಲವೊಂದು ಸಿದ್ಧಾಂತಗಳು ದೇವಜನರಿಗೆ ಬಹಳ ಮುಖ್ಯವಾಗಿದೆ. ಯಾಕೆಂದರೆ, ಅವರು "ಎಲ್ಲಾ ಗ್ರಹಿಕೆಯನ್ನು ಮೀರುವ ದೇವರ ಶಾಂತಿ" (ಫಿಲಿಪ್ಪಿ 4:7)ಯನ್ನು ಗಣನೀಯವಾಗಿ ಹೊಂದಿಕೊಂಡಿದ್ದಾರೆ. ಅವರಲ್ಲಿ ದೇವರಾತ್ಮನ ಸಾಕ್ಷಿಯ ಕೊರತೆ ಇರುವುದಾದರೆ ಅವರು ದೇವರ ಕುಟುಂಬಕ್ಕೆ ಪೂರ್ಣವಾಗಿ ಪಡಕೊಂಡವರಾಗಿದ್ದೇವೆಂಬ ವಿಶ್ವಾಸದ ಖಾತರಿಯನ್ನು ಹೊಂದಿಕೊಳ್ಳುವುದಾದರೂ ಹೇಗೆ? – **"ಆದಕಾರಣ ನೀನಪರಾಧಿಯೆಂದು ನಮ್ಮ ಮನಸ್ಸು ನಮಗೆ ಸಾಕ್ಷಿಹೇಳದಂತೆ ನಾವು ಹೃದಯವನ್ನು ಪ್ರೋಕ್ಷಿಸಿಕೊಂಡು ದೇಹವನ್ನು ತಿಳಿನೀರಿನಿಂದ ತೊಳೆದುಕೊಂಡು ಪರಿಪೂರ್ಣವಾದ ನಂಬಿಕೆಯುಳ್ಳವರಾಗಿಯೂ, ಯಥಾರ್ಥ ಹೃದಯವುಳ್ಳವರಾಗಿಯೂ ದೇವರ ಬಳಿಗೆ ಬರೋಣ"** (ಇಬ್ರಿಯ 10:22) ಎಂದು ಬರೆದದೆ. ಆದರೆ, ಹೆಚ್ಚಿನವರಿಗೆ 'ಪವಿತ್ರಾತ್ಮನ ಸಾಕ್ಷಿ' ಎಂಬುದರ ಬಗ್ಗೆ ಅಥವಾ ನಾವು ದೇವರ ಮಕ್ಕಳಾಗಿದ್ದೇವೆಂಬುದಕ್ಕೆ ನಿರೀಕ್ಷಿಸಬಹುದಾದ ಆತ್ಮನ ಸಾಕ್ಷಿಗಳ ಅಂಶಗಳಾದರೂ ಏನು ಎಂಬುದರ ಬಗ್ಗೆ ಯಾವ ರೀತಿಯ ಕಲ್ಪನೆಯಾಗಲೀ ಸ್ವಲ್ಪವಾದರೂ ಇಲ್ಲ.

ಆದುದರಿಂದ, ಉದ್ಭವಿಸುವ ಪ್ರಶ್ನೆಗಳು ಬಹು ಮಹತ್ವದ್ದಾಗಿವೆ – ತಂದೆ ದೇವರೊಂದಿಗೆ ನಮ್ಮ ಪ್ರಾಯಶ್ಚಿತ್ತ ಸಂಧಾನದ ಬಗ್ಗೆ, ನಾವು ಆ ತಂದೆಯ ಮಕ್ಕಳಾಗಿದ್ದೇವೆಂಬ ಬಗ್ಗೆ, ದೈವಿಕ ಅನುಗ್ರಹದಿಂದ ದೇವರು ಆತನನ್ನು ಪ್ರೀತಿಸುವವರಿಗಾಗಿ ಕಾದಿರಿಸಿದ ಭವ್ಯವಾದ ಸಂಗತಿಗಳಿಗೆ ನಾವು ಸಿದ್ಧರಾಗುತ್ತಿದ್ದೇವೆಂಬ ಬಗ್ಗೆ ಆತ್ಮವು ಹೇಗೆ ಸಾಕ್ಷಿಯಾಗುತ್ತದೆ? ಮತ್ತು ಮಿಲಿಯಾಂತರ ಯುಗದಲ್ಲಿ ಕ್ರಿಸ್ತನೊಂದಿಗೆ ಯಾರು ಬಾಧ್ಯಸ್ಥರಾಗುವರು? ಎಂಬ ಪ್ರಶ್ನೆಗಳು. ಪವಿತ್ರಾತ್ಮನ ಸಾಕ್ಷಿ ಎಂದರೇನು ತಿಳಿಯದ ಕ್ರೈಸ್ತರು ಇತರ ಸಂಗತಿಗಳ ಬಗ್ಗೆ ಸಾಮಾನ್ಯವಾಗಿ ಹೆಚ್ಚಾಗಿ ಗಲಿಬಿಲಿಗೊಂಡಿರುತ್ತಾರೆ. ಆತ್ಮನ ಸಾಕ್ಷಿಯ ಬಗ್ಗೆ ಅವರು ತಿಳಿಯದಿರುವ ಕಾರಣ, ಕರ್ತನ ಜನರಲ್ಲಿ ಉತ್ತಮರಾದ ಹಲವರು ಇದನ್ನು ತಾವು ಹೊಂದಿದ್ದೇವೆ ಅಥವಾ ಇಲ್ಲ ಎಂಬುದನ್ನು ಅರಿಕೆ ಮಾಡಬೇಕು. ಇತರರು, ಜ್ಞಾನಕ್ಕಿಂತ ಮಿಗಿಲಾದ ಪೂರ್ಣವಾದ ಭರವಸೆಯುಳ್ಳವರು ತಮಗೆ ಆತ್ಮನ ಸಾಕ್ಷಿಯುಂಟೆಂದು ಹಕ್ಕಿನಿಂದ ಹೇಳಿಕೊಳ್ಳುತ್ತಾರೆ ಮತ್ತು ಅವರ ಸಂತೋಷದ ಭಾವನೆಗಳನ್ನು ಇದಕ್ಕಾಗಿ ಉಲ್ಲೇಖಿಸುತ್ತಾರೆ. ಆದರೆ ಅವರು ನಿಷ್ಕಪಟಿಗಳಲ್ಲವಾದರೆ, ತಕ್ಷಣದಲ್ಲಿ ಅಥವಾ ತಡವಾಗಿಯಾದರೂ ಅವರು ಆತುಕೊಂಡಿರುವ ಸಾಕ್ಷಿಯು ಅತ್ಯಂತ ಅತೃಪ್ತಕರವಾಗಿದೆ, ಅದು ಅತ್ಯಂತ ಅಗತ್ಯದ ಸಮಯದಲ್ಲಿ ಕೈಕೊಡುತ್ತದೆ ಎಂದು ಅರಿಕೆ ಮಾಡಲೇ ಬೇಕಾಗುತ್ತದೆ. ಆರೋಗ್ಯವು ಅನುಕೂಲಕರವಾಗಿದ್ದಾಗ, ಆರ್ಥಿಕವಾಗಿ ಅಭಿವೃದ್ಧಿ ಹೊಂದಿರುವಾಗ, ಹೆಚ್ಚು ಮಂದಿ ಸ್ನೇಹಿತರುಗಳು ಇರುವಾಗ ಎಲ್ಲರೂ ಸಂತೋಷಿಸುತ್ತಾರೆ ಮತ್ತು ಅದರ ಬಗ್ಗೆ ಮಾತನಾಡುತ್ತಾರೆ. ಆದರೆ ಇವುಗಳಲ್ಲಿ ಕೆಲವು ಅಥವಾ

ಎಲ್ಲವೂ ತಲೆಕೆಳಗಾದಾಗ ಅದಕ್ಕೆ ಅನುಪಾತವಾಗಿ ಅವರು ಅಸಂತೋಷಗೊಳ್ಳುತ್ತಾರೆ; ಅವರು 'ಆತ್ಮನ ಸಾಕ್ಷಿ' ಎಂದು ತಿಳುಕೊಂಡಿರುವುದನ್ನು ಕಳಕೊಳ್ಳುತ್ತಾರೆ ಮತ್ತು ತುಂಬಾ ವ್ಯಸನಗೊಂಡವರಾಗಿ **"ನಾನು ಕರ್ತನನ್ನು ಮೊದಲಿಗೆ ಕಂಡುಕೊಂಡಾಗ ಇದ್ದ ಆ ಆಶೀರ್ವಾದವು ಈಗ ಎಲ್ಲಿದೆ?"** (Where is the blessedness I knew, when first I found the Lord ?) ಎಂದು ಕೂಗಿಕೊಳ್ಳುತ್ತಾರೆ.

ಅವರುಗಳು ತಮ್ಮ ಭಾವನೆಗಳ ದೆಸೆಯಿಂದ ಮೋಸಹೋಗಿರುತ್ತಾರೆ ಅಥವಾ ತಪ್ಪು ದಾರಿ ಹಿಡಿದಿರುತ್ತಾರೆ. ಅವರು ವಿರೋಧಿಯ ನಡಿಸುವಿಕೆ ಯಲ್ಲಿರುವಾಗ, ಪ್ರಲೋಭನೆಗಳಿಗೆ ನೇರವಾಗಿ ತುತ್ತಾಗಿ ತಾವು ದೇವರ ಬಳಿಗೆ ಎಳೆಯಲ್ಪಡುತ್ತಿದ್ದೇವೆಂಬ ಭ್ರಮೆಯಿಂದ ಸಂತೋಷಗೊಳ್ಳುತ್ತಾರೆ. ಇದು ಆಗಾಗ್ಗೆ 'ಕೃಪೆಯಿಂದ ಬಿದ್ದು ಹೋಗುವ' ಕಾರಣವಾಗುತ್ತದೆ ಮತ್ತು ಇದನ್ನು ಅನುಭವಿಸಿದ ಕೆಲವರಿಗೆ ಮತ್ತು ಅವರ ಸ್ನೇಹಿತರುಗಳಿಗೆ ಅಚ್ಚರಿಯುನ್ನುಂಟುಮಾಡುತ್ತದೆ. ನೆಚ್ಚಿಕೊಳ್ಳಬಾರದ 'ಸಾಕ್ಷಿ'ಯ ಕಾರಣ ಅವರು ಮೋಸಹೋಗಿ ತಾವು ಸುರಕ್ಷಿತರಾಗಿದ್ದೇವೆಂದು ಭಾವಿಸಿಕೊಳ್ಳುತ್ತಾರೆ ಆದರೆ ಯಾವ ಭದ್ರತೆಯೂ ಇಲ್ಲದವರಾಗಿ ಪ್ರಲೋಭನೆಗಳಿಗೆ ಸುಲಭವಾಗಿ ತುತ್ತಾಗುತ್ತಾರೆ ಮತ್ತು ತಾವು 'ಕರ್ತನೊಂದಿಗೆ ಬಹಳ ಸಂತೋಷವಾಗಿದ್ದೇವೆಂದು(?)' ಭ್ರಮಿಸಿಕೊಳ್ಳುತ್ತಾರೆ. ಪುನಃ, ಪರೀಕ್ಷೆಗಳು ಮತ್ತು ಜೀವನದಲ್ಲಿನ ನಿರಾಶೆಗಳು ನಮ್ಮನ್ನು ತಂದೆಯ ಬಳಿಗೆ ಸೇರಿಸಲು ರೂಪಿತಗೊಳ್ಳುತ್ತವೆ. ಮತ್ತು ಇವುಗಳು ನಮ್ಮ ವಿಮೋಚಕನ ಅನುಕಂಪ ಮತ್ತು ಪ್ರೀತಿಯನ್ನು ನಾವು ಮೆಚ್ಚಿಕೊಳ್ಳುವಂತೆ ಮಾಡುತ್ತವೆ. ಇವುಗಳು ಈ ವರ್ಗದವರಲ್ಲಿ ಭಾಗಶಃ ಕಳೆದುಹೋಗಿರುತ್ತವೆ; ಅವರು ತಪ್ಪಾಗಿ ಆತ್ಮನ ಸಾಕ್ಷಿಯೆಂದು ಭಾವಿಸಿಕೊಂಡಿದ್ದ ತಮ್ಮ ಭಾವನೆಗಳ ಸಾಕ್ಷಿಯನ್ನು ಕಳಕೊಳ್ಳುವುದರಿಂದ ಅವರು ವಿಯೋಗ ದುಃಖಕ್ಕೆ ಒಳಗಾಗುತ್ತಾರೆ ಮತ್ತು ಒಳ್ಳೆಯ ಭಾವನೆಗಳು ಮರಳುವಿಕೆಗಾಗಿ ಬಹಳಷ್ಟು ಹಸಿಯುತ್ತಾರೆ ಮತ್ತು ಬಾಯಾರಿಕೆ ಹೊಂದುತ್ತಾರೆ. ಅವರು ಕರ್ತನ ಎದೆಗೆ ಭರವಸೆಯಿಂದ ಒರಗಿಕೊಂಡು ಆತನ ಅನ್ಯೋನ್ಯತೆ ಯಲ್ಲಿರುವಾಗ, ಮಾತ್ರವೇ ದೊರೆಯುವ ಹಲವಾರು ಅಮೂಲ್ಯ ಸಂಗತಿಗಳನ್ನು ಈಗ ಜೀವನವೆಂಬ ಗೆತ್ಸೆಮನೆಯಲ್ಲಿ ಹಾದುಹೋಗುವಾಗ ಕಳಕೊಂಡಿರುತ್ತಾರೆ.

ಮತ್ತೊಂದು ವರ್ಗದ ಕ್ರೈಸ್ತರಿಗೆ ತಮಗೆ ಆಗುವ ಭಾವನೆಗಳು, ಸಾಕ್ಷಿಯಾಗಿರುವುದಕ್ಕೆ ಆಧಾರವಿಲ್ಲ ದಿರುವುದರಿಂದ ದೇವರು (ತಮಗೆ) ತನ್ನ ಅನುಗ್ರಹವನ್ನು ನಿರಾಕರಿಸುತ್ತಾನೆ ಎಂಬುವ ತೀರ್ಮಾನಕ್ಕೆ ಬರುತ್ತಾರೆ. ಅವರು ದೇವರ ಕುಟುಂಬದಲ್ಲಿ ಪುತ್ರರೆಂದು ಅಂಗೀಕರಿಸಲು ಯಾವುದೇ ಖಚಿತವಾದ ಆಧಾರವಿಲ್ಲವೆಂದು ತಿಳಿದುಕೊಳ್ಳುತ್ತಾರೆ. ಅವರ ಈ ಅನುಮಾನವು ಈ ಕೆಳಗಣ ಚಿರಪರಿತವಾದ ಸಂಗೀತದಲ್ಲಿ ವ್ಯಕ್ತವಾಗುತ್ತದೆ :

*'Tis a point I long to know –*
*Oft it causes anxious thought:*
*Do I love the Lord or no?*
*Am I His or am I not?*

ಈ ಅನಿಶ್ಚಿತತೆಯು ಆಯ್ಕೆ ಸಿದ್ಧಾಂತದ ತಪ್ಪು ತಿಳುವಳಿಕೆಯ ಕಾರಣ ಭಾಗವಾಗಿಯೂ ಕಂಡು ಬರುತ್ತದೆ : ಆದಾಗ್ಯೂ ಈ ಸ್ನೇಹಿತರುಗಳು ಅವರ ಬದಲಾಗಬಹುದಾದ ಭಾವನೆಗಳು ಅವರ ಪುತ್ರತ್ವವನ್ನು ತೀರ್ಮಾನಿಸಲು ಸರಿಯಾದ ಒರೆಗಲ್ಲು ಆಗಲಾಗದು ಎಂಬ ತೀರ್ಮಾನಕ್ಕೆ ಬರುತ್ತಾರೆ. ಇತರರು, ವೇದವಾಕ್ಯವು ಹೇಳುವಂತೆ **"ಸ್ಥಿರಚಿತ್ತನನ್ನು ಶಾಂತಿಯಲ್ಲಿ ನೆಲೆಗೊಳಿಸಿ ಕಾಯುವಿ; ಅವನಿಗೆ ನಿನ್ನಲ್ಲಿ ಭರವಸವಿದೆ"** (ಯೆಶಾಯ 26:03) ಅವರ ಮಕ್ಕಳತನವನ್ನು ಅವರ ಶಾಂತ ಮನಸ್ಸಿನ ಆಧಾರದ ಮೇಲೆ ನಿರ್ಣಯಿಸಲಾಗುವುದು; ಆದರೆ ಅವರು ಅನ್ಯಜನರನ್ನು ಮತ್ತು ಈ ಲೋಕದವರನ್ನು ನೋಡುವಾಗ ಅವರಲ್ಲಿ ಅನೇಕರು ಸುವ್ಯಕ್ತವಾಗಿ ಶಾಂತಮನಸ್ಸನ್ನು ಸಹಾ ಹೊಂದಿರುವವರನ್ನು ನೋಡಿ, ಆತ್ಮನ ಸಾಕ್ಷಿಯ ಬಗ್ಗೆ ಅವರ ದೃಷ್ಟಿಕೋನವು ಅವರ ನಿರೀಕ್ಷೆಯನ್ನು ಎತ್ತಿಹಿಡಿಯಲು ಅಥವಾ ಅವರಿಗೆ ಭರವಸೆ ನೀಡುವಂತೆ ಸಾಕಾಗುವಷ್ಟು ಇಲ್ಲವೆಂದು ಸಾಬೀತಾಗುತ್ತದೆ. ನಂತರದಲ್ಲಿ ಅಂಧಕಾರದ ಸಮಯವು ಬರುತ್ತದೆ, ಆಗ ಅವರು 'ಮೋಸಹೋಗುವುದು ನಂತರದಲ್ಲಿ ಯಾತನೆಗೊಳ ಪಡುವುದು ಎಷ್ಟು ಸುಲಭ ! ಹಾಗಾಗುವಂತೆ ಅವರು ಆತ್ಮನನ್ನು ದುಃಖಪಡಿಸಿದ್ದಾರೆ – ಯಾಕೆಂದರೆ **"ಹೆದರಿಕೆಯು ಯಾತನೆಯನ್ನು ಹೊಂದುತ್ತಾ ಇರುವುದು"** – 1 ಯೋಹಾನ 4:18.

ಬೋಳೆ ಸ್ವಭಾವದವರು (ಸುಲಭವಾಗಿ ನಂಬುವವರು), [ಅದನ್ನೇ ನಂಬಿಕೆ ಎಂದು ಹೆಸರಿಸಿದವರು] ಆತ್ಮನು ಒಬ್ಬ ವ್ಯಕ್ತಿ ಎಂಬಂತೆ ನೋಡುತ್ತಾರೆ. ಅವರು ತಮ್ಮ ಅಂತರಂಗದ ಕಿವಿಗಳಲ್ಲಿ ಆತ್ಮನು ಪಿಸುಗುಟ್ಟುತ್ತಾನೆಂದು ಭ್ರಮಿಸುತ್ತಾರೆ ಮತ್ತು ನಂತರದಲ್ಲಿ ಪಿಸುಗುಟ್ಟಲ್ಪಟ್ಟ ಮಾತುಗಳು ನಿರಪೇಕ್ಷವಾಗಿ ಅಸತ್ಯವಾದುದೆಂದು ತಿಳಿದುಬರುವುದಾದರೂ ಅವರು ತಮ್ಮನ್ನೇ ಇದಕ್ಕಾಗಿ ಅಭಿನಂದಿಸಿಕೊಳ್ಳುತ್ತಾರೆ. ಇನ್ನೂ ಹೆಚ್ಚಿನ ತಾರ್ಕಿಕ ಮನೋಭಾವವುಳ್ಳ ಕ್ರೈಸ್ತರು, ತಮ್ಮನ್ನು ತಾವೇ ಮೋಸಗೊಳಿಸಲಾಗದವರು, ಪವಿತ್ರಾತ್ಮನ ಸಾಕ್ಷಿ ಇರುವ ತಮ್ಮ ಸ್ನೇಹಿತರ ದೃಢತೆಯ ಮೇಲೆ ಕಳವಳಗೊಳ್ಳುತ್ತಾರೆ. ಹಾಗಾಗಿ ಆಶ್ವಾಸನೆ ಇಲ್ಲದವರಾಗಿದ್ದಾರೆ.

ಆತ್ಮನು ಒಬ್ಬ ವ್ಯಕ್ತಿ ಎಂಬ ತಪ್ಪು ದೃಷ್ಟಿಕೋನದ ಕಾರಣ ತೊಡಕುಂಟಾಗುತ್ತದೆ ಅದು ಅದರ ಸಾಕ್ಷಿಹೇಳುವಿಕೆಗೆ ವ್ಯಕ್ತಿತ್ವವನ್ನು ಅನ್ವಯಿಸಬಯಸುತ್ತದೆ. ದೇವರ ಆತ್ಮನು ದೇವರು ಬಳಕೆಮಾಡಲು ಸಂತೋಷಿಸುವ ಯಾವುದಾದರೂ ಶಕ್ತಿ ಅಥವಾ ಪ್ರಭಾವವಾಗಿದೆ ಎಂಬ ಸತ್ಯವು ಗ್ರಹಿಕೆಯಾದಾಗ, ಸಂಗತಿಯು ಸ್ಪಷ್ಟವಾಗುತ್ತದೆ ಮತ್ತು 'ಆತ್ಮನ ಸಾಕ್ಷಿಯನ್ನು' ವ್ಯತ್ಯಾಸಪಡಿಸಿ ಗುರುತಿಸಲು ಸುಲಭವಾಗುತ್ತದೆ. ಈ ಸಾಕ್ಷಿಯನ್ನು ಹೊಂದಿದವರಿಗೆ ಅದರ ಖಚಿತತೆಯನ್ನು ತಿಳಿದುಕೊಳ್ಳುವುದು ಆಶೀರ್ವಾದಕರ ಸಂಗತಿಯಾಗಿದೆ. ಆದರೆ ಈ ಸಾಕ್ಷಿಯನ್ನು ಹೊಂದದವರಿಗೆ ತಮ್ಮ ಕೊರತೆಯನ್ನು ಖಚಿತಪಡಿಸಿಕೊಳ್ಳುವುದೂ ಆಶೀರ್ವಾದಕರವೇ: ಆದಕಾರಣ ಅವರು ಎಲ್ಲಾ ನಿಬಂಧನೆಗಳನ್ನೂ ಪೂರೈಸಿ ಸಾಕ್ಷಿಯನ್ನು ಪಡಕೊಳ್ಳಬಹುದು. ಇದಿಲ್ಲದೆ ಯಾರೂ ತಮ್ಮನ್ನು ದೇವರ ಮಕ್ಕಳೆಂದು ತಂದೆಯ ಸ್ವೀಕೃತ ನೆಲೆಯಲ್ಲಿ ಪರಿಗಣಿಸಿಕೊಳ್ಳುವ ಹಕ್ಕುಳ್ಳವರಾಗುವುದಿಲ್ಲ.

ಆದರೆ ನಿಜವಾದ ಸಾಕ್ಷಿಯುಳ್ಳವರಿಗೆ – ಸರಿಯಾದ ಅನುಭವ ಉಳ್ಳವರಿಗೆ ಮತ್ತು ಅವುಗಳನ್ನು ಯಾವ ರೀತಿಯಲ್ಲಿ ಓದಿಕೊಳ್ಳಬೇಕೆಂದು ಕಲಿತವರಿಗೆ ಎಂಥಾಃ ದೈವಿಕವಾದ ಸಂತೋಷ ಮತ್ತು ಶಾಂತಿಯು ಉಂಟಾಗುತ್ತದೆ! ನಿಜವಾಗಿಯೂ ಅಂಥವರಿಗೆ ದುಃಖದಲ್ಲಿ ಸಂತೋಷವು, ಕತ್ತಲೆಯಲ್ಲಿ ಬೆಳಕು, ತೊಂದರೆಯಲ್ಲಿ ಸಮಾಧಾನವು, ಬಲಹೀನತೆಯಲ್ಲಿ ಬಲಾಧಿಕ್ಯವೂ ಉಂಟಾಗುತ್ತದೆ. ಮತ್ತು ಈ ಪ್ರಸ್ತಾಪದ ಬಗ್ಗೆ ಪೂರ್ಣ ಹಾಗೂ ಕೂಲಂಕುಷವಾದ ಆದೇಶಗಳು ಎಲ್ಲಾ ವಿಷಯಗಳ ಬಗ್ಗೆ ಆ ಅದ್ಭುತವಾದ ಪುಸ್ತಕದಲ್ಲಿ, ತಂದೆಯ ಮಾತುಗಳಲ್ಲಿ ಅಂದರೆ ಸತ್ಯವೇದದಲ್ಲಿ ಕಂಡುಬರುತ್ತದೆ. ಅದರಲ್ಲಿ ಮತ್ತು ಅದರಲ್ಲಿನ ಸಾಕ್ಷ್ಯಗಳ ಮೂಲಕ ದೇವರ ಆತ್ಮವು ನಮ್ಮ ಆತ್ಮಗಳೊಂದಿಗೆ ಸಾಕ್ಷಿ ಹೇಳುತ್ತದೆ :

*How firm a foundation, ye saints of the Lord*
*Is laid for your faith in his excellent word.*
*What more can he say than to you he hath said:*
*You who unto Jesus for refuge have fled!"*

## ಆತ್ಮನ ಸಾಕ್ಷಿಯನ್ನು ತಿಳುಕೊಳ್ಳುವುದು ಹೇಗೆ ?
## How to Know The Spirits Witness

ಒಬ್ಬ ಮಾನವನ ಮನಸ್ಸು ಅಥವಾ ಆತ್ಮವನ್ನು ಆತನ ಮಾತುಗಳಿಂದ ತಿಳುಕೊಳ್ಳಬಹುದು. ಅದರಂತೆ ನಾವು ದೇವರ ಮನಸ್ಸು ಅಥವಾ ಆತನ ಆತ್ಮನನ್ನು ಆತನ ಮಾತುಗಳಿಂದಲೂ, ವ್ಯವಹಾರಗಳಿಂದಲೂ ತಿಳುಕೊಳ್ಳಬಹುದು. ಆತನ ಮಾತುಗಳ ಸಾಕ್ಷ್ಯವೇನೆಂದರೆ ಆತನ ಬಳಿಗೆ (ವಿಶ್ವಾಸದ ಮೂಲಕ, ಕೆಟ್ಟ ಮತ್ತು ಸತ್ತ ಕಾರ್ಯಗಳಿಂದ ಕ್ರಿಸ್ತನ ಮೂಲಕ ಸುಧಾರಣೆ ಪಡೆದು) ಬರುವವರೆಲ್ಲರೂ ಅಂಗೀಕೃತಗೊಳ್ಳುತ್ತಾರೆ ಎಂಬುದೇ (ಇಬ್ರಿಯ 7:25 ನೋಡಿರಿ). ಆದುದರಿಂದ ಆತ್ಮನ ಸಾಕ್ಷಿಯನ್ನು ಬಯಸುವವರು ತಮ್ಮಲ್ಲೇ ಈ ಪ್ರಶ್ನೆಗಳನ್ನು ಹಾಕಿಕೊಳ್ಳಬೇಕಾಗುತ್ತದೆ :–

"ಕ್ರಿಸ್ತನನ್ನು ನನ್ನ ವಿಮೋಚಕನು ಎಂದು ಗ್ರಹಿಸಿಕೊಳ್ಳುವಂತೆ ಮತ್ತು ಆತನ ನೀತಿವಂತಿಕೆಯ ಮೂಲಕ ಮಾತ್ರವೇ ನಾನು ಪರಲೋಕದ ತಂದೆಯನ್ನು ಸಮೀಪಿಸುವಂತೆ ಮತ್ತು ಆತನಿಂದ ಅಂಗೀಕರಿಸಲ್ಪಡುವಂತೆ ನಾನು ಎಂದಾದರೂ ಕ್ರಿಸ್ತನಿಂದ ಎಳೆಯಲ್ಪಟ್ಟವನಾ/ಳಾಗಿದ್ದೇನೋ? "

ಈ ಪ್ರಶ್ನೆಯನ್ನು ಸಕಾರಾತ್ಮಕವಾಗಿ ಉತ್ತರಿಸುವುದಾದರೆ, ಮುಂದಿನ ಪ್ರಶ್ನೆ ಏನೆಂದರೆ :–

"ನಾನು ಎಂದಾದರೂ ನನ್ನನ್ನು, ನನ್ನ ಸಮಯವನ್ನು, ನನ್ನ ಮೇಧಾಶಕ್ತಿಯನ್ನು, ನನ್ನ ಪ್ರಭಾವವನ್ನು ಮತ್ತು ನನ್ನ ಎಲ್ಲವುಗಳನ್ನು ಕರ್ತನಿಗೆ ಸಂಪೂರ್ಣವಾಗಿ ಪ್ರತಿಷ್ಟಿಸಿಕೊಂಡಿದ್ದೇನೋ?" ಎಂಬುದು.

ಈ ಪ್ರಶ್ನೆಯನ್ನು ಸಹಾ ಸಕಾರಾತ್ಮಕವಾಗಿ ಉತ್ತರಿಸುವುದಾದರೆ, ಪ್ರಶ್ನಿಸುವಾತನು, ಪ್ರಿಯಕುಮಾರನ ಮುಂದೆ ತಂದೆಯಲ್ಲಿ ತಾವು ಆತನಿಂದ ಅಂಗೀಕರಿಸಲ್ಪಟ್ಟಿದ್ದೇವೆಂದು ಮತ್ತು ಆತನ ಮಕ್ಕಳಾಗಿ ಮಾನ್ಯತೆಹೊಂದಿದ್ದೇವೆಂದು ಪೂರ್ಣ ಭರವಸೆಯಿಂದ ತಿಳುಕೊಳ್ಳಬಹುದು. ತಮ್ಮ ಸ್ವಂತ ಹೃದಯದ ಆಕಾಂಕ್ಷೆಗಳನ್ನು, ಮನೋಭಾವನೆಗಳನ್ನು ಪರಿಶೋಧಿಸಿಕೊಳ್ಳುವಾಗ ಆತನು ತಾನು ಕ್ರಿಸ್ತನ ಅರ್ಹತೆಯನ್ನು ಇನ್ನೂ ನಂಬುತ್ತಿರುವುದಾಗಿ, ತಾನು ಇನ್ನೂ ತಂದೆಯ ಚಿತ್ತವನ್ನು ನೆರವೇರಿಸಿಕೊಳ್ಳುವುದಕ್ಕಾಗಿ ಪ್ರತಿಷ್ಟಿಸಲ್ಪಟ್ಟಿರುವುದಾಗಿ ಮತ್ತು ಈ ರೀತಿಯಲ್ಲಿ ದೈವಿಕತೆಯೊಂದಿಗೆ ಸಾಮರಸ್ಯ ಮತ್ತು ಸಂಬಂಧಗಳು ತರುವ ಮಧುರ ಭರವಸೆ ಮತ್ತು ಶಾಂತಿಯನ್ನು ಆತನು ತನ್ನ ಹೃದಯದಲ್ಲಿ ಮುಂದುವರೆಯಲು ಅನುಮಾಡಿಕೊಡುತ್ತಾನೆ ಎಂಬುದನ್ನು ಕಂಡುಕೊಳ್ಳುತ್ತಾನೆ. ಕ್ರಿಸ್ತನಲ್ಲಿ ಕರ್ತನ ಈ ಕೃಪೆಯ ನಿಶ್ಚಿತಾಭಿಪ್ರಾಯವು ನಮ್ಮ ಸ್ವಂತ ಅನುಭವಗಳ ಸತ್ಯತೆಗಳಿಂದ ರಚಿತವಾಗಿದ್ದು, ಕರ್ತನ ಮಾತುಗಳ ಬದಲಾಗದ ಲಕ್ಷಣಗಳ ಮೇಲೆ ಕಟ್ಟಲ್ಪಟ್ಟಿರುವುದರಿಂದ ಅದು ಬದಲಾಗುವ ಭಾವನೆಗಳೆಂಬ ಮರಳಿನ ಮೇಲೆ ಕಟ್ಟಲ್ಪಟ್ಟಂತೆ ಅದನ್ನು ಪಲ್ಲಟಿಸಲಾಗದು ಅಥವಾ ಮಾರ್ಪಡಿಸಲಾಗದು. ಅಂಧಕಾರದ ಸಮಯದಲ್ಲಿ ಯಾವುದಾದರೂ ಅನುಮಾನಗಳು ನುಸುಳಿದಲ್ಲಿ ನಾವು

ದೇವರ ವಾಕ್ಯವೆಂಬ 'ದೀಪ'ವನ್ನು ಹಿಡಿದುಕೊಂಡು ಹೊಸದಾಗಿ ಸತ್ಯಾಂಶಗಳನ್ನೂ, ಅವುಗಳ ಬುನಾದಿಯನ್ನೂ ಹುಡುಕಬೇಕಾಗುತ್ತದೆ. ನಮ್ಮ ಹೃದಯಗಳು ಕರ್ತನಿಗೆ ಇನ್ನೂ ನಿಷ್ಠೆಯಿಂದ ಇರುವುದಾದಲ್ಲಿ ನಂಬಿಕೆ. ಸಂತೋಷ ಮತ್ತು ಸಮಾಧಾನಗಳು ತಕ್ಷಣವೇ ತಾನೇ ತಾನಾಗಿ ಹಿಂತಿರುಗುತ್ತವೆ; ನಾವು ನಮ್ಮಲ್ಲಿರುವ ಆತನ 'ಅಮೂಲ್ಯ ರಕ್ತ'ದಲ್ಲಿನ ವಿಶ್ವಾಸವು ನುಚ್ಚುನೂರಾಗುವುದನ್ನಾಗಲೀ ಅಥವಾ ನಮ್ಮ ಪ್ರತಿಷ್ಠೆಯು ಜಾರಿಹೋಗುವುದನ್ನಾಗಲೀ ಕಂಡುಕೊಳ್ಳುವವರಾದರೆ, ನಮಗೆ ಈ ಸಂಗತಿಯ ನಿಜವಾದ ಸ್ಥಿತಿಯ ಅರಿವಿರುವುದರಿಂದ, ತಕ್ಷಣದಲ್ಲಿ ಅದನ್ನು ಸರಿಪಡಿಸಬಹುದು ಮತ್ತು ಆ ರೀತಿಯಲ್ಲಿ "ವಿಶ್ವಾಸದ ಪೂರ್ಣ ಭರವಸೆ"ಯನ್ನು ಪುನಃಸ್ಥಾಪಿಸಲೂ ಬಹುದು (ಇಬ್ರಿಯ 10:22 ನೋಡಿರಿ). ಆದರೆ ಈ ಭರವಸೆಯನ್ನು ಹೊಂದಿದ ಪ್ರತಿಯೊಬ್ಬರೂ 'ಕರ್ತನು ಸತ್ಯವಂತನು' ಎಂಬ ಮುದ್ರೆಯನ್ನು ಹಾಕಿಕೊಂಡವ ನಾಗಿದ್ದಾನೆ (ಯೋಹಾನ 3:33) ಎಂಬುದನ್ನು ಗಮನಿಸಬೇಕು: ನಮ್ಮ ಕರ್ತನು ಬದಲಾಗುವವನಲ್ಲ, ಆತನು ನಿನ್ನೆಯೂ, ಇಂದೂ, ನಾಳೆಯೂ, ಎಂದೆಂದೂ ಒಂದೇ ಆಗಿದ್ದಾನೆ. ಕರ್ತನ ಜನರು ಒಮ್ಮೆ ತಾವು ದೇವರ ಕೃಪಾ ಸ್ಥಿತಿಗೆ ಬಂದ ಮೇಲೆ, ಅವರ ಹೃದಯವು ನಿಷ್ಠೆಯಿಂದಿರುವವರೆಗೂ, ಅವರ ಆಶೆ ಆಕಾಂಕ್ಷೆಗಳು ದೇವರ ಚಿತ್ತದೊಂದಿಗೆ ಸಾಮರಸ್ಯದಲ್ಲಿರುವವರೆಗೂ ಅವರು ತಮ್ಮ ಹೃದಯಗಳಲ್ಲಿ ಪ್ರೀತಿಯ ಮಾತುಗಳಲ್ಲಿ ಸಂಕ್ಷಿಪ್ತವಾಗಿ ತಿಳಿದು ಬರುವ ದೇವರಾಜ್ಞೆಗಳಿಗೆ ವಿಧೇಯರಾಗಿರುವವರೆಗೂ ತಾವು ಅದೇ ಸ್ಥಿತಿಯಲ್ಲಿ ಮುಂದುವರೆಯುತ್ತೇವೆ ಎಂಬ ಪೂರ್ಣ ಭರವಸೆಯುಳ್ಳವರಾಗಿರಬೇಕು. (ಇಬ್ರಿಯ 11:6, 13:8 ಇವುಗಳನ್ನು ನೋಡಿರಿ).

ಯಾರು ಯಾರು ನಿರ್ದಿಷ್ಟವಾದ ಹೆಜ್ಜೆಗಳನ್ನು ಇಟ್ಟಿದ್ದಾರೋ ಅಂಥವರಿಗೆ ತಾವು 'ಕರ್ತನ ಮಕ್ಕಳು' ಎಂಬ ಕರ್ತನ ವಾಕ್ಯದ "ಸಾಕ್ಷಿ"ಯ ಭರವಸೆ ಉಂಟು; ಇದು ಸುವಾರ್ತಾ ಯುಗದಲ್ಲಿ ಅವರು ನಿಜವಾದ ದ್ರಾಕ್ಷೆ ಬಳ್ಳಿಯ (ಯೋಹಾನ 15:1 ನೋಡಿರಿ) ಕೊಂಬೆಯಾಗಿದ್ದಾರೆ ಅಥವಾ ನಿಜವಾದ ಕ್ರೈಸ್ತ ಸಭೆಯ ಪರಿಕ್ಷಾರ್ಥ (Probationary) ಸದಸ್ಯರು ಎಂಬುದನ್ನು ಸೂಚಿಸುತ್ತದೆ. ಅಂಥವರಿಗೆ ಅವರು ಕ್ರಿಸ್ತನ ದೇಹವಾದ ನಿಜವಾದ ಸಭೆಯನ್ನು ಸೇರಿದ್ದಾರೆಂದು ದೇವರ ವಾಕ್ಯವು ಸಾಕ್ಷಿ ಹೇಳುತ್ತದೆ. ಈ ಸಾಕ್ಷಿಯು ಅವರ ಆತ್ಮಕ್ಕೆ, ಮನಸ್ಸಿಗೆ ದೇವರಾತ್ಮನಿಂದ ನೀಡಲಾಗುವುದು ಎಂದು ಆತನ ವಾಕ್ಯಗಳ ಮೂಲಕ ಸಾಕ್ಷಿ ಹೇಳಲ್ಪಡುತ್ತದೆ. ಇದೇ ಸತ್ಯದ ಆತ್ಮನು ಅಂಥವರಿಗೆ ಅವರ ಹೃದಯಗಳು ಕರ್ತನಿಗೆ ನಿಷ್ಠಾವಂತಿಕೆಯಲ್ಲಿ ಪರೀಕ್ಷಾರ್ಥ ಸಮಯದ ಅಂತ್ಯದವರೆಗೂ ಮುಂದುವರೆದರೆ – ಅವರ ಸ್ವಯಿಚ್ಛೆಯಿಂದ ಮತ್ತು ಸಂತೋಷವಾಗಿ ತಮ್ಮ ತಮ್ಮ ಶಿಲುಬೆಯನ್ನು ಪ್ರತಿನಿತ್ಯವೂ ಹೊತ್ತುಕೊಂಡು ಆತನನ್ನು ಹಿಂಬಾಲಿಸುವವರಾದರೆ. ಅವರ ಒಡೆಯನ ಹೆಜ್ಜೆಜಾಡಿನಲ್ಲಿ ನಡೆಯುವ ಉತ್ತಮವಾದುದನ್ನು ಬಯಸುವುದಾದರೆ, ಅವರ ಕ್ರಮ ಮುಗಿದು ಪುನರುತ್ಥಾನದಲ್ಲಿ ಅಂದರೆ ಪ್ರಥಮ ಪುನರುತ್ಥಾನದಲ್ಲಿ ಅವರನ್ನು ಭಾಗಿದಾರರನ್ನಾಗಿ ಮಾಡಿಕೊಂಡ ಮೇಲೆ ಕ್ರಿಸ್ತನ ಸಭೆಯಲ್ಲಿ ಅವರ ಪರೀಕ್ಷಾರ್ಥ ಸದಸ್ಯತ್ವವನ್ನು ಕೂಡಲೇ ನಿಜವಾದ ಸದಸ್ಯತ್ವಕ್ಕೆ ಬದಲಾಯಿಸಲಾಗುವುದು. (ಫಿಲಿಪ್ಪಿ 3:10 ನೋಡಿರಿ).

ಆದಾಗ್ಯೂ, ದೇವರ ಆತ್ಮನು, ಈಗಾಗಲೇ ನಿಜವಾದ ದ್ರಾಕ್ಷೆ ಬಳ್ಳಿಯ ಕೊಂಬೆಗಳಾಗಿರುವವರನ್ನು ಅವರು ಅಪ್ರಮಾಣಿಕರಾಗಿ ಕಂಡು ಬಂದಲ್ಲಿ, ಅವರು ಪ್ರೀತಿಯ ಉತ್ತಮವಾದ ಫಲಗಳನ್ನು ಬಿಡಲು ವಿಫಲವಾದಲ್ಲಿ ಅಂಥಾಃ ಕೊಂಬೆಗಳನ್ನು ಕಡಿದು ಹಾಕಲಾಗುವುದು ಎಂಬುದಾಗಿ ಆತನ ವಾಕ್ಯದ ಮೂಲಕ ಸಮವಾದ ಸ್ಪಷ್ಟತೆಯಲ್ಲಿ ಸಾಕ್ಷಿಹೇಳುವುದಾಗಿದೆ. – **"ನನ್ನಲ್ಲಿದ್ದು ಫಲಕೊಡದಿರುವ ಪ್ರತಿಯೊಂದು ಕೊಂಬೆಯನ್ನು ಆತನು (ತಂದೆಯು) ತೆಗೆದುಹಾಕುತ್ತಾನೆ. ಫಲಕೊಡುವ ಪ್ರತಿಯೊಂದು ಕೊಂಬೆಯೂ ಹೆಚ್ಚು ಫಲಕೊಡುವ ಹಾಗೆ ಅದನ್ನು ಶುದ್ಧಿಮಾಡುತ್ತಾನೆ"** (ಯೋಹಾನ 15:2). ಕರ್ತನ ಆತ್ಮನು, ಆತನ ವಾಕ್ಯದ ಮೂಲಕ ಈ ರೀತಿಯಲ್ಲಿ ನಮಗೆ ಪರಲೋಕದ ತಂದೆಯ ನಿಯಮಗಳ ಬಗ್ಗೆ, ಆತನು ತನ್ನ ಮಕ್ಕಳೊಂದಿಗೆ ವ್ಯವಹರಿಸುವ ಬಗ್ಗೆ, ಅವರಿಗೆ ನೀಡುವ ಶಿಕ್ಷೆಗಳ ಬಗ್ಗೆ ಒಣಗಿದ ಕೊಂಬೆಗಳನ್ನು ತರಿದುಹಾಕುವಂತೆ ಕಡಿದು ಹಾಕುವ ಬಗ್ಗೆ. ಕೆಲಸಕ್ಕೆ ಬಾರದವುಗಳನ್ನು ತೆಗೆದುಹಾಕುವ ಬಗ್ಗೆ. ಫಲಕೊಡುವವುಗಳ ಅಭಿವೃದ್ಧಿಯ ಬಗ್ಗೆ ಸಾಕ್ಷಿಹೇಳುವುದಾಗಿದೆ. ದ್ರಾಕ್ಷೆಬಳ್ಳಿಯೊಂದಿಗೆ ಗುರುತಿಸಲ್ಪಟ್ಟಮೇಲೆ ಆಗಬಹುದಾದ ಈ ಅನುಭವಗಳು ನಾವು ಇನ್ನೂ ದ್ರಾಕ್ಷೆಬಳ್ಳಿಯಾಗಿದ್ದೇವೆಂಬ, ಇನ್ನೂ ಬಳ್ಳಿಯ ಕೊಂಬೆಗಳಾಗಿ ಗುರುತಿಸಲ್ಪಟ್ಟಿದ್ದೇವೆಂಬ – ನಾವಿನ್ನೂ ನಮ್ಮ ಕರ್ತನ ಪಾಲನೆಗೆ ಮತ್ತು ಶಿಸ್ತಿಗೆ ಒಳಗಾಗಿದ್ದೇವೆಂಬುದಕ್ಕೆ ಆತ್ಮನ ಸಾಕ್ಷಿಯಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ, ಯಾರಾದರೂ ಈ ದ್ರಾಕ್ಷೆಬಳ್ಳಿಯೊಂದಿಗೆ ಗುರುತಿಸಲ್ಪಟ್ಟಮೇಲೆ ಶಿಸ್ತುಪಾಲನೆಗಳಲ್ಲಿ ಕೊರತೆಯುಳ್ಳ ವರಾದರೆ, ಆತನಲ್ಲಿ ಆತ್ಮನ ಈ ಸಾಕ್ಷಿಯ ಕೊರತೆ ಇದೆ ಮತ್ತು ಅದಕ್ಕೆ ಅನುಗುಣವಾಗಿ ಆತನು ದೇವರೊಂದಿಗೆ ಅಂಗೀಕಾರಕ್ಕೆ ಅನುಮಾನವುಳ್ಳವನಾಗಿ ಕಂಡುಬರುತ್ತಾನೆ (ಇಬ್ರಿಯ 12:7 ನೋಡಿರಿ).

ನಾವೆಲ್ಲರೂ ಸಮರ್ಪಕರಾದಲ್ಲಿ, ನಿರಪೇಕ್ಷವಾಗಿ ಸರ್ವ ಸಂಪೂರ್ಣವಾದಲ್ಲಿ ಮತ್ತು ಶೋಧನೆಗಳ ಮೂಲಕ ಹಾಗೆಂದು ಸಾಬೀತಾದಲ್ಲಿ ಪರಿಸ್ಥಿತಿಯು ಬೇರೆಯೇ ಆಗುತ್ತದೆ. ದೇವರು ಆಗ ನಮ್ಮ ಸಮರ್ಪಕತೆಯ ಮತ್ತು ಆತನೊಂದಿಗೆ ನಮ್ಮ ಸಾಮರಸ್ಯದ ಸಲುವಾಗಿ ನಮ್ಮನ್ನು

ಪ್ರೀತಿಸುತ್ತಾನೆ; ಆಗ ಶಿಕ್ಷೆಯಾಗಲೀ, ಕಹಿ ಅನುಭವಗಳಾಗಲೀ ಆತನ ಅವಕೃಪೆಯು ಕುರುಹಾಗಿರುತ್ತದೆ. ಆದರೆ ಈಗ ಇರುವಂತೆ, ಎಲ್ಲರೂ ಅಸಮರ್ಪಕರೆಂದೂ, ನಾವೆಲ್ಲರೂ ದೇವರ ಮಟ್ಟಕ್ಕೆ ಬಹಳ ಕಡಿಮೆಯವರಾಗಿದ್ದೇವೆಂದು ನಮಗೆಲ್ಲಾ ತಿಳಿದಿದೆ; ಕ್ರಿಸ್ತನ ಅರ್ಹತೆಯ ಮೂಲಕ ಮತ್ತು ಪರೀಕ್ಷಾ ಅವಧಿಯ ಅರ್ಥದಲ್ಲಿ, ನಮ್ಮ ಪರೀಕ್ಷೆ, ಅಭಿವೃದ್ಧಿ ಮತ್ತು ಅಂತಿಮ ಸಮರ್ಪಕತೆ ಇವುಗಳ ದೃಷ್ಟಿಯಲ್ಲಿ ನಮ್ಮ ನೂತನ ಹೃದಯಗಳು, ನಮ್ಮ ನೂತನ ಚಿತ್ತಗಳು, ರೂಪಾಂತರಗೊಂಡ ನಮ್ಮ ಮನಸ್ಸುಗಳು ಅಥವಾ ಆತ್ಮಗಳು ಮಾತ್ರವೇ ದೇವರಿಗೆ ಅಂಗೀಕಾರಾರ್ಹವಾಗಿವೆ. ದೇವರ ಸಮರ್ಪಕತೆಯನ್ನು ಮತ್ತು ನಮ್ಮ ಸ್ವಂತ ಬಲಹೀನತೆಗಳನ್ನು ನಾವು ಅರ್ಥಮಾಡಿಕೊಳ್ಳುವ ಅನುಪಾತದಲ್ಲಿ ಮಾತ್ರವೇ ನಾವು ಹಲವೊಂದು ಮತ್ತು ಕಲಿಯಬೇಕಾದ ಮುಖ್ಯವಾದ ಪಾಠಗಳನ್ನು ಮೆಚ್ಚಿಕೊಳ್ಳಬಹುದು ಮತ್ತು ಪ್ರಯತ್ನಿಸುವ ಅನುಭಗಳನ್ನು ನಾವು ದೇವರ ಸ್ವರೂಪವನ್ನು ಬೆಳೆಸಿಕೊಳ್ಳುವ ಸಲುವಾಗಿ ಹಾದುಹೋಗಬೇಕಾಗುತ್ತದೆ.

ಪರಲೋಕದ ತಂದೆಯು ನಮಗಾಗಿ ಮಹಿಮೆಯ ಭವ್ಯವಾದ ಆತ್ಮೀಕ ಮಂದಿರವೊಂದನ್ನು ಕಟ್ಟುವ ಸಿದ್ಧತೆ ನಡಿಸಿದ್ದಾನೆ ಎಂದು ದೇವರ ವಾಕ್ಯವು ನಮಗೆ ತಿಳಿಸುತ್ತದೆ. ಇದರಲ್ಲಿ ಮತ್ತು ಇದರ ಮೂಲಕವಾಗಿ ಮಾನವ ಜಾತಿಯು ಪಾಪನಿವೃತಿ ಹೊಂದಲು ಮತ್ತು ತಮ್ಮಗಳ ಪುನಃ ಸಂಧಾನಕ್ಕೆ ಬರುವ ಅವಕಾಶಗಳನ್ನು ಹೊಂದಿಕೊಳ್ಳುತ್ತದೆ. ನಾವು ದೇವರ ವಾಕ್ಯದಲ್ಲಿ ಈ ಮಂದಿರದ ಬಗ್ಗೆ ಮಹಾ ವಾಸ್ತುಶಿಲ್ಪಿಯ ಆದರ್ಶ ಧ್ಯೇಯಗಳ ಬಗ್ಗೆ ನೋಡುತ್ತೇವೆ. – ಈ ಸಮಸ್ತ ಆದರ್ಶವು ಅದರ ಮುಖ್ಯವಾದ ಮೂಲೆಗಲ್ಲಾಗಿರುವ, 'ಪರಲೋಕದಲ್ಲಿ ಹಾಕಲ್ಪಟ್ಟಿರುವ' ಶ್ರೇಷ್ಠ ಕಲ್ಲಾಗಿರುವ ಕರ್ತನಾದ ಯೇಸುಕ್ರಿಸ್ತನ ವ್ಯಕ್ತಿತ್ವದಲ್ಲಿ ಪ್ರತಿನಿಧಿಸಲ್ಪಟ್ಟಿದೆ. ಈ ಮಂದಿರದ ಜೀವದಕಲ್ಲುಗಳಾಗಿ ಅದರ ಶಿರಸ್ಸಾಗಿರುವ ಕ್ರಿಸ್ತನೊಂದಿಗೆ ಕಟ್ಟಲ್ಪಡುವಂತೆ, ಆತ್ಮನ ಮೂಲಕ ದೇವರ ವಾಸಸ್ಥಾನವಾಗಲು ದೇವರಿಂದ ಅಂಗೀಕಾರ ಹೊಂದುವವರಿಗೆ ಯಾವುದು ಉತ್ತಮವಾದುದೆಂದು ನಾವು ನೋಡಬಹುದು. ನಾವು ನಮ್ಮ ಒರಟು ಸ್ವಭಾವದ ಕಾರಣ, ಈ ದೇವಾಲಯದ ಮೂಲೆ ಕಲ್ಲಿನಮೇಲೆ ಚಿತ್ರಿತವಾಗಿರುವ ಕೃಪಾಭರಿತವಾದ ಶ್ರೇಣಿಯೊಂದಿಗೆ ಸಾಮರಸ್ಯವಿಲ್ಲದಿರುವುದನ್ನು ಗ್ರಹಿಸುತ್ತೇವೆ. ಒಂದು ವೇಳೆ ನಾವು ಹಾರೈಸುವಂತೆ ದೇವರ ಕೃಪೆಯಿಂದ ಆ ದೇವಸ್ಥಾನಕ್ಕೆ ಯೋಗ್ಯರಾಗಿ ಅದರಲ್ಲಿ ಒಂದು ಸ್ಥಾನಪಡಕೊಳ್ಳಬೇಕಾದಲ್ಲಿ ಆ ಮಟ್ಟಿನ ಉಳಿ ಕೆತ್ತುವಿಕೆಯ ಮತ್ತು ಮೆರಗು ಕೊಡುವಿಕೆಯು ನಮಗೆ ನಿರಪೇಕ್ಷವಾಗಿ ಅಗತ್ಯವಾಗಿದೆ ಎಂದು ಸುಲಭವಾಗಿ ಗ್ರಹಿಸಬಹುದು. ಆದುದರಿಂದ, ದೇವರ ಸುತ್ತಿಗೆಯ ಮತ್ತು ಉಳಿಯ ಏಟನ್ನು ತಾವು ಪಡೆಯುತ್ತಿಲ್ಲ ಎಂದು ಕಂಡುಕೊಳ್ಳುವವರು ಈ ಸಾಕ್ಷಿಯ ಕೊರತೆಯುಳ್ಳವ ರಾಗಿದ್ದಾರೆ. ದೇವರ ಆತ್ಮನು ತನ್ನ ವಾಕ್ಯದ ಮೂಲಕ ತನ್ನ ಮಂದಿರಕ್ಕೆ ಬರುವ ಎಲ್ಲಾ ಕಲ್ಲುಗಳನ್ನು ಪರೀಕ್ಷೆ ಮಾಡುವವನಾಗಿದ್ದಾನೆ. ಇದನ್ನು ಆ ಭವ್ಯವಾದ ಮಹಾ ಕಲ್ಲು ಸಹಾ ತಪ್ಪಿಸಿಕೊಳ್ಳಲಾಗಲಿಲ್ಲ. ದೇವರ ಅನುಗ್ರಹವು ನಮಗೆ ಕೆಲಮಟ್ಟಿನ ಕಷ್ಟ ಮತ್ತು ವಿರೋಧಗಳಿರುವ ಇಕ್ಕಟ್ಟಾದ ಮಾರ್ಗವನ್ನು ಗುರುತಿಸದೇ ಹೋದಲ್ಲಿ, ನಾವು ಯಾವುದೇ ಸಂಕಷ್ಟಗಳು, ಪರೀಕ್ಷೆಗಳು ಮುಂತಾದವುಗಳಿಲ್ಲದೆ ನೆಲೆಯಾಗುವುದಾದಲ್ಲಿ ದೇವರು ಆ ಮಂದಿರದ ಜೀವವುಳ್ಳ ಕಲ್ಲುಗಳಾದ ತನ್ನ ಮಕ್ಕಳೊಂದಿಗೆ ವ್ಯವಹರಿಸುವಂತೆ ನಮ್ಮ ಸಂಗಡ ವ್ಯವಹರಿಸುತ್ತಿಲ್ಲವೆಂದು ನಾವು ಖಚಿತವಾಗಿ ತಿಳುಕೊಳ್ಳಬಹುದು. – ಯಾಕೆಂದರೆ ನಮಗೆ ನಮ್ಮ ಅಂಗೀಕಾರದ ಮತ್ತು ಸಿದ್ಧತೆಯ ಸಾಕ್ಷ್ಯದ ಕೊರತೆ ಇದೆ. ನಮ್ಮ ಪರಿಸ್ಥಿತಿಯು ಆ ರೀತಿಯಲ್ಲಿದೆ ಎಂಬ ಗ್ರಹಿಕೆಯು ನಮ್ಮನ್ನು ನಮಗೆ ಏಕೆ ಉಪದ್ರವಗಳೂ ಮತ್ತು ಕೇಡುಗಳೂ ಉಂಟಾಗುತ್ತಿಲ್ಲ ಎಂದು ವಿಚಾರಿಸಲು ಕರ್ತನ ಬಳಿಗೆ ಖಂಡಿತವಾಗಿ ಕಳುಹಿಸುವುದಾಗಿದೆ. ಮತ್ತು ನಾವು ಇನ್ನೂ ಆತನ ನಂಬಿಕೆಯಲ್ಲಿ ಇದ್ದೇವೋ ಇಲ್ಲವೋ (2 ಕೊರಿಂಥ 13:5 ನೋಡಿರಿ) ಮತ್ತು ನಾವು ಕರ್ತನ ಹೆಜ್ಜೆಜಾಡಿನಲ್ಲಿ ನಡೆಯಲು ಇನ್ನೂ ಪರಿಶ್ರಮಿಸುತ್ತಿದ್ದೇವೋ ಇಲ್ಲವೋ ಹಾಗೂ ಆತನ ಚಿತ್ತಕ್ಕೆ ನಾವು ಇನ್ನೂ ಸಂಪೂರ್ಣವಾಗಿ ಪ್ರತಿಷ್ಠಿಸಿಕೊಂಡಿದ್ದೇವೋ ಇಲ್ಲವೋ ಎಂದು ನಮ್ಮನ್ನು ನಾವು ಪರೀಕ್ಷಿಸಿಕೊಳ್ಳುವಂತೆ ಮಾಡುತ್ತದೆ. ಆದರೆ ಈ ಉಳಿ ಕೆತ್ತನೆ, ಹೊಳಪಿಸುವಿಕೆ, ತರಿದುಹಾಕುವಿಕೆ, ಕಟ್ಟುಪಾಡುಗಳು, ಹೊಡೆತಗಳ ಇವೇ ಮುಂತಾದವುಗಳು ನಮಗೆ ಉಂಟಾಗುತ್ತಿದ್ದರೆ ನಾವು ಅವುಗಳನ್ನು ತಾಳ್ಮೆಯಿಂದ, ಸಂತೋಷದಿಂದ, ಮೆಚ್ಚುಗೆಯಿಂದ ಸಹಿಸಿಕೊಳ್ಳ ಬೇಕು. ಇವುಗಳು ನಮ್ಮ ತಂದೆಯ ಪ್ರೀತಿಯ ಸಾಕ್ಷಿಗಳಾಗಿದ್ದು ಆತ್ಮನ ಪೂರ್ಣ ಒಡಂಬಡಿಕೆಗನುಸಾರವಾಗಿ ಆತನ ಮಹಾ ಕರೆಯನ್ನು ಹೊಂದಿಕೊಳ್ಳುವಂತೆ ಮಾಡುವ ಅಗತ್ಯತೆಯಾಗಿದೆ ಮತ್ತು ನಾವುಗಳು ದೇವರ ಪುತ್ರರಾಗಿದ್ದೇವೆ, **"ಮಕ್ಕಳಾಗಿದ್ದರೆ ಬಾಧ್ಯರಾಗಿದ್ದೇವೆ; ದೇವರಿಗೆ ಬಾಧ್ಯರು. ಹೇಗೆಂದರೆ ಕ್ರಿಸ್ತನಿಗೆ ಸಂಭವಿಸಿದ ಬಾಧೆಗಳಲ್ಲಿ ನಾವು ಪಾಲುಗಾರರಾಗುವುದಾದರೆ ಆತನ ಮಹಿಮೆಯಲ್ಲಿಯೂ ಪಾಲುಗಾರರಾಗುವೆವು"** (ರೋಮಾ. 8:17).

## ಆತ್ಮನ "ಕಾರ್ಯನಿರ್ವಹಣೆಯ ಭಿನ್ನತೆಗಳು"

## The Spirits "Difference of Administration"

**"ದೇವರು ನಿಮ್ಮನ್ನು ಮಕ್ಕಳೆಂದು ನಡೆಸುತ್ತಾನೆ: ತಂದೆಯಿಂದ ಶಿಕ್ಷೆ ಹೊಂದದ ಮಗನೆಲ್ಲಿ? ಮಕ್ಕಳೆಲ್ಲರೂ**

**ಹೊಂದುವ ಶಿಕ್ಷೆಯು ನಿಮಗುಂಟಾಗದಿದ್ದರೆ ನೀವು ಹಾದರದಿಂದ ಹುಟ್ಟಿದವರೇ ಹೊರತು ಪುತ್ರರಲ್ಲ"** (ಇಬ್ರಿಯ 12:7–8).

ಈ ಲೋಕದ ಮೇಲೆ ಸಂಕಟಗಳೂ ತೊಂದರೆಗಳೂ ಬರುತ್ತಿರುತ್ತವೆ. ದೇವ ಭಕ್ತರ ಮೇಲೆಯೂ ಅವುಗಳು ಬರುತ್ತವೆ. ಆದರೆ ಇವುಗಳು ತಂದೆ ದೇವರ ಚಿತ್ತಕ್ಕೆ ಮತ್ತು ಕಾರ್ಯಗಳಿಗೆ ತಮ್ಮನ್ನು ಪೂರ್ಣವಾಗಿ ಪ್ರತಿಷ್ಠೆಪಡಿಸಿ ಕೊಂಡಿರುವವರ ಹೊರತಾಗಿ ಅನ್ಯರಿಗೆ ಪುತ್ರತ್ವವೆನಿಸುವುದಿಲ್ಲ. ಆತ್ಮ ಮತ್ತು ದೇವರ ವಾಕ್ಯವು ಆತನ ಮಕ್ಕಳಿಗೆ ಮಾತ್ರವೇ ಸಾಕ್ಷಿ ಎನಿಸುತ್ತದೆ. ದೇವರ ಕುಟುಂಬದಲ್ಲಿ ತರಿದುಹಾಕುವಿಕೆ ಮತ್ತು ದಂಡನೆಗಳು ಒಂದೇ ತೆರನಾಗಿರುವುದಿಲ್ಲ. ಈ ಲೋಕದ ಮಕ್ಕಳಿಗೆ ವಿವಿಧ ರೀತಿಯ ಮತ್ತು ಮಟ್ಟದ ಶಿಸ್ತಿನ ಅಗತ್ಯತೆ ಇರುವಂತೆ ದೇವರ ಮಕ್ಕಳಿಗೂ ಸಹಾ ಇರುತ್ತದೆ. ಕೆಲವರಿಗೆ ಅಸಮ್ಮತಿಯ ನೋಟವೇ ಸಾಕಾಗುತ್ತದೆ; ಇತರರಿಗೆ ಬೈಗುಳದ ಒಂದು ಮಾತಾದರೂ ಬೇಕಾಗುತ್ತದೆ. ಆದರೆ ಇನ್ನೂ ಕೆಲವರಿಗೆ ಬಾರುಕೋಲಿನ ಅವಶ್ಯಕತೆ ಇದೆ. ಕೆಲವರನ್ನು ಬಾರಿ ಬಾರಿಗೂ ಥಳಿಸಬೇಕಾಗುತ್ತದೆ. ಈ ಲೋಕದ ತಂದೆತಾಯಿಗಳು ತಮ್ಮ ವಿಧೇಯರಾದ ಮತ್ತು ತಮಗೆ ವಿರೋಧಮಾಡದೆ ನಮ್ರತೆಯಿಂದಿರುವ ಮಕ್ಕಳಲ್ಲಿ ಸಂತೋಷಿಸುತ್ತಾರೆ. ಇಂಥವರಿಗೆ ಒಪ್ಪಿಗೆ ಇಲ್ಲದಿರುವ ಒಂದು ಮಾತು ಅಥವಾ ನೋಟ ಅವರ ಕೆಟ್ಟತನವನ್ನು ತೊರೆದುಹಾಕಲು ಸಾಕಾಗುತ್ತದೆ. ಅದರಂತೆಯೇ ಪರಲೋಕದ ತಂದೆಯು ಸಹಾ ತನ್ನ ಮಾತಿಗೆ ನಡುಗಿರಿ ಎಂಬಂತೆ **"ಕರ್ತನ ಮಾತಿಗೆ ಭಯಪಡುವವರೇ, ಆತನ ಮಾತುಗಳನ್ನು ಕೇಳಿರಿ"** (ಯೆಶಾಯ 66:5) ಎಂದೆನ್ನುತ್ತಾನೆ.

ಅಂಥವರು ತಮ್ಮ ಸ್ವಂತ ಗುಣಲಕ್ಷಣಗಳನ್ನು ಸುಧಾರಿಸಿಕೊಳ್ಳುವಂತೆ ತಂದೆಯೊಡನೆ ಸಹಕರಿಸುತ್ತಾರೆ. ತಮ್ಮ ಕೊರತೆಗಳನ್ನು ಗಮನಿಸಿಕೊಂಡು ಅವುಗಳ ತಿದ್ದುಪಾಟನ್ನು ಬಯಸುತ್ತಾರೆ – ದೇವರ ಮಾರ್ಗದರ್ಶನದ ಮಾತುಗಳನ್ನು, ಬೋಧನೆಗಳನ್ನು ಅಥವಾ ಪ್ರೀತಿಯ ಆಕ್ಷೇಪಣೆಗಳನ್ನು ಆಲಿಸುತ್ತಾರೆ ಮತ್ತು ಸದಾ ಆತನ ಒಪ್ಪಿಗೆಯ ಮುಗುಳ್ನಗೆಯನ್ನು ಬಯಸುತ್ತಾರೆ; ಅವರ ಈ ಮನೋಭಾವನೆಗಳನ್ನು ಕವಿಯೊಬ್ಬನ ಕಾವ್ಯದಲ್ಲಿ ಹೀಗೆ ಉತ್ತಮರೀತಿಯಲ್ಲಿ ವ್ಯಕ್ತವಾಗಿದೆ :–

Sun of my *soul, my Father dear,*
*I know no night when thou art near*
*O, let no earth born cloud arise*
*To hide thee from thy servant's ey*es"

ಈ ವರ್ಗದ ಬಗ್ಗೆ ಅಪೋಸ್ತಲನು **"ನಮ್ಮನ್ನು ನಾವೇ ವಿಚಾರಿಸಿಕೊಂಡರೆ ನ್ಯಾಯವಿಚಾರಣೆಗೆ ಒಳಗಾಗುವುದಿಲ್ಲ"** (1 ಕೊರಿಂಥ 11:31) ಎಂದು ಬರೆಯುತ್ತಾನೆ. ಅಂಥವರಿಗೆ ಕಡಿಮೆ ದಂಡನೆಯು ಸಾಕಾಗುತ್ತದೆ. ಇಂಥಾಃ ವರ್ಗದಲ್ಲಿರಲು ಸಂಪೂರ್ಣವಾದ ಪ್ರತಿಷ್ಠಿಸಿಕೊಳ್ಳುವಿಕೆ ಬೇಕಾಗುತ್ತದೆ ; ಇಂಥವರು ಈಗಲೂ, ಮುಂದೆಯೂ ಜಯಶಾಲಿಗಳಾಗಿರುತ್ತಾರೆ ಮತ್ತು ತಮ್ಮ ಕರ್ತನಾದ ಯೇಸುಕ್ರಿಸ್ತನೊಂದಿಗೆ ಆತನ ರಾಜ್ಯದಲ್ಲಿ ಸಹಬಾಧ್ಯಸ್ಥರಾಗಲು ಯೋಗ್ಯರೆಂದು ಕಂಡುಬರುತ್ತಾರೆ. ಈ ವಿಧೇಯ ಮತ್ತು ಎಚ್ಚರಿಕೆಯುಳ್ಳ ವರ್ಗದವರಿಗೆ ಕರ್ತನು "ನಿನ್ನನ್ನು ಕಟಾಕ್ಷಿಸಿ ಆಲೋಚನೆ ಹೇಳುವೆನು" ಎಂದು ಹೇಳಿದ್ದಾನೆ – ಮತ್ತು "ನಿನ್ನ ಚಿತ್ತವನ್ನು ತಿಳಿಯಪಡಿಸಿ ನನ್ನನ್ನು ನಡೆಸಿ ತರುವಾಯ ಮಹಿಮೆಗೆ ಸೇರಿಸಿಕೊಳ್ಳುವಿ" ಎಂದು ಬರೆಯಲ್ಪಟ್ಟಿದೆ. ನಿರಂತರವಾದ ಚಾವಟಿ ಏಟಿನಿಂದ ಮಾತ್ರವೇ ನಡೆಸಲ್ಪಡುವವರು ಗೆಲ್ಲುವವರ ವರ್ಗದವರಲ್ಲ ಮತ್ತು ಅವರು ಕರ್ತನ ಮದಲಗಿತ್ತಿಯಾಗಲು ಅರ್ಹರಲ್ಲ ಎಂಬುದಾಗಿ ಸತ್ಯದ ಆತ್ಮನ ಸಾಕ್ಷಿ ಉಂಟು. (ಕೀರ್ತನೆ 32:8, 73:24 ಮತ್ತು ಪ್ರಕಟನೆ 7:9,14 ಇವುಗಳನ್ನು ನೋಡಿರಿ).

ದಂಡನೆಯು ಯಾವಾಗಲೂ ತಪ್ಪಿನ ಪುರಾವೆ ಅಥವಾ ಕರ್ತನ ಒಪ್ಪದಿರುವಿಕೆಯ ಸಾಕ್ಷಿ ಎನಿಸುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ನಮ್ಮ ಕರ್ತನೊಂದಿಗಿರುವಂತೆ, ಆತನ ನಿಷ್ಠಾವಂತ ಅನುಯಾಯಿಗಳೊಡನೆಯೂ, ದೈವಿಕ ಅನುಗ್ರಹವು ನಿಷ್ಠಾವಂತರನ್ನು ವಿಧೇಯರನ್ನು ಶ್ರಮೆಯ ಮಾರ್ಗಕ್ಕೆ ಮತ್ತು ಸ್ವಯಂ ತ್ಯಾಗಕ್ಕೆ ನಡೆಸುತ್ತದೆ. ಇದು ವಿರುದ್ಧ ಚಿತ್ತಕ್ಕೆ ಉಂಟಾಗುವ ಶಿಕ್ಷೆಯಂತಲ್ಲ ಆದರೆ ಪರೀಕ್ಷೆಯಂತೆ, ಸ್ವಯಂ ತ್ಯಾಗದ ಮೂಲಕ ದೇವರ ಚಿತ್ತಕ್ಕೆ ಹೆಚ್ಚಿನ ಮಟ್ಟದಲ್ಲಿ ತೋರುವ ಪ್ರೀತಿ ಮತ್ತು ಭಕ್ತಿ, ಹಾಗೂ ನೀತಿವಂತಿಕೆಯ ಕಾರಣಕ್ಕನುಸಾರವಾಗಿ ಇವು ಉಂಟಾಗುತ್ತವೆ. ನಮ್ಮ ಕರ್ತನು ಇತರರ ಪಾಪಗಳನ್ನು ತನ್ನ ಮೇಲೆ ಹೊತ್ತುಕೊಂಡಾಗ, ತನ್ನ ಸ್ವಂತದ್ದಲ್ಲದ ಅಪರಾಧಗಳ ಕಾರಣ ದಂಡನೆ ಗೊಳಗಾಗಿರುವಂತೆ ಆತನ ಅನುಯಾಯಿಗಳು ಸಹಾ ತಮ್ಮದಲ್ಲದ ತಪ್ಪುಗಳಿಗಾಗಿ, ಬೇರೆಯವರು ಮಾಡಿದ ಅಪರಾಧಗಳ ಕಾರಣ ಹಲವು ಸಾರಿ ಅಂಥಾಃ ದಂಡನೆಗಳಿಗೆ ಒಳಗಾಗುತ್ತಾರೆ. ಅಂಥವರಿಗೆ ಅಪೋಸ್ತಲನು **"ನಾನು ಈಗ ನಿಮಗೋಸ್ಕರ ಅನುಭವಿಸುತ್ತಿರುವ ಬಾಧೆಗಳಲ್ಲಿ ಸಂತೋಷ ಪಟ್ಟು ಕ್ರಿಸ್ತನ ಸಂಕಟಗಳೊಳಗೆ ಇನ್ನೂ ಉಳಿದಿದ್ದನ್ನು ಸಭೆಯೆಂಬ ಆತನ ದೇಹಕ್ಕೋಸ್ಕರ ನನ್ನ ಶರೀರದಲ್ಲಿ ಅನುಭವಿಸಿ ತೀರಿಸುತ್ತೇನೆ"** (ಕೊಲೊಸ್ಸೆ 1:24) ಎಂದು ಬರೆಯುತ್ತಾನೆ.

## ಪವಿತ್ರಾತ್ಮವು ಯಾವದಕ್ಕೆ ಸಾಕ್ಷಿ ನೀಡುತ್ತದೆ ?
## What the Holy Spirit Witnesses ?

ಈ ಹಿಂದಿನವುಗಳ ಬೆಳಕಿನಲ್ಲಿ ಕರ್ತನ ಮಕ್ಕಳೆಂದು ಒಪ್ಪಿಕೊಳ್ಳುವ ಪ್ರತಿಯೊಬ್ಬರೂ ತಮ್ಮಲ್ಲಿ "ಆತ್ಮನ ಸಾಕ್ಷಿ

ಉಂಟೋ ಇಲ್ಲವೋ? ನಾವು ನಿಜವಾಗಿಯೂ ದೇವರ ಮಕ್ಕಳಾಗಿದ್ದೇವೆಯೋ?" ಎಂದು ತಮ್ಮನ್ನು ತಾವು ಪರೀಕ್ಷಿಸಿಕೊಳ್ಳ ಬೇಕಾಗುತ್ತದೆ ಮತ್ತು ಈ ಪರೀಕ್ಷೆಯನ್ನು ಆಗಾಗ್ಗೆ ಪುನರಾವರ್ತಿಸಬೇಕಾಗುತ್ತದೆ. ಈ ರೀತಿಯಲ್ಲಿ ಅವರು ತಮ್ಮನ್ನು ಕಾದುಕೊಂಡು ದೇವರ ಪ್ರೀತಿಯಲ್ಲಿ ನೆಲೆಗೊಳಿಸಿ ಆತನ ಆತ್ಮನ ಸಾಕ್ಷಿಯಲ್ಲಿ ಸಂತೋಷ ಪಡಬಹುದಾಗಿದೆ.

ನಾವು ನಿರಂತರವಾಗಿ ತರಿಯಲ್ಪಡುತ್ತಿದ್ದೇವೆಯೋ? ನಾವು ಅಂಥಾಃ ಅನುಭವವನ್ನು ಸಣ್ಣದಾಗಿ ಅಥವಾ ದೊಡ್ಡದಾಗಿ ಅನುಭವಿಸುತ್ತಿದ್ದೇವೋ? ಆತ್ಮನ ವಿರುದ್ಧ ಕದನಮಾಡುವ ನಮ್ಮ ಮಾಂಸಿಕ ಶರೀರದ ಧೋರಣೆಗಳು – ಕೋಪ, ಮತ್ಸರ, ದ್ವೇಷ, ಹೊಟ್ಟೆಕಿಚ್ಚು, ಕಲಹ, ಸ್ವಾರ್ಥ, ಒರಟುತನ ಮತ್ತು ಕ್ರಿಸ್ತನಲ್ಲಿ ಜೀವದ ಆತ್ಮಕ್ಕೆ ಪ್ರೀತಿಯ ಆತ್ಮಕ್ಕೆ ವಿರೋಧವಾದ ಇತರ ಎಲ್ಲಾ ಸಂಗತಿಗಳು ಹೆಚ್ಚು ಅಥವಾ ಕಡಿಮೆ ತ್ವರಿತವಾಗಿ ತೆಗೆದುಹಾಕಲ್ಪಡುತ್ತಿವೆಯೋ? ಹಾಗಾದಲ್ಲಿ, ನಾವು ಅನುಭವಿಸಲ್ಪಡುವ ಈ ತ್ವರಿತ ಕಾರ್ಯದ ಪ್ರಗತಿಯ ಮಟ್ಟಕ್ಕೆ ನಾವು ನಿಸ್ಸಂದೇಹವಾಗಿ ಸರಿಯಾದ ಮಾರ್ಗದಲ್ಲಿನ – ನಮ್ರತೆ, ತಾಳ್ಮೆ, ಶಾಂತಿ, ಸಾದುತ್ವ, ಸಹೋದರ ಕರುಣೆ, ಪ್ರೀತಿ ಇವುಗಳಲ್ಲಿನ ಬೆಳವಣಿಗೆಯನ್ನು ಗ್ರಹಿಸಲು ಸಾಧ್ಯ. ಈ ಮಾರ್ಗದಲ್ಲಿ ಜಾಗರೂಕ ಪರೀಕ್ಷೆಯ ನಂತರ ಪ್ರಗತಿಯಲ್ಲಿರುವ ಅಂಥಾಃ ಅನುಭವಗಳನ್ನು ಯಾರು ದೇವರ ವಾಕ್ಯದಲ್ಲಿ ಗುರುತಿಸಿರುವಂತೆ ಅನುಭವಿಸುತ್ತಾರೋ, ಅಂಥವರು ದೇವರ ಮುಂದುವರಿದ ತಮ್ಮ ಅಂಗೀಕಾರವನ್ನು ತಿಳಿದುಕೊಳ್ಳುತ್ತಾರೆ. ಯಾಕೆಂದರೆ ಅವರಲ್ಲಿ ಆತ್ಮನ ಸಾಕ್ಷಿ ಇದೆ.

ಪುನಃ, ಆತ್ಮನು **"ದೇವರಿಂದ ಹುಟ್ಟಿರುವವನು** (ಪಡಕೊಂಡವನು) **ಪಾಪಮಾಡುವುದಿಲ್ಲ"** (1 ಯೋಹಾನ 5:18) ಎಂಬ ಸಾಕ್ಷಿ ನೀಡುತ್ತದೆ. ದೇವರ ಮಕ್ಕಳು ಒಮ್ಮೊಮ್ಮೆ ತಮ್ಮ ಹಿಂದಿನ ಸ್ವಭಾವಕ್ಕೆ (ಅದು ಸತ್ತಿರುವುದೆಂದು ಗಣಿಸಿದಾಗ್ಯೂ ನಿಜವಾಗಿಯೂ ಸತ್ತಿರುವುದಿಲ್ಲ) ಅದರ ಅಧೀನಕ್ಕೆ ಒಳಗಾಗಿರಬಹುದು. ಅವರು ದೋಷಗಳಿಗೆ ಸಿಕ್ಕಿಬಿದ್ದು ತಮ್ಮ ನಿರ್ಣಯಗಳಲ್ಲಿ, ಮಾತುಗಳಲ್ಲಿ ತಪ್ಪುಮಾಡಬಹುದು. ಆದರೆ ಅವರೆಂದೂ ಇಚ್ಛಾಪೂರ್ವಕವಾಗಿ ದೇವರ ನಿಯಮಗಳನ್ನು ಉಲ್ಲಂಘಿಸುವವರಲ್ಲ. ಆಗ ನಮ್ಮ ಹೃದಯಗಳಲ್ಲಿ ನಾವು ದೇವರ ಚಿತ್ತವನ್ನು ನೆರವೇರಿಸುವಲ್ಲಿ ಸಂತೋಷಿಸುತ್ತೇವೆ ಮತ್ತು ಎಂದೂ ಇಚ್ಛಾಪೂರ್ವಕವಾಗಿ ಅವುಗಳನ್ನು ವಿರೋಧಿಸುವುದೂ ಇಲ್ಲ, ಉಲ್ಲಂಘಿಸುವುದೂ ಇಲ್ಲ ಎಂಬ ಪ್ರತಿಕ್ರಿಯೆ ಉಂಟಾದಲ್ಲಿ, ನಮ್ಮ ಬಲು ಇಷ್ಟವಾದ ನಿರೀಕ್ಷೆಗಳು ಅಪ್ಪಳಿಸಲ್ಪಟ್ಟರೂ, ಎಲ್ಲಾ ಕೋಮಲವಾದ ಸಂಬಂಧಗಳು ತುಂಡಾದರೂ ನಾವು ದೇವರಚಿತ್ತವನ್ನು ನೆರವೇರಿಸುತ್ತೇವೆ, ಆತನ ಯೋಜನೆಗಳನ್ನು ಪೂರೈಸುತ್ತೇವಾದರೆ ಆಗ ನಮ್ಮ ಆತ್ಮ ಅಥವಾ ಮನಸ್ಸು ಸತ್ಯದ ಆತ್ಮನೊಂದಿಗೆ ಒಪ್ಪಿಗೆಯಾಗುತ್ತದೆಯೆಂದು ಇಲ್ಲಿ ದಾಖಲೆಯಾಗಿದೆ. ನಾವು ದೇವರ ಕುಟುಂಬಕ್ಕೆ ಒಮ್ಮೆ ಅಂಗೀಕಾರಗೊಂಡಿದ್ದೇವೆ ಮಾತ್ರವಲ್ಲದೆ ನಾವೂ ಇನ್ನೂ ಅಲ್ಲಿದ್ದೇವೆ ಎಂಬುದಕ್ಕೆ ಇದು ಸಾಕ್ಷಿಯಾಗಿದೆ.

ದೇವಜನರಾಗಿರುವವರು ಲೋಕದವರಿಗಿಂತ ಪ್ರತ್ಯೇಕರಾದವರು – ಅವರ ನಿರೀಕ್ಷೆಗಳು, ಅವರ ಧ್ಯೇಯ, ಸಾಮಾನ್ಯ ಸ್ಫೂರ್ತಿ, ಮನೋವೃತ್ತಿಗಳು ವೈವಿಧ್ಯಮಯವಾಗಿವೆ ಎಂದು ದೇವರ ವಾಕ್ಯದ ಮೂಲಕ ಆತ್ಮನು ಸಾಕ್ಷಿ ಹೇಳುತ್ತದೆ – **"ನೀವು ಲೋಕದ ಕಡೆಯವರಾಗಿರುತ್ತಿದ್ದರೆ ಲೋಕವು ನಿಮ್ಮ ಮೇಲೆ ತನ್ನವರೆಂದು ಮಮತೆ ಇಡುತ್ತಿತ್ತು. ಆದರೆ ನೀವು ಲೋಕದ ಕಡೆಯವರಲ್ಲದೆ ಇರುವುದರಿಂದಲೂ ನಾನು ನಿಮ್ಮನ್ನು ಲೋಕದವರೊಳಗಿಂದ ಆರಿಸಿ ತೆಗೆದುಕೊಂಡಿರುವುದರಿಂದಲೂ ಲೋಕವು ನಿಮ್ಮ ಮೇಲೆ ದ್ವೇಷಮಾಡುತ್ತದೆ"** (ಯೋಹಾನ 15:19) ; **"**ಕ್ರಿಸ್ತಯೇಸುವಿನಲ್ಲಿ ಸದ್ಭಕ್ತರಾಗಿ ಜೀವಿಸುವುದಕ್ಕೆ ಮನಸ್ಸು ಮಾಡುವವರೆಲ್ಲರೂ ಹಿಂಸೆಗೊಳಗಾಗುವರು**"** (2 ತಿಮೋ. 3:12).

ಈ ಮಾತುಗಳು ಜೀವನದಲ್ಲಿನ ನಮ್ಮ ಅನುಭವಗಳನ್ನು ಯುಕ್ತವಾಗಿ ಪ್ರತಿನಿಧಿಸುತ್ತದೆ ಎಂದು ನಮ್ಮ ಹೃದಯಗಳು ಸಾಕ್ಷಿಹೇಳಬಲ್ಲುದೋ? ಹಾಗಾದಲ್ಲಿ, ದೇವರ ಆತ್ಮ (ಮನಸ್ಸು) ಪುನಃ ನಮ್ಮ ಆತ್ಮ (ಮನಸ್ಸು)ದೊಂದಿಗೆ ನಾವು ಆತನವರು ಎಂದು ಸಾಕ್ಷಿ ಹೇಳುತ್ತದೆ. ನಮ್ಮ ಕರ್ತನು ಮಾತನಾಡಿದ ಈ ಲೋಕದಲ್ಲಿ ಅನೇಕ ಲೌಕಿಕ ಜನರೂ ಇದ್ದರು ಎಂಬುದನ್ನು ನಾವು ಮರೆತುಬಿಡಬೇಕೋ? ಅವರುಗಳಲ್ಲಿ ಈ ಲೋಕದ ಆತ್ಮನು ಕಾಲೂರಿದ್ದನು. ನಮ್ಮ ಕರ್ತನ ಕಾಲದಲ್ಲಿ ನಾಮಾಂಕಿತ ಯೆಹೂದ್ಯ ಸಭೆ ಎನಿಸಿಕೊಂಡವರ ಬಗ್ಗೆ ಇದು ಸತ್ಯವಾಗಿತ್ತು. ನಿಜವಾಗಿ ಆತನ ಹಿಂಸೆಗಳೆಲ್ಲವೂ ಧಾರ್ಮಿಕ ಗುರುಗಳಿಂದಲೇ ಬಂದವುಗಳು. ಆದುದರಿಂದ ನಮ್ಮ ಕರ್ತನ ಹೆಜ್ಜೆಜಾಡಿನಲ್ಲಿ ನಡೆಯುವವರೆಲ್ಲರೂ ಒಂದೇ ವಿಧವಾದ ನಿರಾಶೆಯ ಅನುಭವಗಳನ್ನು ಹೊಂದಿದವರಾಗಿದ್ದಾರೆ ಎಂಬುದಕ್ಕೆ ನಾವು ಆಶ್ಚರ್ಯಪಡಬೇಕಾಗಿಲ್ಲ ಮತ್ತು ಈ ಲೋಕದ ಆತ್ಮನು ಅದರ ಅತ್ಯಂತ ಪ್ರತಿರೋಧಕ ರೂಪದಲ್ಲಿ ನಾವು ಸ್ವಾಭಾವಿಕವಾಗಿ ನಿರೀಕ್ಷಿಸಿರದ ಸ್ಥಳದಲ್ಲಿ, ತಾವು ದೇವರ ಮಕ್ಕಳು ಎಂದು ಹೇಳಿಕೊಳ್ಳುವವರ ಮಧ್ಯದಲ್ಲಿ ಪ್ರಕಟವಾಗುವುದು. ನಮ್ಮ ಕರ್ತನ ದಿನಗಳಲ್ಲಿದ್ದ ಪ್ರಮುಖ ಧಾರ್ಮಿಕ ವ್ಯಕ್ತಿಗಳು ಆತನನ್ನು 'ಬೆಲ್ಜೆಬೂಲ' ಅಂದರೆ 'ಪಿಶಾಚಿಗಳ ಒಡೆಯನು' ಎಚಿದು ಕರೆದರು. ಪವಿತ್ರಾತ್ಮನು ನಮ್ಮ ಕರ್ತನ ಮೂಲಕವಾಗಿ ಈ ಬಗ್ಗೆ **"ಅವರು ಮನೆಯ ಯಜಮಾನನಿಗೆ ಬೆಲ್ಜೆಬೂಲನೆಂದು ಹೆಸರಿಟ್ಟ ಮೇಲೆ ಆತನ ಮನೆಯವರನ್ನು ಏನೆಂದಾರು?"** (ಮತ್ತಾಯ 10:25)

ಎಂದು ಪ್ರಶ್ನಿಸುತ್ತಾನೆ. ಆದುದರಿಂದ ನಾವು ನಮ್ಮನ್ನು ಸತ್ಯದೊಂದಿಗೆ ಗುರುತಿಸಿಕೊಂಡಿರುವುದರಿಂದ ಮತ್ತು ನಾವು ಅದರ ಸೇವೆಮಾಡುವವರಾದುದರಿಂದ ನಮ್ಮ ಬಗ್ಗೆ ಕೆಟ್ಟದಾಗಿ ಮಾತನಾಡಿದರೂ, ನಾವು ಸರಿಯಾದ ಮಾರ್ಗದಲ್ಲಿದ್ದೇವೆಂಬ ಒಂದು ಹೆಚ್ಚುವರಿ ಆತ್ಮನ ಸಾಕ್ಷ್ಯವು ನಮಗೆ ಇದರಲ್ಲಿ ಕಂಡುಬರುತ್ತದೆ.

ನಮ್ಮ ಕರ್ತನು ಅಂದಿನ ಯೆಹೂದಿ ಸಭೆಯ ಜನಪ್ರಿಯ ನಾಯಕರುಗಳೊಂದಿಗೆ ಕೈಜೊಡಿಸಿದ್ದರೆ ಮತ್ತು ಪ್ರೀತಿಯಲ್ಲಿ ಸತ್ಯವನ್ನು ಹೇಳುವುದಕ್ಕೆ ವಿಮುಖನಾಗಿರುತ್ತಿದ್ದರೆ, ಆತನ ಕಾಲದ ತಪ್ಪು ಸಿದ್ಧಾಂತಗಳನ್ನು ಅವರ ಗಮನಕ್ಕೆ ತಾರದೇ ಇರುತ್ತಿದ್ದರೆ ಆತನನ್ನು ಯಾರೂ ದ್ವೇಷಿಸುತ್ತಿದ್ದಿಲ್ಲ ಮತ್ತು ಆತನಿಗೆ ಯಾವ ವಿಧವಾದ ಹಿಂಸೆಯೂ ಉಂಟಾಗುತ್ತಿರಲಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಆತನಿಗೆ ಜನರಲ್ಲಿ ಬಹಳ ಮನ್ನಣೆ ದೊರೆಯುತ್ತಿತ್ತು. ಆದರೆ ಆತನು ತಾನೇ ಹೇಳಿದಂತೆ **"ಮನುಷ್ಯರಲ್ಲಿ ಶ್ರೇಷ್ಟವೆನಿಸಿಕೊಳ್ಳುವಂಥದು ದೇವರ ದೃಷ್ಟಿಯಲ್ಲಿ ಅಸಹ್ಯವಾಗಿದೆ"** (ಲೂಕ 16:15).

ನಮ್ಮ ಕರ್ತನು ಮೌನವಹಿಸಿ ಕಪಟಿಗಳಾದ ಶಾಸ್ತ್ರಿ ಫರಿಸಾಯರುಗಳನ್ನು ಬೈಲಿಗೆಳೆಯದೆ, ಅವರ ಸೋಗು, ಉದ್ದವಾದ ಪ್ರಾರ್ಥನೆಗಳು ಮತ್ತು ತಪ್ಪು ಬೋಧನೆಗಳ ಬಗ್ಗೆ ಮಾತನಾಡದೇ ಇರುತ್ತಿದ್ದರೆ, ಅವರು ನಿಸ್ಸಂದೇಹವಾಗಿ ಆತನ ತಂಟೆಗೆ ಬಾರದೆ ಆತನನ್ನು ತನ್ನಷ್ಟಕ್ಕೇ ಇರಲು ಬಿಟ್ಟುಬಿಡುತ್ತಿದ್ದರು, ಆತನಿಗೆ ಯಾವ ಹಿಂಸೆಯನ್ನೂ ನೀಡುತ್ತಿದ್ದಿಲ್ಲ; ಆತನ ಸತ್ಯದ ಸಲುವಾಗಿ ಬಾಧೆಯನ್ನನುಭವಿಸಬೇಕಾಗಿರಲಿಲ್ಲ. ಅವರ ಅನುಯಾಯಿಗಳ ವಿಷಯದಲ್ಲಿಯೂ ಹಾಗೆಯೇ ಆಗುತ್ತಿತ್ತು; ಅದೇ ವರ್ಗದ, ಸತ್ಯ ಮತ್ತು ಸತ್ಯದ ಆತ್ಮವುಳ್ಳವರು, ಕರ್ತನ ಬೋಧನೆಗಳನ್ನು ಅನುಸರಿಸುತ್ತಿರುವವರು, ತಮ್ಮ ಬೆಳಕನ್ನು ಅನ್ಯರ ಮುಂದೆ ಪ್ರಕಾಶಿಸುತ್ತಿರುವವರು ಈಗ ದ್ವೇಷ ಮತ್ತು ಹಿಂಸೆಗಳನ್ನು ಅನುಭವಿಸುತ್ತಿರುವರು. ಇದರಲ್ಲಿ ಕೆಲವರು, ಈ ಕಾರಣಗಳಿಂದ, ಸತ್ಯವನ್ನು ಪ್ರೀತಿಯಿಂದ ಹೇಳುವ ಉತ್ತಮವಾದ ಆ ಕಾರಣದಿಂದ ಶ್ರಮೆಯನ್ನು ಅನುಭವಿಸುತ್ತಿರುವರು, ಅವರು ಧನ್ಯರು. ಆದರೆ ಅವರು ಅಪೊಸ್ತಲನು ಹೇಳುವಂತೆ **"ನೀವು ಕ್ರಿಸ್ತನ ಹೆಸರಿನ ನಿಮಿತ್ತ ನಿಂದೆಗೆ ಗುರಿಯಾದರೆ ಧನ್ಯರೇ; ತೇಜೋಮಯವಾದ ಆತ್ಮನಾಗಿರುವ ದೇವರಾತ್ಮನು ನಿಮ್ಮಲ್ಲಿ ನೆಲೆಗೊಂಡಿದ್ದಾನಲ್ಲಾ"** (1 ಪೇತ್ರ 4:14) ಎಂಬ ಮಾತುಗಳಿಗನುಸಾರವಾಗಿ ಅವರು ಆತ್ಮಸಾಕ್ಷಿ ಹೊಂದಿ ಇಕ್ಕಟ್ಟಾದ ಮಾರ್ಗದಲ್ಲಿ ಪ್ರಾಮಾಣಿಕ ರಾಗಿರುವರು.

ಪುನಃ **"ಈ ಪಾಪಿಷ್ಟ ಸಂತತಿಯಲ್ಲಿ ಯಾವನು ನನಗೂ ನನ್ನ ಮಾತುಗಳಿಗೂ ನಾಚಿಕೊಳ್ಳುತ್ತಾನೋ ಅವನಿಗೆ ಮನುಷ್ಯಕುಮಾರನು ತಾನು ತನ್ನ ತಂದೆಯ ಪ್ರಭಾವದೊಡನೆ ಪರಿಶುದ್ಧ ದೂತರ ಸಮೇತವಾಗಿ ಬರುವಾಗ ನಾಚಿಕೊಳ್ಳುವನು"** (ಮಾರ್ಕ 8:38) ಎಂಬ ನಮ್ಮ ಕರ್ತನ ಹೇಳಿಕೆಯಂತೆ ಪವಿತ್ರಾತ್ಮನು ಸಾಕ್ಷಿಹೇಳುವವನಾಗಿದ್ದಾನೆ. ಆದುದರಿಂದ ಯಾರು ತಮ್ಮ ಹೃದಯವು ಕರ್ತನೊಂದಿಗೆ ಪ್ರೀತಿಯುಲ್ಲಿರುವುದಾಗಿ ಕಂಡುಕೊಳ್ಳುತ್ತಾರೋ ಪ್ರತಿಯೊಂದು ಸೂಕ್ತ ಸಮಯದಲ್ಲಿ ಯೇಸುವು ತಮ್ಮ ವಿಮೋಚಕನು ಮತ್ತು ಒಡೆಯನು ಎಂದು ಒಪ್ಪಿಕೊಳ್ಳುತ್ತಾರೋ ಅಂಥವರು ಆತನ ಮಾತುಗಳಿಗೆ ಸಂತೋಷಿಸುತ್ತಾರೆ ಮತ್ತು ಆತನ ಸಾಕ್ಷಿಯ ಮಾತುಗಳನ್ನು ಆತನು ದೇವರ ಮಗುವು ಮತ್ತು ಆತನ ರಾಜ್ಯದಲ್ಲಿ ಬಾಧ್ಯಸ್ಥನು ಎಂಬುದಕ್ಕೆ ಅದು ಪವಿತ್ರಾತ್ಮನ ಮತ್ತೊಂದು ಸಾಕ್ಷಿಯಾಗಿ ಹೊಂದಿರುವವರೆಗೂ ಅದನ್ನು ಪ್ರಾಮಾಣಿಕವಾಗಿ ಪ್ರಸ್ತುತಿಗೊಳಿಸುತ್ತಾರೆ. ಅಂಥವರಿಗೆ ಅವರುಗಳನ್ನು ತನ್ನ ತಂದೆಯ ಮತ್ತು ದೇವದೂತರುಗಳ ಎದುರಿನಲ್ಲಿ ತನ್ನವರೆಂದು ಒಪ್ಪಿಕೊಳ್ಳುವೆನೆಂಬ ಅವರ ಒಡೆಯನ ವಾಗ್ದಾನದಲ್ಲಿ ಸಂತೋಷಿಸುವುದಕ್ಕೆ ಕಾರಣವುಂಟು. ಆದರೆ, ಯಾರಿಗಾದರೂ ಇಂಥಾಃ ವಾಗ್ದಾನವು ಇಲ್ಲದೇ ಹೋದಲ್ಲಿ – ಅದಕ್ಕೆ ವ್ಯತಿರಿಕ್ತವಾಗಿ ಅವರ ಹೃದಯಗಳು ಅವರು ಕರ್ತನ ಬಗ್ಗೆ ನಾಚಿಕೆಯುಳ್ಳವರಾಗಿದ್ದಾರೆ ಅಂದರೆ ತಾವು ಆತನ ಅನುಯಾಯಿಗಳು ಎಂದು ಒಪ್ಪಿಕೊಂಡು ಆತನ ಸಹೋದರರು ಎನ್ನಿಸಿಕೊಳ್ಳಲು, ಆತನ ದೇಹದ ಅಂಗವೆನಿಸಿಕೊಳ್ಳಲು ನಾಚಿಕೊಳ್ಳುತ್ತಾರೆ ಮತ್ತು ಆತನು ಬೋಧಿಸಿದ ಆತನ ಸಿದ್ಧಾಂತಗಳನ್ನು ಒಪ್ಪಿಕೊಳ್ಳಲು ಲಜ್ಜಿತರಾಗಿದ್ದಾರೆ. ಇಂಥಾಃ ಅನುಭವಗಳುಳ್ಳ ಯಾರಿಗಾದರೂ ಅವರ ಇಂಥಾಃ ಸ್ಥಿತಿಯಲ್ಲಿ ಯಾವುದೇ ಬದಲಾವಣೆಗಳು ಕಾಣದೇ ಹೋದಲ್ಲಿ ಕರ್ತನು ಸಹಾ ಅವರ ಬಗ್ಗೆ ತನ್ನ ತಂದೆಯ ಮತ್ತು ತನ್ನ ಪವಿತ್ರ ದೂತರುಗಳ ಮುಂದೆ ತನ್ನವರೆಂದು ಅರಿಕೆ ಮಾಡಲು ನಾಚಿಕೆಪಡುವವನಾಗಿದ್ದಾನೆ.

ಮುಂದುವರೆದು, ಪವಿತ್ರಾತ್ಮನು **"ದೇವರಿಂದ ಹುಟ್ಟಿರುವಂಥದೆಲ್ಲವು** (ಪಡಕೊಂಡವರೆಲ್ಲರು) **ಲೋಕವನ್ನು ಜಯಿಸುತ್ತದೆ. ಲೋಕವನ್ನು ಜಯಿಸುವಂಥದು ನಮ್ಮ ನಂಬಿಕೆಯೇ"** (1 ಯೋಹಾನ 5:4) ಎಂಬ ಸಾಕ್ಷಿ ನೀಡುತ್ತದೆ. ನಾವು ನಮ್ಮ ಹೃದಯಗಳನ್ನು, ಆತ್ಮಗಳನ್ನು ಪವಿತ್ರಾತ್ಮನ ಈ ಸಾಕ್ಷಿಯು ಬೆಳಕಿನಡಿಯುಲ್ಲಿ ಪರೀಕ್ಷಿಸಿಕೊಳ್ಳೋಣ. ನಾವು ಈ ಮಟ್ಟದಲ್ಲಿ ಜಯಶಾಲಿಗಳಾಗಿದ್ದೇವೆಯೋ? ಆ ಮಟ್ಟವು ಏನೆಂದರೆ, ಕರ್ತನವರಾಗಬೇಕಾದರೆ, ನಾವು ಈ ಲೋಕದ ಸಾಮರಸ್ಯಕ್ಕೆ ಹೊರತಾಗಿರಬೇಕು, ಅದರೊಂದಿಗೆ, ಅದರ ಗುರಿಯೊಂದಿಗೆ, ಅದರ ನಿರೀಕ್ಷೆ ಮತ್ತು ಆಕಾಂಕ್ಷೆಗಳೊಂದಿಗೆ ತಿಕ್ಕಾಟವುಳ್ಳವರಾಗಿ ಕಂಡುಬರಬೇಕು. ತಿಕ್ಕಾಟ ಎಂಬ ಆಲೋಚನೆಯು "ಲೋಕವನ್ನು ಜಯಿಸುವುದು" ಎಂಬ

ಪದಗಳಲ್ಲಿ ವ್ಯಕ್ತವಾಗುತ್ತದೆ. ಅದರೊಂದಿಗೆ, ಅದರ ಸಾಮಾನ್ಯ ಸ್ಫೂರ್ತಿಗಳಾದ ಸ್ವಾರ್ಥ, ಜಂಭ, ಆಶೆ ಮುಂತಾದವುಗಳೊಂದಿಗೆ ಸಹಾನುಭೂತಿ ಮತ್ತು ಸಂಯೋಜನೆಯುಳ್ಳ ಯಾರೂ ಕೂಡಾ ಲೋಕವನ್ನು ಜಯಿಸಲಾರರು.

ನಾವು ಈ ಲೋಕವನ್ನು ಜಯಿಸುವಲ್ಲಿ ಸಕಾರಾತ್ಮಕವಾಗಿದ್ದೇವೆಯೋ, ಇಲ್ಲವೋ ಎಂದು ನಿರ್ಧರಿಸುವ ಮೊದಲು ನಾವು ಗಮನಿಸಬೇಕಾದುದೆಂದರೆ, ನಾವು ಈ ಲೋಕವನ್ನು ಜಯಿಸುವುದೆಂದರೆ ಮುಖಸ್ತುತಿಯ ಮೂಲಕ ಅಥವಾ ಅದರ ಅವಿವೇಕತನದೊಂದಿಗೆ ಕೈಜೋಡಿಸಿ ಅದಕ್ಕೆ ಒಂದು ಧಾರ್ಮಿಕ ತಿರುವು ನೀಡಲು ಪ್ರಯತ್ನಿಸುವುದರ ಮೂಲಕ ಅಲ್ಲ, ಅಥವಾ ನಾವು ಯಾವುದಾದರೂ ನೈತಿಕ, ಧಾರ್ಮಿಕ ಕೆಲಸಗಳಲ್ಲಿ ತೊಡಗಿಸಿಕೊಳ್ಳುವುದು ಅಂದರೆ ಸಬ್ಬತ್ತಿನ ಶಾಲೆಗಳಲ್ಲಿ ಬೋಧಿಸುವುದು ಅಥವಾ ಬಡವರಿಗೆ ಸಹಾಯಮಾಡುವುದು ಅಥವಾ ಯಾವುದಾದರೂ ಪಂಥೀಯ ಸಭ್ಯ ಸದಸ್ಯರಾಗುವ ಮೂಲಕವೂ ಅಲ್ಲ. ಈ ಯಾವುದೇ ರೀತಿಯಲ್ಲಿ ನಾವು ಈ ಲೋಕವನ್ನು ಜಯಿಸಬಹುದೆಂದು ನಮ್ಮ ಕರ್ತನು ಸೂಚಿಸುವುದೂ ಇಲ್ಲ, ಸಾಕ್ಷಿ ಹೇಳುವುದೂ ಇಲ್ಲ. ಆತನ ಹೇಳಿಕೆಗಳು ಸಕಾರಾತ್ಮಕವಾಗಿವೆ. ಈ ಲೋಕವನ್ನು ಜಯಿಸುವಂಥ ವಿಜಯವೆಂದರೆ ನಂಬಿಕೆಯೇ. ಈ ರೀತಿಯಲ್ಲಿ ಆತ್ಮನು ಸಾಕ್ಷಿಹೇಳುತ್ತಾ "ಜಯಶಾಲಿಗಳಾಗಬೇಕಾದರೆ ನೋಡುವವರಾಗಿ ನಡೆಯದೆ ನಂಬುವವರಾಗಿ ನಡೆಯಬೇಕು" (2 ಕೊರಿಂಥ 5:7) ಎಂದು ಹೇಳುತ್ತದೆ. ನಾವು ಕಾಣುವಂಥಾಃ ವಸ್ತುಗಳನ್ನು ಅಂದರೆ ಜನಪ್ರಿಯತೆ, ಲೋಕದ ಪ್ರದರ್ಶನಗಳು, ಪಂಗಡಗಳ ಶ್ರೇಷ್ಠತೆ ಮುಂತಾದವುಗಳನ್ನು ನೋಡದೆ ನಾವು ಕಾಣದಿರುವಂತವುಗಳನ್ನು ಅಂದರೆ ಆತ್ಮೀಕ ಸಂಗತಿಗಳನ್ನು, ನಿತ್ಯನಿರಂತರವಾದ ಸಂಗತಿಗಳನ್ನು ನೋಡಬೇಕು. ಯಾಕೆಂದರೆ **"ನಾವು ಕಾಣುವಂಥಾದನ್ನು ಲಕ್ಷಿಸದೆ ಕಾಣದಿರುವಂಥದನ್ನು ಲಕ್ಷಿಸುವವರಾಗಿದ್ದೇವೆ. ಕಾಣುವಂಥದ್ದು ಸ್ವಲ್ಪ ಕಾಲ ಮಾತ್ರ ಇರುವುದು; ಕಾಣದಿರುವಂಥದ್ದು ಸದಾಕಾಲವೂ ಇರುವುದು"** (2 ಕೊರಿಂಥ 4:18) ಎಂದು ಬರೆದದೆ. ಕವಿಯ ಈ ಮಾತುಗಳಲ್ಲಿ ವ್ಯಕ್ತವಾಗುವಂತೆ ನಾವು ನಮ್ಮ ನಂಬಿಕೆಯನ್ನು ವ್ಯಕ್ತಪಡಿಸಬೇಕು :–

*'" I would rather walk in the dark with God,*
*Than go with the throng in the light''*

ಇನ್ನೂ ಮುಂದುವರೆದು, ಪವಿತ್ರಾತ್ಮನು ನಮಗೆ ವಾಕ್ಯದ ಮೂಲಕ ಸಾಕ್ಷಿ ಹೇಳುವುದೇನೆಂದರೆ, ನಾವು ದೇವರ ಮಕ್ಕಳಾಗಿರುವುದಾದರೆ, ನಮಗೆ ಪ್ರಸ್ತುತ ಸಂಗತಿಗಳ ಬಗ್ಗೆಯಾಗಲೀ, ಮುಂಬರುವ ಸಂಗತಿಗಳ ಬಗ್ಗೆ ಆಗಲೀ ತಿಳುವಳಿಕೆ ಇಲ್ಲದೇ ಇರುವುದಿಲ್ಲ. ಯಾಕೆಂದರೆ ನಾವು ದೇವರಿಂದ ಆತನ ಕೃಪಾವಾಕ್ಯಗಳ ಮೂಲಕ, ಆತನ ಆತ್ಮೀಕ ನುಡಿಗಳ ಮೂಲಕ ಜ್ಞಾನೋದಯ ಹೊಂದಿಕೊಳ್ಳುತ್ತೇವೆ, ಶಿಕ್ಷಣಪಡೆಯುತ್ತೇವೆ. ನಾವು ಪ್ರಭುದ್ಧರಾದಂತೆಲ್ಲಾ 'ಕೃಪೆಯಲ್ಲಿ ಬೆಳೆಯುವವರಾಗಿ' ನಾವು ವಾಕ್ಯವೆಂಬ ಹಾಲಿನೊಂದಿಗೆ, ಘಟ್ಟಿಯಾದ ಆಹಾರವನ್ನು ಅಪೇಕ್ಷಿಸಿ ಅವುಗಳನ್ನು ಹೊಂದಿಕೊಳ್ಳುತ್ತೇವೆ. ಇವುಗಳು ನಮ್ಮ ಪೂರ್ಣ ಬೆಳವಣಿಗೆಗೆ ಅಗತ್ಯವಾಗಿದೆ ಎಂದು ಅಪೋಸ್ತಲರುಗಳು ಹೇಳಿದ್ದಾರೆ (1 ಪೇತ್ರ 2:2; ಇಬ್ರಿಯ 5:13,14 ಇವುಗಳನ್ನು ನೋಡಿರಿ). ಆತ್ಮನ ಕೃಪೆ, ನಂಬಿಕೆ, ಮನಸ್ಥೈರ್ಯ, ಜ್ಞಾನ, ಸ್ವಯಂ ನಿಯಂತ್ರಣ, ತಾಳ್ಮೆ, ಧರ್ಮಶ್ರದ್ಧೆ, ಸಹೋದರ ಸ್ನೇಹ, ಪ್ರೀತಿ ಮುಂತಾದವುಗಳಲ್ಲಿನ ಅಭಿವೃದ್ಧಿಯು ನಮ್ಮನ್ನು ತಂದೆಯ ಮತ್ತು ನಮ್ಮ ಕರ್ತನಾದ ಯೇಸುಕ್ರಿಸ್ತನ ಸಮೀಪ ಸಾಂಗತ್ಯಕ್ಕೆ ತರುತ್ತದೆ. ಈ ಕಾರಣದಿಂದ ಕರ್ತನು ನಮ್ಮ ಸಂಗಡ ಹೆಚ್ಚು ಸಂಪರ್ಕ ಮಾಡುವವನಾಗಿ ಸ್ಪಷ್ಟವಾಗಿ ಆತನ ಕೃಪಾಭರಿತವಾದ ಯೋಜನೆಗಳ ಬಗ್ಗೆ ಮಾತ್ರವಲ್ಲದೆ ಆತನ ಸ್ವಂತ ಕೃಪಾಭರಿತವಾದ ಗುಣಲಕ್ಷಣಗಳ ಬಗ್ಗೆ ತಿಳಿಸುವವನಾಗಿದ್ದಾನೆ.

ಈ ಬೆಳವಣಿಗೆಯನ್ನು ಉಲ್ಲೇಖಿಸುವವನಾಗಿ ಅಪೋಸ್ತಲ ಪೇತ್ರನು **"ಇವು ನಿಮ್ಮಲ್ಲಿದ್ದು ಹೆಚ್ಚುತ್ತಾ ಬಂದರೆ ನಮ್ಮ ಕರ್ತನಾದ ಯೇಸುಕ್ರಿಸ್ತನ ಸಂಬಂಧವಾದ ಪರಿಜ್ಞಾನವನ್ನು ಹೊಂದುವ ವಿಷಯದಲ್ಲಿ ನಿಮ್ಮನ್ನು ಆಲಸ್ಯಗಾರರೂ ನಿಷ್ಫಲರೂ ಆಗದಂತೆ ಮಾಡುತ್ತವೆ. ಇವುಗಳಿಲ್ಲದವನು ಕುರುಡನಾಗಿದ್ದಾನೆ; ಅವನು ದೂರದೃಷ್ಟಿಯುಳ್ಳವನಾಗಿದ್ದು ತನ್ನ ಹಿಂದಣ ಪಾಪಗಳು ಪರಿಹಾರವಾಗಿ ತಾನು ಶುದ್ಧನಾದುದನ್ನು ಮರೆತುಬಿಟ್ಟಿದ್ದಾನೆ. ಆದದರಿಂದ ಸಹೋದರರೇ, ದೇವರು ನಿಮ್ಮನ್ನು ಕರೆದದ್ದನ್ನೂ ಆದುಕೊಂಡದ್ದನ್ನೂ ದೃಢಪಡಿಸಿಕೊಳ್ಳುವುದಕ್ಕೆ ಮತ್ತಷ್ಟು ಪ್ರಯಾಸಪಡಿರಿ. ಹೀಗೆ ನೀವು ಮಾಡಿದರೆ ಎಂದಿಗೂ ಎಡಹುವುದಿಲ್ಲ. ಮತ್ತು ನಮ್ಮ ಕರ್ತನೂ ರಕ್ಷಕನೂ ಅಗಿರುವ ಯೇಸುಕ್ರಿಸ್ತನ ನಿತ್ಯರಾಜ್ಯದಲ್ಲಿ ಪ್ರವೇಶಿಸುವ ಹಾಗೆ ದೇವರು ನಿಮಗೆ ಧಾರಾಳವಾಗಿ ಅನುಗ್ರಹಿಸುವನು"** (2 ಪೇತ್ರ 1:8–11) ಎಂದು ಬರೆದಿದ್ದಾನೆ. (ಇದನ್ನು ಯೋಹಾನ 16:12,15ರೊಂದಿಗೆ ಹೋಲಿಸಿರಿ.)

ತಮಗೆ ಇಂಥಾಃ ಸಾಕ್ಷಿ ಉಂಟಾಗಿದೆಯೋ ಇಲ್ಲವೋ, ಯೇಸುಕ್ರಿಸ್ತನಲ್ಲಿ ತನ್ನ ಈ ಬೆಳವಣಿಗೆಯ ಬಗ್ಗೆ ಆತನ ಸಾಕ್ಷ್ಯವು ಮತ್ತು ಇಲ್ಲಿ ನಿರ್ದಿಷ್ಟಗೊಳಿಸುವ ಫಲಕ್ಕನುಸರವಾಗಿ ತಾನು ಬೆಳೆಯುತ್ತಿದ್ದಾನೋ, ಪ್ರವರ್ಧಮಾನಕ್ಕೆ ಬರುತ್ತಿದ್ದಾನೋ ಇಲ್ಲವೋ ಎಂದು ಪ್ರತಿಯೊಬ್ಬರೂ ಪರೀಕ್ಷಿಸಿಕೊಳ್ಳಬೇಕು. ಪ್ರೀತಿಯಲ್ಲಿ ನಮ್ಮ ಬೆಳವಣಿಗೆಯು ಮತ್ತು ಆತ್ಮನ ಎಲ್ಲಾ ಫಲಗಳು ಜ್ಞಾನದಲ್ಲಿ ನಮ್ಮ ಬೆಳವಣಿಗೆಯ ಮೇಲೆ ಆತುಕೊಂಡಿದೆ ; ಮತ್ತು

ದೈವಿಕ ಸಂಗತಿಗಳ ಬಗ್ಗೆ ಇರುವ ಜ್ಞಾನದಲ್ಲಿನ ನಮ್ಮ ಬೆಳವಣಿಗೆಯು ಆತ್ಮನ ಫಲಗಳಲ್ಲಿನ ನಮ್ಮ ಬೆಳವಣಿಗೆಯ ಮೇಲೆ ಆತುಕೊಂಡಿದೆ. ಜ್ಞಾನದ ಪ್ರತಿಯೊಂದು ಹೆಜ್ಜೆಯೂ ಅದಕ್ಕೆ ಅನುರೂಪವಾದ ಕರ್ತವ್ಯ ಮತ್ತು ವಿಧೇಯತೆಗಳನ್ನು ತರುತ್ತದೆ, ಮತ್ತು ತೆಗೆದುಕೊಂಡ ಕರ್ತವ್ಯ ಮತ್ತು ವಿಧೇಯತೆಯ ಪ್ರತಿಯೊಂದು ಹೆಜ್ಜೆಯನ್ನು ಮುಂದುವರೆದ ಜ್ಞಾನದ ಮತ್ತೊಂದು ಹೆಜ್ಜೆಯು ಅನುಸರಿಸುತ್ತದೆ ಈ ರೀತಿಯಲ್ಲಿ ಆತ್ಮನು ಸಾಕ್ಷಿಹೇಳುತ್ತದೆ ಮತ್ತು ಇದು ಕ್ರಿಸ್ತನ ಶಾಲೆಯಲ್ಲಿ ದೇವರಿಂದ ಬೋಧಿಸಲ್ಪಟ್ಟವರೆಲ್ಲರ ಅನುಭವವೂ ಆಗುತ್ತದೆ. ಬೆಳವಣಿಗೆಯ ಆತ್ಮನ ಈ ಅನುಭವವು ಕೃಪೆಯಲ್ಲಿಯೂ ಜ್ಞಾನದಲ್ಲಿಯೂ ನಮಗುಂಟಾದರೆ ನಾವು ಅದಕ್ಕಾಗಿ ಸಂತೋಷಪಡೋಣ! ಮತ್ತು ಅದು ನಮ್ಮನ್ನು ಜ್ಞಾನದಲ್ಲಿಯೂ ಕೃಪೆಯಲ್ಲಿಯೂ ಸಮರ್ಪಕವಾದ ದೈವಿಕ ಮಾರ್ಗದರ್ಶನಕ್ಕೆ ತರುವವರೆಗೂ ನಾವು ಅದರಲ್ಲೇ ಮುಂದುವರೆಯೋಣ.

## ಪವಿತ್ರಾತ್ಮನ ಭವಿಷ್ಯದಲ್ಲಿನ ಸಾಕ್ಷ್ಯ
## The Holy Spirits Future Testimony

ಪವಿತ್ರಾತ್ಮವು ಪುನಃಸಂಧಾನ ಹೊಂದಿದ ಮಾನವ ಜಾತಿಗೆ ಮುಂದಿನ ಯುಗದಲ್ಲಿಯೂ ಅದೇ ರೀತಿಯಲ್ಲಿ ಸಾಕ್ಷಿ ಹೇಳುತ್ತವೆ. ಆದರೆ ಸತ್ಯಸಂಗತಿಗಳಿಗೆ ಹೋಲಿಕೆ ಇಲ್ಲದಂತೆ ಆತ್ಮನನ್ನು ಹೊಂದಿಕೊಂಡಿರುವವರು ಇನ್ನು ಮುಂದೆ ಕೆಲವು ವಿಶೇಷ ಸೇವಕರುಗಳಂತೆಯೂ, ಸೇವಕಿಯರುಗಳಂತೆಯೂ ಇರುವುದಿಲ್ಲ. ಆದರೆ ಪ್ರವಾದಿಯಾದ ಯೋವೇಲನು ಹೇಳುವಂತೆ "ಎಲ್ಲಾ ಮನುಷ್ಯರ ಮೇಲೆ" (ಯೋವೇಲ 2:28). "ದೇವರಿಗೆ ತಕ್ಕಂತೆ ನಡೆದುಕೊಳ್ಳುವವರೆಲ್ಲರೂ ಹಿಂಸೆಗೆ ಒಳಗಾಗುವರು" ಎಂಬುದು ಇನ್ನು ಮುಂದೆ ಆತ್ಮನ ಸಾಕ್ಷಿಯಾಗಿರುವುದಿಲ್ಲ. ಯಾಕೆಂದರೆ, ಯಾವುದೇ ವಿಧವಾದ ಹಿಂಸೆಗೂ ಆಗ ಅವಕಾಶ ಇರುವುದಿಲ್ಲ. ಅದು ಇನ್ನು ಮುಂದೆ ತ್ಯಾಗದ 'ಇಕ್ಕಟ್ಟಾದ ಮಾರ್ಗ'ದ ಬಗ್ಗೆ ಸಾಕ್ಷಿ ಹೇಳುವುದಿಲ್ಲ. ಯಾಕೆಂದರೆ ತ್ಯಾಗದ ದಿನವು ದಾಟಿಹೋಗಿರುತ್ತದೆ. "ಅಲ್ಲಿ ರಾಜಮಾರ್ಗವಿರುವುದು, ಅದರಲ್ಲಿ ಯಾವುದೇ ಎಡವಿಬೀಳುವ ಕಲ್ಲುಗಳಿರುವುದಿಲ್ಲ" (ಯೆಶಾಯ 35:8; 62:10 ನೋಡಿರಿ). ಕೆಟ್ಟದ್ದನ್ನು ಮಾಡುವವರನ್ನು ತೊಡೆದು ಹಾಕಲಾಗುವುದು: ಆದರೆ ಕರ್ತನಿಗಾಗಿ ಕಾದುಕೊಂಡಿರುವವರು ಲೋಕವನ್ನು ಬಾಧ್ಯವನ್ನಾಗಿ ಪಡಕೊಳ್ಳುವರು (ಅ.ಕೃ. 3:23 ; ಕೀರ್ತನೆ 37:7–11 ನೋಡಿರಿ) ಎಂಬುದನ್ನು ನೋಡುವರು ಮತ್ತು ಒಳ್ಳೆಯದನ್ನು ಮಾಡುವವರಿಗೆ ಆಶೀರ್ವಾದವೂ, ಇಚ್ಛಾಪೂರ್ವಕವಾಗಿ ಕೆಟ್ಟದ್ದನ್ನು ಮಾಡುವವರಿಗೆ ದಂಡನೆಯೂ ನಾಶನವೂ ಉಂಟಾಗುವುದನ್ನು ಕಣ್ಣಾರೆ ಕಾಣುವರು ಎಂಬ ಸಾಕ್ಷಿ ಹೇಳಲ್ಪಡುತ್ತದೆ. ಈ ಆತ್ಮನು ದೇವರ ಅದೇ ಆತ್ಮನಾಗಿದ್ದು ಆಡಳಿತದಲ್ಲಿ ವ್ಯತ್ಯಾಸಕ್ಕೆ ಒಳಪಟ್ಟದ್ದಾಗಿರುತ್ತದೆ.

ಪವಿತ್ರಾತ್ಮವು ಯಾವ ರೀತಿಯ ಸಾಕ್ಷಿ ಹೇಳಲಿದೆ? ದೇವರ ವಾಕ್ಯದ ಮೂಲಕವಾಗಿ ಅದರ ಕೆಲವು ಸಾಕ್ಷ್ಯಗಳೇನು? ಎಂಬುದನ್ನು ಕಲಿತುಕೊಂಡ ಮೇಲೆ ನಾವು ಮಾನಸಿಕ ಮತ್ತು ದೈಹಿಕ ಸ್ಥಿತಿಗಳ (ಇದನ್ನು ಭಾವನೆಗಳು ಎಂದೂ, ಕೆಲವೊಮ್ಮೆ ಪಾವಿತ್ರಾತ್ಮನ ಸಾಕ್ಷಿ ಎಂದೂ ತಪ್ಪಾಗಿ ಕರೆಯುವುದುಂಟು) ಕಾರಣ ಉಂಟಾಗುವ ಎಲ್ಲಾ ಅನುಮಾನಗಳೂ ಅಂಜಿಕೆಗಳೂ ಮೀರಿ ಇವುಗಳು ನಿಜವಾಗಿಯೂ ಹೆಚ್ಚು ತೃಪ್ತಿಕರವಾಗಿರುವುದನ್ನು ಕಾಣುತ್ತೇವೆ. ಪರಂತು, ಎಲ್ಲಾ ಕ್ರೈಸ್ತರೂ ದೇವರಾತ್ಮನಿಂದ ತಮ್ಮ ಆತ್ಮ ಅಥವಾ ಮನಸ್ಸುಗಳೊಂದಿಗೆ ಒಂದೇ ತೆರನಾದ ಸಾಕ್ಷಿಯನ್ನು ಹೊಂದಿಕೊಳ್ಳುವುದಿಲ್ಲ ಎಂಬ ಸತ್ಯದ ಬಗ್ಗೆ ನಮ್ಮ ಗಮನವನ್ನು ನಾವು ಸೆಳೆಯಬೇಕಾಗುತ್ತದೆ. ದೀರ್ಘವಾದ ಅನುಭವ ಮತ್ತು ಅಭಿವೃದ್ಧಿಯುಳ್ಳ ಎಲ್ಲಾ ಕ್ರೈಸ್ತರೂ ಈ ಎಲ್ಲಾ ಅಂಶಗಳ ಬಗ್ಗೆ ಮತ್ತು ದೇವರ ವಾಕ್ಯದಲ್ಲಿ ನಮೂದಿಸಿರುವ ಇತರ ಅಂಶಗಳ ಬಗ್ಗೆ ಸಾಕ್ಷಿ ಹೊಂದಿದವರಾಗಿರಬೇಕು.; ಆದರೆ ಕೆಲವೊಂದು ಯುವ ಕ್ರೈಸ್ತರೂ ಇದ್ದಾರೆ, ಅವರು ಈ ಎಲ್ಲಾ ಸಾಕ್ಷಿಗಳಿಗೆ ತಕ್ಕಂತೆ ಪ್ರಗತಿಯನ್ನು ಹೊಂದಿಕೊಂಡವರಲ್ಲ. – ಅವರಲ್ಲಿ ಎಲ್ಲರೂ ಅಲ್ಲದಿದ್ದರೂ ಕೆಲವರಾದರೂ ನಿಜವಾಗಿಯೂ ದೇವರಿಂದ ಹುಟ್ಟಿದವರಾಗಿರಬಹುದು. ಆದರೆ ಮಹಾತೋಟಗಾರನು ಅಂಥಾಃ ಎಳೆಯ ಕೊಂಬೆಯ ಮೊಳಕೆಯಿಂದ ಯಾವುದೇ ಫಲವನ್ನು ಅದು ಹಸಿರುಬಣ್ಣದ ಎಳೆಯದಾಗಲೀ, ಇನ್ನೂ ಮಾಗದ ಕಾಯಿಗಳನ್ನಾಗಲೀ, ಬಲಿತ ಹಣ್ಣುಗಳನ್ನಾಗಲೀ ನಿರೀಕ್ಷಿಸುವುದಿಲ್ಲ.

ನೂತನವಾಗಿ ಹುಟ್ಟಿದವರು (ಪಡಕೊಂಡವರು) ಹೊಂದಿಕೊಳ್ಳಬಹುದಾದ ಪ್ರಥಮ ಸಾಕ್ಷಿ ಎಂದರೆ ಅವರು ಕರ್ತನಿಂದ ಅಂಗೀಕರಿಸಲ್ಪಟ್ಟಿದ್ದಾರೆ ಎಂಬುದು ; ಅವರು ನಿಜವಾದ ದ್ರಾಕ್ಷೆಬಳ್ಳಿಯ ಎಳೆಯ ಕೊಂಬೆಗಳಾಗಿದ್ದಾರೆ ಮತ್ತು ದ್ರಾಕ್ಷೆಯ ಸ್ಫೂರ್ತಿ ಎಂದರೆ ಬೆಳೆಯಬೇಕು ಮತ್ತು ದ್ರಾಕ್ಷೆಬಳ್ಳಿಯಂತಾಗಬೇಕು, ಫಲಗಳನ್ನು ಫಲಿಸಬೇಕು ಎಂಬ ಬಯಕೆ ಅವರಲ್ಲಿದೆ ಎಂಬುದು. ಕೊಂಬೆಯು ಮೊದಲ ಚಿಗುರು ಬಿಟ್ಟ ಮೇಲೆ ಎಲೆಯ ಸೂಚನೆಗಳು ಮತ್ತು ಮೊಗ್ಗುಗಳ ವಾಗ್ದಾನವು ಉಂಟಾಗಲು ಹೆಚ್ಚು ಸಮಯ ಹಿಡಿಯುವುದಿಲ್ಲ ಮತ್ತು ಅವುಗಳ ಗ್ರಹಿಕೆಯುಂಟಾಗುತ್ತದೆ. ಆತ್ಮೀಕ ಕುಟುಂಬದಲ್ಲಿ ಹೊಸದಾಗಿ ಹುಟ್ಟಿದ ಮಗುವು ತನ್ನ ಸಂಬಂಧವನ್ನು ಅದರ ಹಳೆಯ ಮತ್ತು ಹೆಚ್ಚು ಬೆಳೆದ ಅಂಗಗಳೊಡನೆ ಪ್ರಕಟಿಸುವುದು ಹೆಚ್ಚು ಆಹಾರ ಸೇವಿಸುವುದರಿಂದಲ್ಲ. ಅದು ಅದರ ಉಸಿರುಗಟ್ಟಿಸಬಹುದು ಆದರೆ ಅದು ಅದರ

ಶಕ್ತಿನೀಡುವ ಹಾಲನ್ನು ಬಯಸಿ ಆ ಮೂಲಕ ಬೆಳೆಯುವುದರಿಂದಲೇ. – 1 ಪೇತ್ರ 2:2.

ಮೇಲೆ ತಿಳಿಸಿದ ಸಾಕ್ಷಿಗಳಲ್ಲಿ ಯಾವುದನ್ನಾದರೂ ಹೊಂದಿಕೊಂಡವರು ಅದಕ್ಕೆ ಅನುಸಾರವಾಗಿ ಸಂತೋಷಿಸಬೇಕು; ಮತ್ತು ಕೊರತೆಯಿರುವ ಪ್ರತಿಯೊಂದು ನಿರ್ಧಿಷ್ಟ ಸಂಗತಿಗಳ ಬಗ್ಗೆ ಲಕ್ಷಿಸಿ ಅವನ್ನು ಅಭಿವೃದ್ಧಿಪಡಿಸಲು ಹೆಣಗಾಡಬೇಕು. ಈ ರೀತಿಯಾಗಿ ಅವರು ಅಂತಿಮವಾಗಿ ಆತ್ಮನ ಸಾಕ್ಷಿಯನ್ನು ಕರ್ತನ ನಿಷ್ಠಾವಂತ ಜನರಿಗೆ ಮಾರ್ಗವೂ ಅನುಭವವೂ ಆಗಿರುವ ದೇವರ ವಾಕ್ಯದ ಪ್ರತಿಯೊಂದು ಅಂಶವನ್ನೂ ತಮ್ಮ ಪರವಾಗಿ ಹೊಂದಿಕೊಳ್ಳುತ್ತಾರೆ. ಅಂಥವರು ಇನ್ನು ಮುಂದೆ "'Tis a point I long to know" (ಆಹಾ, ಅದೊಂದು ಅಂಶವನ್ನು ತಿಳಿಯಲು ನಾನು ಹಂಬಲಿಸಿದ್ದೆ) ಎಂಬ ರಾಗ ಹಾಡಬೇಕೆಂದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ನಂಬಿಕೆ ಪೂರ್ಣ ಭರವಸೆ ಅವರಿಗಿರುತ್ತದೆ ಮತ್ತು ಅದು ಬೇರೂರಿ ನಂಬಿಕೆಯಲ್ಲಿ ವೃದ್ಧಿ ಹೊಂದಿಕೊಳ್ಳುತ್ತಿದೆ ಎಂದು ಅವರಿಗೆ ತಿಳಿದುಬರುತ್ತದೆ. ಇದು ದೈವಿಕವಾಗಿ ವ್ಯವಸ್ಥೆಗೊಂಡ ಮಾರ್ಗವಾಗಿದೆ; "Doubting the castle" ಎಂಬ ಅಂಜಿಕೆಯಿಂದ ನಾವು ಪಾರಾಗುತ್ತೇವೆ – ಯಾಕೆಂದರೆ ನಮ್ಮ ನಂಬಿಕೆಯು ದೇವರ ವಾಗ್ದಾನಗಳಲ್ಲಿ ಭಧ್ರವಾಗಿದೆ ಮತ್ತು ಅದು ಬಿದ್ದು ಹೋಗುವುದಿಲ್ಲ. ಇದು ಪರೀಕ್ಷೆಗಳ, ವಿರೋಧಗಳ ಮತ್ತು ಅಂಧಕಾರದ ಸಮಯಗಳಲ್ಲಿಯೂ ಅಷ್ಟೇ ಸತ್ಯವಾಗಿರುತ್ತದೆ. ಯಾಕೆಂದರೆ ನಾವು ಪರಲೋಕದ ತಂದೆಯ ಮುಗುಳ್ನಗೆಯ ಬೆಳಕಿನಲ್ಲಿ ಹೆಚ್ಚು ನಿರ್ಧಿಷ್ಟವಾಗಿ ಆನಂದಿಸುತ್ತೇವೆ. ಕವಿಯೊಬ್ಬನು ತನ್ನ ಸರಿಯಾದ ಆಲೋಚನೆಯನ್ನು ಈ ರೀತಿಯಾಗಿ ವ್ಯಕ್ತಪಡಿಸಿದ್ದಾನೆ :–

*"When darkness seems to veil his face*
*I rest in the unchanging grace*
*His oath, his covenant, his blood*
*Support me in the whelming flood*
*When all around my soul gives way,*
*He then is all my hope and stay"*

## ಆತ್ಮನಿಂದ ಪರಿಶುದ್ಧಗೊಳಿಸುವುದು
## Sanctified by the Spirit

**"ಆದರೂ ಕರ್ತನಾದ ಯೇಸುಕ್ರಿಸ್ತನ ಹೆಸರಿನಲ್ಲಿಯೂ ನಮ್ಮ ದೇವರ ಆತ್ಮನಲ್ಲಿಯೂ ತೊಳೆದುಕೊಂಡಿರಿ, ದೇವಜನರಾದಿರಿ, ನೀತಿವಂತರೆಂಬ ನಿರ್ಣಯವನ್ನು ಹೊಂದಿದಿರಿ"** (1 ಕೊರಿಂಥ 06:11)

ಪಾವನಗೊಳಿಸುವಿಕೆಯು (ಶುದ್ಧೀಕರಣ) ಪ್ರತ್ಯೇಕಿಸಿಕೊಳ್ಳುವುದನ್ನು ಸೂಚಿಸುತ್ತದೆ. ಪಾವನಗೊಂಡವರೆಲ್ಲರೂ, ತಮ್ಮನ್ನು ಪ್ರತ್ಯೇಕಿಸಿಕೊಂಡವರೆಲ್ಲರೂ ದೇವರಿಗೆ ಸಂಪೂರ್ಣವಾಗಿ ಪ್ರತಿಷ್ಠಿಸಿಕೊಂಡವರೆಲ್ಲರೂ ತೊಳೆಯಲ್ಪಡಬೇಕು ಅಥವಾ "ನಂಬಿಕೆಯಿಂದ ನೀತಿ ನಿರ್ಣಯಹೊಂದಿಕೊಂಡು ಶುಚಿಗೊಳಿಸಲ್ಪಟ್ಟವರಾಗಿ" ಎಣಿಸಲ್ಪಡಬೇಕು. ನಿಜವಾದ ನೀತಿನಿರ್ಣಯವು ಯುಗಾಂತರಕಾಲದಲ್ಲಿ ಈ ಲೋಕವು ನಮ್ಮ ಮಹಾ ಮಧ್ಯಸ್ಥಗಾರನ ಮಾರ್ಗದರ್ಶನ ಮತ್ತು ಸಹಾಯದ ಅಡಿಯಲ್ಲಿ ಮತ್ತು ಪ್ರಾಯಶ್ಚಿತ್ತ ಪ್ರಕ್ರಿಯೆಯ ಭಾಗವಾಗಿ ದೇವರನ್ನು ಸಮೀಪಿಸುವ ಮೂಲವಾಗಿದೆ. ನೀತಿನಿರ್ಣಯವು ಅತಿ ಮಹತ್ವಕ್ಕಿಂತ ಕಡಿಮೆಯಾದುದಲ್ಲ, ನೀತಿವಂತರೆಂದು ನಿರ್ಣಯ ಹೊಂದುವರು, ಅಂದರೆ ನಂಬಿಕೆಯ ಮೂಲಕವಾಗಿ ನೀತಿನಿರ್ಣಯಗೊಳ್ಳುವುದು. ಸುವಾರ್ತಾಯುಗದಲ್ಲಿ ಕಾರ್ಯಗತಗೊಳ್ಳುವ ವ್ಯವಸ್ಥೆಯಾಗಿದೆ. ಇದರಿಂದ ಸ್ವಾಭಾವಿಕವಾಗಿ ಪಾಪಿಗಳಾದ ನಾವು, ನಮ್ಮ ದೇಹದಲ್ಲಿ ಸರ್ವಸಂಪೂರ್ಣತೆಯು ವಾಸಮಾಡದೇ ಇರುವಾಗ ನಿರ್ಮಲರೂ, ಪವಿತ್ರರೂ, ನಿರ್ಣಯಿಸಲ್ಪಟ್ಟವರೂ, ಕ್ರಿಸ್ತನನ್ನು ನಮ್ಮ ವಿಮೋಚಕನೆಂದು ಒಪ್ಪಿಕೊಳ್ಳುವುದರ ಮೂಲಕ ದೇವರಿಂದ ಅಂಗೀಕರಿಸಲ್ಪಟ್ಟವರೂ ಎಂದು ಎಣಿಸಲ್ಪಡುತ್ತೇವೆ. "ದೇವರ ವೇದೋಕ್ತಿಗಳಿಗನುಸಾರವಾಗಿ ಕ್ರಿಸ್ತನು ನಮಗಾಗಿ ಮರಣ ಪಟ್ಟನು" ಎಂಬ ದೇವರ ವಾಕ್ಯದ ಸಾಕ್ಷಿಯನ್ನು ನಾವು ನಂಬುತ್ತೇವೆ. ; ಇದನ್ನು ನಂಬುವವರಾಗಿ, ಮತ್ತು ಪಾಪದಿಂದ ತಪ್ಪಿಸಿಕೊಳ್ಳುವ ಮನಸ್ಸುಳ್ಳವರಾಗಿ ನಾವು ದೇವರಿಂದ ಸರ್ವ ಸಂಪೂರ್ಣರೋ, ನಿಷ್ಪಾಪಿಗಳೋ ಎಂಬಂತೆ ಆತನ ಅಮೂಲ್ಯವಾದ ರಕ್ತದ ಅರ್ಹತೆಯ ಮೇರೆಗೆ ನಿರ್ಣಯಿಸಲ್ಪಟ್ಟವರಾಗಿ ದೇವರಿಂದ ಅಂಗೀಕರಿಸಲ್ಪಡುತ್ತೇವೆ. ಈ ರೀತಿಯಾಗಿ ನಂಬಿಕೆಯ ಮೂಲಕ ನೀತಿನಿರ್ಣಯ ಹೊಂದಿಕೊಂಡು, ನಾವು ದೇವರಲ್ಲಿ ಸಮಾಧಾನದಿಂದಿರುತ್ತೇವೆ ಹಾಗೂ ಆತನನ್ನು ಸಮೀಪಿಸಬಹುದು ಮತ್ತು ಆತನಿಂದ ಅಂಗೀಕರಿಸ ಲ್ಪಡುತ್ತೇವೆ. ಮಾತ್ರವಲ್ಲದೆ ನಮ್ಮ ಕರ್ತನಾದ ಯೇಸುಕ್ರಿಸ್ತನ ಅರ್ಹತೆಯ ಮೇರೆಗೆ ದೇವರಿಂದ ಅಂಗೀಕರಿಸಲ್ಪಟ್ಟ ಕಾರ್ಯಗಳಲ್ಲಿ ನಮ್ಮನ್ನು ತೊಡಗಿಸಿಕೊಳ್ಳಬಹುದು. ನಮ್ಮ ನೀತಿನಿರ್ಣಯದ ಪುರಾವೆಯಾಗಿ ನಮ್ಮ ನೀತಿನಿರ್ಣಯ ಮತ್ತು ಶುದ್ಧೀಕರಣವು ದೇವರ ವಾಕ್ಯದ ಮೂಲಕ ಉಂಟಾಗುತ್ತದೆ ಮತ್ತು ಇದು ನಮ್ಮಲ್ಲಿರುವ ಆತ್ಮಕ್ಕೆ 'ಮುದ್ರೆ' ಮತ್ತು 'ಸಾಕ್ಷಿ'ಎಂಬುದಾಗಿ ಕರೆಯಲ್ಪಡುತ್ತದೆ.

ನಮ್ಮ ಪ್ರತಿಷ್ಠೆಯ ಪ್ರತಿಜ್ಞೆಗಳಿಗನುಸಾರವಾಗಿ ಜೀವಿಸುವ ಶಕ್ತಿಯು ನಮಗೆ ಪವಿತ್ರಾತ್ಮ ಅಥವಾ ದೇವರ ಪವಿತ್ರ ಮನಸ್ಸಾಗಿದೆ. ಇದನ್ನು ಕ್ರಿಸ್ತನಲ್ಲಿ ನಾವಿಟ್ಟಿರುವ ನಂಬಿಕೆಯ ಫಲವಾಗಿ ಮತ್ತು ಆತನೊಂದಿಗೆ ಮರಣಹೊಂದುವ ನಮ್ಮ ಪ್ರತಿಷ್ಠೆಯ ದೆಸೆಯಿಂದ ಪಡೆಯುತ್ತೇವೆ. ತಂದೆಯ ವಾಕ್ಯವನ್ನು ಧ್ಯಾನಮಾಡುವುದರ

ಮೂಲಕ ಮತ್ತು ಅವುಗಳಿಗೆ ವಿಧೇಯರಾಗುವ ನಮ್ಮ ಸ್ಫೂರ್ತಿಯ ಮೂಲಕ ನಾವು ಪಡಕೊಳ್ಳುವ ಸತ್ಯದ ಆತ್ಮನು ನಮಗೆ ಈ ಲೋಕವನ್ನು ಮತ್ತು ನಮ್ಮ ಸ್ವಂತ ವಿರೂಪಗೊಂಡ ದಾಹಗಳನ್ನು ಜಯಿಸಲು ಅಗತ್ಯವಾದ ಶಕ್ತಿಯನ್ನು ನೀಡುವುದಾಗಿದೆ. ಆ ಪ್ರಕಾರವಾಗಿ, ನಾವು ಅನುಭವಿಸಿದ ಎಲ್ಲಾ ಶುದ್ಧೀಕರಣವು, ನಮ್ಮ ಎಲ್ಲಾ ನೀತಿನಿರ್ಣಯವು, ಮತ್ತು ನಮ್ಮನ್ನು ನೀತಿವಂತಿಕೆಗಾಗಿ ಪ್ರತ್ಯೇಕಿಸಿಕೊಳ್ಳುವುದು ಮತ್ತು ಪಾಪದಿಂದ ನಮ್ಮನ್ನು ದೂರವಿರಿಸಿಕೊಳ್ಳುವುದು ಇವುಗಳನ್ನು ನಾವೀಗ ಪರಿಗಣಿಸುತ್ತಿರುವ ವಾಕ್ಯಭಾಗವು ಪ್ರಕಟಿಸುತ್ತದೆ – ಈ ದೆಸೆಯಲ್ಲಿ ದೊರೆಯುವ ಎಲ್ಲಾ ಜಯಗಳೂ ಮತ್ತು ಆಶೀರ್ವಾದಗಳೂ ನಮಗೆ ನಮ್ಮ ಕರ್ತನಾದ ಯೇಸುಕ್ರಿಸ್ತನ ಅರ್ಹತೆಯ ದೆಸೆಯಿಂದ ಮತ್ತು ಪವಿತ್ರವಾದ ಆತ್ಮನಿಂದ ಮತ್ತು ನಾವು ಹೊಂದಿಕೊಂಡಿರುವ ದೇವರ ಆತ್ಮನಿಂದ ಮತ್ತು ಅದರ ಮೂಲಕವಾದ ವಾಹಿನಿಯಿಂದ ಬಂದವುಗಳಾಗಿವೆ.

ಈ ಕಂಡುಕೊಳ್ಳುವಿಕೆಯೊಂದಿಗೆ ಇತರ ದೇವರ ವಾಕ್ಯಗಳೂ ಪೂರ್ಣವಾದ ಸಾಮರಸ್ಯದಲ್ಲಿವೆ. ಅದೇ ಅಪೋಸ್ತಲನಾದ ಪೌಲನು ಸಭೆಗಾಗಿ **"ಶಾಂತಿ ದಾಯಕನಾದ ದೇವರು ತಾನೇ ನಿಮ್ಮನ್ನು ಪರಿಪೂರ್ಣವಾಗಿ ಪವಿತ್ರಮಾಡಲಿ"** (1 ಥೆಸ. 5:23) ಎಂದು ಪ್ರಾರ್ಥಿಸುವವನಾಗಿದ್ದಾನೆ. ಆತನು ಇಲ್ಲಿ ದೇವರ ಆತ್ಮನು ಪಾವನಗೊಳಿಸುವ ಬಗ್ಗೆ ಇರುವ ಮೇಲಿನ ಹೇಳಿಕೆಗಳಿಗೆ ವಿರುದ್ಧವಾಗಿ ಹೇಳುವುದಿಲ್ಲ. ದೇವರು ತಾನೇ ಪಾವನಗೊಳಿಸುವವನಾಗಿದ್ದು ಅದರ ಮಾಧ್ಯಮ, ವಾಹಿನಿ ಪವಿತ್ರಾತ್ಮನೇ ಹೊರತು ಬೇರೆಯೊಬ್ಬ ವ್ಯಕ್ತಿಯಾಗಿರುವುದಿಲ್ಲ.

ಅಪೋಸ್ತಲನಾದ ಪೇತ್ರನು ಸಭೆಯು ದೇವರಿಗೆ ವಿಧೇಯರಾಗುವುದಕ್ಕಾಗಿ ಪವಿತ್ರಾತ್ಮನಿಂದ ಪ್ರತಿಷ್ಠಿಸಲ್ಪಟ್ಟು ದೇವರಿಂದ ಆರಿಸಲ್ಪಟ್ಟಿದೆ ಎಂದು ಬರೆಯುತ್ತಾನೆ (1 ಪೇತ್ರ 1:2 ನೋಡಿರಿ). ಇಲ್ಲಿ ಕಂಡು ಬರುವ ಆಲೋಚನೆ ಏನೆಂದರೆ, ದೇವರು ಆರಿಸಲ್ಪಟ್ಟವರು ಎಂದು ಯಾರನ್ನು ಪರಿಗಣಿಸುತ್ತಾನೋ ಮತ್ತು ಯಾರು ತಮ್ಮ ಕರೆ ಮತ್ತು ಆಯ್ಕೆಯನ್ನು ಖಚಿತಪಡಿಸಿ ಕೊಳ್ಳುವಂತೆ ಎಚ್ಚರಿಸಲ್ಪಟ್ಟಿದ್ದಾರೋ ಅವರ ಇಚ್ಛಾನುಸಾರವಾಗಿ ಅಲ್ಲ, ಅದಕ್ಕಾಗಿ ನಿಗಧಿಪಡಿಸಿರುವ ತತ್ವಗಳಿಗನುಸಾರವಾಗಿ ಅಂಥವರು ಆರಿಸಲ್ಪಟ್ಟಿದ್ದಾರೆ. ಅಂದರೆ, ದೇವರ ಆತ್ಮನು (ಸತ್ಯದ ಪ್ರಭಾವಗಳು) ಅವರ ಮೇಲೆ ಕಾರ್ಯಪ್ರವರ್ತ ವಾಗಿರುವುದಾದರೆ, ಅದು ಅವರನ್ನು ತಂದೆಯ ಚಿತ್ತಕ್ಕೆ, ಯೋಜನೆಗೆ ಮತ್ತು ಅನುಗ್ರಹಕ್ಕೆ ಪೂರ್ಣ ವಿಧೇಯತ್ವದ (ಪಾವನ) ಸ್ಥಿತಿಗೆ ತರುತ್ತದೆ ಮತ್ತು ನಂತರದಲ್ಲಿ ಅವರು ಆಯ್ಕೆಗೊಂಡವರಾಗಿ ರಚಿತರಾಗುತ್ತಾರೆ.

ಅಪೋಸ್ತಲನಾದ ಪೌಲನು ತನ್ನ ಮತ್ತೊಂದು ಪತ್ರಿಕೆಯಲ್ಲಿ ಸಭೆಯಲ್ಲಿನ ಪಾವನಗೊಳಿಸುವಿಕೆ ಮತ್ತು ಶುಚಿತ್ವದ ಶಕ್ತಿಯನ್ನು ದೇವರ ವಾಕ್ಯಕ್ಕೆ ಅನುಗುಣವಾಗಿ **"ಕ್ರಿಸ್ತನು ಸಭೆಯನ್ನು ಪ್ರೀತಿಸಿದನು . . . ಆತನು ಅದನ್ನು ಪ್ರತಿಷ್ಠೆಗೊಳಿಸುವುದಕ್ಕಾಗಿ ತನ್ನನ್ನು ಒಪ್ಪಿಸಿಕೊಟ್ಟನು . . . ವಾಕ್ಯೋಪದೇಶ ಸಹಿತವಾದ ಜಲಸ್ನಾನವನ್ನು ಮಾಡಿಸಿ ಶುದ್ಧಮಾಡಿದನು"** (ಎಫೆಸ 5:26–27) ಎಂದು ಹೇಳಿದ್ದಾನೆ. ಅಪೋಸ್ತಲನು ದೇವರು ತನ್ನ ಸಭೆಯನ್ನು ಪಾವನಗೊಳಿಸುತ್ತಾನೆ ಎಂಬ ತನ್ನ ಹಿಂದಿನ ಹೇಳಿಕೆಗೆ ವ್ಯತಿರಿಕ್ತವಾಗಿ ಇಲ್ಲಿ ಹೇಳುತ್ತಿದ್ದಾನೆಂದು ನಾವು ತಿಳಿಯಬಾರದು. ಸ್ಪಷ್ಟವಾಗಿ ಮತ್ತು ತಪ್ಪುರಹಿತವಾಗಿ ಎಲ್ಲಾ ವಿಚಾರಗಳಲ್ಲಿಯೂ ಆತನ ಆಲೋಚನೆ ಎಂದರೆ ದೇವರ ಪವಿತ್ರಾತ್ಮನು, ಈ ಉದ್ದೇಶಗಳ ಸಲುವಾಗಿಯೇ ಒದಗಿಸಿಕೊಟ್ಟಿರುವ ದೇವರ ಸತ್ಯ ವಾಕ್ಯಗಳ ಮೂಲಕ ಕಾರ್ಯವೆಸಗುತ್ತಾನೆ ಎಂಬುದು. ಅವುಗಳು ನಮ್ಮಲ್ಲಿ ಶುಚಿತ್ವ, ಪ್ರತಿಪಾದನೆ, ಪಾವನಗೊಳಿಸುವಿಕೆ ಇವುಗಳಿಗಾಗಿ ವಿನ್ಯಾಸಗೊಳಿಸಲಾಗಿದೆ.

ಈ ರೀತಿಯಾಗಿ ನಮ್ಮ ಕರ್ತನು ಸಹಾ ಪ್ರಾರ್ಥಿಸುವವನಾಗಿ **"ಇವರನ್ನು ಸತ್ಯದಲ್ಲಿ ಸೇರಿಸಿ ಪ್ರತಿಷ್ಠೆಪಡಿಸು; ನಿನ್ನ ವಾಕ್ಯವೇ ಸತ್ಯವು"** (ಯೋಹಾನ 17:17) ಎಂದಿದ್ದಾನೆ. ಅದೇ ರೀತಿಯಲ್ಲಿ ನಾವು ಸಹಾ ಈ ಪ್ರಸ್ತಾಪದ ಬಗ್ಗೆ ದೇವರ ವಿವಿಧ ವಾಕ್ಯದ ಭಾಗಗಳನ್ನು ಒಟ್ಟಾಗಿ ನೋಡುವಾಗ ಅದು ಸಭೆಯ ಪಾವನಗೊಳಿಸುವಿಕೆಯು ಸತ್ಯದ ಆತ್ಮನ ಮೂಲಕವೇ ನೆರವೇರುತ್ತದೆಂದು ತಿಳಿಸುತ್ತವೆ. ಇದು ಪ್ರತಿಷ್ಠೆಗೊಂಡವರಿಗೆ ಇದೇ ಉದ್ದೇಶದ ಸಲುವಾಗಿ ಒದಗಿಸಲಾಗಿರುವ ದೇವರ ವಾಕ್ಯಗಳ ಮೂಲಕ ತಿಳಿಯುವುದಾಗಿದೆ.

ಈ ರೀತಿಯಾಗಿ ಪಾವನಗೊಂಡವರು ಇನ್ನುಮುಂದೆ ಕ್ರಿಸ್ತ ಯೇಸುವಿನಲ್ಲಿ ನೂತನ ಜೀವಿಗಳಾಗಿದ್ದಾರೆ ಮತ್ತು ಅವರನ್ನು **"ಕ್ರಿಸ್ತೇಸುವಿನಲ್ಲಿ ಪ್ರತಿಷ್ಠಿತರು"** ಎಂದು ಕರೆಯಲಾಗಿದೆ (1 ಕೊರಿಂಥ 1:2). ಹೀಗಿದ್ದಾಗ್ಯೂ ಕ್ರಿಸ್ತನಲ್ಲಿನ ಈ ಪಾವನಗೊಳಿಸುವಿಕೆಯು ದೇವರಾತ್ಮನಿಂದ ಪ್ರತ್ಯೇಕವಾದುದಲ್ಲ ಅಥವಾ ದೇವರ ವಾಕ್ಯದಿಂದಲೂ ಬೇರೆಯಾದುದಲ್ಲ; ಯಾಕೆಂದರೆ, ನಾವು ದೇವರ ಯೋಜನೆಯನ್ನು ಮತ್ತು ಒದಗಿಸುವಿಕೆಗಳನ್ನು ಅಂಗೀಕರಿಸಿರುವ ಕಾರಣ, ನಾವು ಆತ್ಮನ ಪವಿತ್ರಗೊಳಿಸುವಿಕೆಯ ಅಂಶಕ್ಕೆ ಬಂದಿರುವ ಕಾರಣ ನಾವು ನಮ್ಮ ಕರ್ತನಾದ ಯೇಸುಕ್ರಿಸ್ತನೊಂದಿಗೆ ಒಂದಾಗಿದ್ದೇವೆ. ಇದು ಮುಂದೆ ದೇವರ ವಾಕ್ಯದಲ್ಲಿ ತೋರಿಸಲ್ಪಟ್ಟಿದೆ. ಅದೇನೆಂದರೆ – **"ಪವಿತ್ರಮಾಡುವಾತನಿಗೂ ಪವಿತ್ರರಾಗುವವರೆಲ್ಲರಿಗೂ ಒಬ್ಬನೇ ತಂದೆ ಇದ್ದಾನೆ. ಈ ಕಾರಣದಿಂದ ಪವಿತ್ರಮಾಡುವಾತನು ಪವಿತ್ರರಾಗುವವರನ್ನು ಸಹೋದರರೆನ್ನುವುದಕ್ಕೆ ನಾಚಿಕೆಪಡನು"**. ಈ ರೀತಿಯಾಗಿ

ನಾವು ನಮ್ಮ ಕರ್ತನಾದ ಯೇಸುಕ್ರಿಸ್ತನಿಂದಲೂ, ಸತ್ಯದ ಆತ್ಮನಾದ ಪವಿತ್ರಾತ್ಮನ ಮೂಲಕವೂ ತೊಳೆಯಲ್ಪಟ್ಟಿದ್ದೇವೆ, ಶುದ್ಧಿಗೊಳಿಸಲ್ಪಟ್ಟಿದ್ದೇವೆ, ನೀತಿ ನಿರ್ಣಯಿಸಲ್ಪಟ್ಟಿದ್ದೇವೆ.

## "ನೀವು ಪವಿತ್ರಾತ್ಮ ಭರಿತರಾಗಿರ್ರಿ"
## Be ye filled with The Spirit

**"ಪವಿತ್ರಾತ್ಮ ಭರಿತರಾಗಿದ್ದು ಕೀರ್ತನೆಗಳಿಂದಲೂ, ಆತ್ಮಸಂಬಂಧವಾದ ಪದಗಳಿಂದಲೂ ಒಬ್ಬರಿಗೊಬ್ಬರು ಮಾತನಾಡಿಕೊಳ್ಳುತ್ತಾ ನಿಮ್ಮ ಹೃದಯಗಳಲ್ಲಿ ಕರ್ತನಿಗೆ ಗಾಯನಮಾಡುತ್ತಾ ಕೀರ್ತನೆ ಹಾಡುತ್ತಾ ಯಾವಾಗಲೂ ಎಲ್ಲಾ ಕಾರ್ಯಗಳಿಗೋಸ್ಕರ ನಮ್ಮ ಕರ್ತನಾದ ಯೇಸುಕ್ರಿಸ್ತನ ಹೆಸರಿನಲ್ಲಿ ತಂದೆಯಾದ ದೇವರಿಗೆ ಸ್ತೋತ್ರಮಾಡುತ್ತಾ ಕ್ರಿಸ್ತನಿಗೆ ಭಯಪಡುವವರಾಗಿದ್ದು ಒಬ್ಬರಿಗೊಬ್ಬರು ವಿನಯವುಳ್ಳವರಾಗಿ ನಡೆದುಕೊಳ್ಳಿರಿ"** – ಎಫೆಸ 5:18–20.

ಪರಿಶುದ್ಧ ಗ್ರಂಥದ ಸಂದೇಶವೇನೆಂದರೆ, ಕರ್ತನ ಜನರು ಪೂರ್ಣ ಅಥವಾ ಕಡಿಮೆ ಮಟ್ಟದಲ್ಲಿ ಆತನ ಆತ್ಮದಿಂದ ತುಂಬಿದವರಾಗಿರಬಹುದು. ಆತನವರಾಗ ಬೇಕಾದರೆ ಅವರಲ್ಲಿ ಸ್ವಲ್ಪವಾದರೂ ಆತನ ಆತ್ಮವಿರಲೇ ಬೇಕು. ಯಾಕೆಂದರೆ **"ಯಾವನಿಗಾದರೂ ಕ್ರಿಸ್ತನ ಆತ್ಮನು ಇಲ್ಲದಿದ್ದರೆ ಅವನು ಕ್ರಿಸ್ತನವನಲ್ಲ"** (ರೋಮಾ. 8:9). ದೇವರು ಒದಗಿಸಿದವುಗಳನ್ನು ಉಪಯೋಗಿಸುವಲ್ಲಿ ನಾವು ಎಷ್ಟರ ಮಟ್ಟಿಗೆ ಪೂರ್ಣವಾಗಿ ಆತನ ಆತ್ಮನಿಂದ, ಪ್ರವೃತ್ತಿಯಿಂದ ಮತ್ತು ಪ್ರಭಾವಗಳಿಂದ ತುಂಬಿದವರಾಗಿರುತ್ತೇವೋ – ಆತನು ನಮ್ಮ ಹೃದಯಗಳನ್ನು ಮತ್ತು ಜೀವಿತವನ್ನು ಪಾವನಗೊಳಿಸುವ ಮತ್ತು ಈ ಲೋಕದ ಆತ್ಮವುಳ್ಳವರಿಂದ ನಮ್ಮನ್ನು ಪ್ರತ್ಯೇಕಿಸುವ ಉದ್ದೇಶದಿಂದಲೇ ಬಹಿರಂಗಪಡಿಸಿದ ಆತ್ಮ ಅಥವಾ ಸತ್ಯದ ಪ್ರಭಾವವು ನಮ್ಮಲ್ಲಿಯೇ ನೆಲೆಯಾಗಿರುತ್ತದೆ.

ಈ ವಾಕ್ಯಭಾಗದಲ್ಲಿ ಮತ್ತು ಇದೇ ರೀತಿಯ ವಾಕ್ಯಭಾಗಗಳಲ್ಲಿ ವೈಯುಕ್ತಿಕವಾಗಿ ಒಬ್ಬ ಪವಿತ್ರಾತ್ಮನು ಇದ್ದಾನೆ ಎಂಬ ಯಾವುದೇ ಆಲೋಚನೆ ನಮಗೆ ಇರುವುದಿಲ್ಲ. ಇದಕ್ಕೆ ತೀರಾ ವ್ಯತಿರಿಕ್ತವಾಗಿ, ಪವಿತ್ರಾತ್ಮನನ್ನು ಒಬ್ಬ ವ್ಯಕ್ತಿ ಎಂದು ತಿಳುಕೊಂಡರೆ ಅದನ್ನು ಪಡಕೊಳ್ಳುವವರನ್ನು ಹೆಚ್ಚು ಅಥವಾ ಕಡಿಮೆಯಾಗಿ ತುಂಬಿಕೊಳ್ಳಲು ಒತ್ತಾಯಪಡುವುದು ಅಸಂಬದ್ಧತೆ ಎಂದೆನಿಸುತ್ತದೆ. ಆತನು ದೊಡ್ಡವನಾದರೆ ಹೆಚ್ಚಾಗಿ ತುಂಬಿಕೊಳ್ಳುವನು, ಸಣ್ಣವನಾದರೆ, ಕಡಿಮೆಯಾಗಿ ತುಂಬಿಕೊಳ್ಳುವನು. ಪವಿತ್ರಾತ್ಮನು ಒಬ್ಬ ವ್ಯಕ್ತಿಯಾಗಿ, ತ್ರೈಯೇಕತ್ವದ ದೇವರುಗಳಲ್ಲಿ ಒಬ್ಬನಾಗಿ, ಅತ್ಯುತ್ತಮನಿಗೆ ಸಮಾನನಾಗಿದ್ದಾನೆಂದು ಊಹಿಸಿಕೊಳ್ಳುವಾಗ ಆತನು ಅಸಂಪೂರ್ಣ ಮನುಷ್ಯನ ಚಿಕ್ಕದಾದ ವಿಸ್ತಾರದಲ್ಲಿ ಪ್ರವೇಶಿಸಲು ಸಾಧ್ಯವಿಲ್ಲ ಮತ್ತೂ ಆ ಪುಟ್ಟ ಹೃದಯವನ್ನು ಪ್ರವೇಶಿಸಲೂ ಸಾಧ್ಯವಿಲ್ಲ. ಆದರೆ ದೇವರ ಶಕ್ತಿಯ ಮತ್ತು ಪ್ರಭಾವದ ನಿಜವಾದ ಆಲೋಚನೆಯು ನಮಗೆ ಅರ್ಥವಾಗುವಾಗ, ಅಪೋಸ್ತಲನ ಎಚ್ಚರಿಕೆ ಮಾತುಗಳು ನಿಜವಾಗಿಯೂ ಸಮಗ್ರವಾಗಿ ಸಮಂಜಸವಾಗಿದೆ. ನಾವು ನಮ್ಮ ದೇವರ ಪವಿತ್ರವಾದ ಮನಸ್ಸು ಅಥವಾ ಪ್ರವೃತ್ತಿಯಿಂದ ತುಂಬಿಕೊಳ್ಳಲು ಬಯಸುವುದನ್ನು ಮುಂದುವರಿಸಬೇಕು. ಇವುಗಳು ದೇವರು ಪಡಕೊಂಡ ನಮ್ಮ ಕರ್ತನೂ ವಿಮೋಚಕನೂ ಆದ ಆತನ ಏಕೈಕ ಕುಮಾರನ ವ್ಯಕ್ತಿತ್ವದಲ್ಲಿ ಮತ್ತು ವಿಧೇಯತೆಯಲ್ಲಿ ಅತ್ಯಂತ ಸುಂದರವಾಗಿ ನಿದರ್ಶಿಸಲ್ಪಟ್ಟಿದೆ.

ಪವಿತ್ರಾತ್ಮನಿಂದ ತುಂಬಲ್ಪಟ್ಟ ಈ ಆಲೋಚನೆಯು ಅಪೋಸ್ತಲನು ಬೇರೊಂದು ಕಡೆಯಲ್ಲಿ **"ನಮ್ಮ ಮರ್ತ್ಯ ಶರೀರವು ಸೋರಿಹೂಗುವ, ಬಿರುಕು ಬಿಟ್ಟ, ಕುರೂಪಗೊಂಡ ಪಾತ್ರೆಯಂತಿದೆ"** ಎಂಬ ಸಲಹೆಯೊಂದಿಗೆ ಸಾಮರಸ್ಯದಲ್ಲಿದೆ. ಆದರೆ ದೇವರು ಇದರಲ್ಲೇ ತನ್ನ ಪವಿತ್ರಾತ್ಮನು ತುಂಬಿಕೊಳ್ಳಲು ಅನುಮತಿಸಿದ್ದಾನೆ. ಅಪೋಸ್ತಲನ ಸಲಹೆ ಏನೆಂದರೆ, ನಾವು ನಮ್ಮ ಸ್ವಂತ ಅಸಮರ್ಪಕತೆಯನ್ನು ಮತ್ತು ಸುವಾರ್ತೆಯ ಮೂಲಕ ದೇವರಿಂದ ಸ್ಫೂರ್ತಿ ಹೊಂದಿದವರಾಗಿ ನಾವು ಪವಿತ್ರ ಪ್ರಭಾವವು ಸೋರಿಹೋಗುವ ಸಾಧ್ಯತೆಯನ್ನು ತಿಳಿದಿರುವ ದೃಷ್ಟಿಯಲ್ಲಿ ನಾವು ಹೆಚ್ಚು ಪ್ರಾಮಾಣಿಕವಾದ ಗಮನವನ್ನು ಕೊಡಬೇಕಾಗುತ್ತದೆ. ಇಲ್ಲವಾದಲ್ಲಿ ಇವುಗಳು ನಮ್ಮಿಂದ ಸೋರಿಹೋಗಲು ನಾವು ಬಿಟ್ಟುಬಿಡುತ್ತೇವೆ. ಯಾಕೆಂದರೆ, **"ಈ ನಿಕ್ಷೇಪವು ಮಣ್ಣಿನ ಘಟಗಳಲ್ಲಿ ನಮಗುಂಟು"** (ಪವಿತ್ರಾತ್ಮವು, ದೇವರೊಡನೆ ಸಾಮರಸ್ಯವಾಗಿರುವ ನೂತನ ಮನಸ್ಸು) (2 ಕೊರಿಂಥ 4:7; ಇಬ್ರಿಯ 2:1 ಸಹಾ ನೋಡಿರಿ). ಇದು ನಮ್ಮ ಒಡೆಯನ ಹೆಜ್ಜೆಜಾಡಿನಲ್ಲಿ ನಡೆಯುವವರಿಗೆ, ಕ್ರಿಸ್ತನ ಶ್ರಮೆಗಳಲ್ಲಿ ಮತ್ತು ಅದನ್ನು ಅನುಸರಿಸುವ ಮಹಿಮೆಯಲ್ಲಿ ಪಾಲುಗಾರ ರಾಗುವವರಿಗೆ, ಕರ್ತನ ಮಾರ್ಗದಲ್ಲಿದ್ದು ಪವಿತ್ರಾತ್ಮನಿಂದ ತುಂಬಿಕೊಳ್ಳಲು ಬಯಸುವವರಿಗೆ ಯೋಗ್ಯವಾಗಿದೆ. ಈ ಗುರಿಯನ್ನು ಮುಟ್ಟಲು ನಾವು ಕರ್ತನಿಗೆ ಮತ್ತು ಆತನ ದೇಹದ ಸಹಅಂಗಗಳಿಗೆ ಸಮೀಪಸ್ತರಾಗಿರಬೇಕು – ಸಹಾನುಭೂತಿಯಲ್ಲಿ, ಪ್ರೀತಿಯಲ್ಲಿ, ಸಹಕಾರದಲ್ಲಿ ಸಮೀಪವಾಗಿರಬೇಕು. ಮತ್ತು ನಾವು ಸಮಸ್ತ ಸಭೆಯನ್ನು ಪಾವನಗೊಳಿಸುವ ಪ್ರಭಾವದ ಬುಗ್ಗೆಯಾಗಿರುವ ದೇವರ ವಾಕ್ಯಕ್ಕೆ ನಿಕಟವಾಗಿರಬೇಕು – **"ಇವರನ್ನು ಸತ್ಯದಲ್ಲಿ ಪ್ರತಿಷ್ಠೆಪಡಿಸು; ನಿನ್ನ ವಾಕ್ಯವೇ ಸತ್ಯವು"** (ಯೋಹಾನ 17:17).

ಈ ಉದ್ದೇಶಕ್ಕಾಗಿಯೇ ಒದಗಿಸಲ್ಪಟ್ಟಿರುವ ದೇವರ ವ್ಯವಸ್ಥೆಯನ್ನು ನಾವು ಗಮನಿಸದೇ ಹೋದರೆ ನಾವು ಪವಿತ್ರಾತ್ಮನಿಂದ ತುಂಬಿಕೊಳ್ಳಲು ಬಯಸುವುದು ವ್ಯರ್ಥ. ನಾವು ದೇವರ ವಾಕ್ಯವನ್ನು ನಿರ್ಲಕ್ಷಿಸುವವರಾದರೆ ನಾವು

ಶುದ್ಧೀಕರಣಗೊಳಿಸುವ ಈ ಶಕ್ತಿಯನ್ನೇ ನಿರ್ಲಕ್ಷಿಸುವವರಾಗಿದ್ದೇವೆ; ನಾವು ಪ್ರಾರ್ಥನೆಯನ್ನು ಅಲಕ್ಷಿಸಿದಲ್ಲಿ ಮತ್ತೊಂದು ಸವಲತ್ತನ್ನು ಮತ್ತು ಅದು ತರುವ ಸಹಾಯಗಳನ್ನು ಅಲಕ್ಷಿಸಿದಂತಾಗುತ್ತದೆ. ನಾವು ದೇವರಾತ್ಮನ ಮುದ್ರೆಯನ್ನು ಹೊಂದಿರುವದನ್ನು ಕಾಣುವ ದೇವಜನರೊಂದಿಗೆ ಕೂಡಿ ಬರಲು ನಿರ್ಲಕ್ಷಿಸುವುದಾದರೆ ನಾವು "ಜೋಡಿಸಲ್ಪಟ್ಟ ಪ್ರತಿ ಅಂಗದಿಂದ ಅದರದರ ಶಕ್ತಿಯು" ಒದಗಿಸುವ ಅನುಕೂಲತೆಗಳನ್ನು ಸಹಾಯಗಳನ್ನು ಪಡಕೊಳ್ಳಲು ವಿಫಲರಾಗುತ್ತೇವೆ. ಇವು ದೇವರು ಈ ಲೋಕದ ಪ್ರದರ್ಶನಕ್ಕಾಗಿ ದೇಹವೆಂಬ ತನ್ನ ಸಭೆಗೆ ವಿವಿಧ ಅಂಗಗಳ ಮೂಲಕ ವಾಗ್ದಾನಮಾಡಿರುವ ಎಲ್ಲಾ ಸಹಾಯಗಳನ್ನು ಒಳಗೊಂಡಿದೆ ಮತ್ತು ಅವುಗಳನ್ನು ಶುದ್ಧೀಕರಣ ಶಕ್ತಿ ಅಥವಾ ಆತ್ಮನಿಂದ ಪಡಕೊಳ್ಳಬಹುದಾಗಿದೆ (1 ಕೊರಿಂಥ 12:25–28 ಮತ್ತು ಎಫೆಸ 4:16 ನೋಡಿರಿ).

ಆದುದರಿಂದ, "ಪವಿತ್ರಾತ್ಮನಿಂದ ಭರಿತರಾಗಿರಿ" ಎಂಬ ಪ್ರಬೋಧನೆಯು ಹೆಚ್ಚಾಗಿ ಸೂಚಿಸುವುದೇನೆಂದರೆ : ನಾವು ದೇವರು ನಮ್ಮ ಆತ್ಮಿಕ ಅಭಿವೃದ್ಧಿಗಾಗಿ ಸಿದ್ಧಪಡಿಸಿರುವ ವಿವಿಧ ವ್ಯವಸ್ಥೆಗಳನ್ನು, ಮುನ್ನೇರ್ಪಾಡುಗಳನ್ನು ನಾವು ಉಪಯೋಗಿಸಬೇಕು, ನಾವು ಕರ್ತನೊಂದಿಗೆ ವ್ಯಕ್ತಿಗತ ಸಂಪರ್ಕಹೊಂದಲು ಸಾಧ್ಯವಿಲ್ಲದಾಗ್ಯೂ, ನಾವು ಪ್ರಾರ್ಥನೆಗಳ ಮೂಲಕ ಮತ್ತು ಆತನ ದೇಹದ ಅಂಗಗಳ ಮೂಲಕ ಮತ್ತು ಆತನ ಪರಿಶುದ್ಧ ಗ್ರಂಥಗಳ ಮೂಲಕ ಆತನೊಂದಿಗೆ ವ್ಯವಹರಿಸಬಹುದು. ನಮಗೆ ಅಪೋಸ್ತಲರೊಂದಿಗೆ ನೇರವಾದ ಸಂಪರ್ಕವಿಲ್ಲದಾಗ್ಯೂ ನಮಗೆ ಅವರ ಮಾತುಗಳ ಸಂಪರ್ಕವಿದೆ. ನಮಗೆ ಸಭೆಯ ಸದಸ್ಯರೊಡನೆ ನೇರವಾದ ಸಂಪರ್ಕವಾಗಲೀ, ಸಾಂಗತ್ಯವಾಗಲೀ ಇಲ್ಲವಾದರೆ ನಾವು ಅವರೊಂದಿಗೆ ಅಂಚೆಯ ಮೂಲಕ ಇಲ್ಲವೇ ಮುದ್ರಿತ ಮಾಧ್ಯಮಗಳ ಮೂಲಕ ವ್ಯವಹರಿಸಬಹುದು. ನಮಗೆ ದೇವರ ಆತ್ಮನಿಂದ ಭರಿತರಾಗುವ ಅಪೇಕ್ಷೆ ಇರುವುದಾದರೆ ನಾವು ಇವುಗಳಿಗೆ, ಆತನ ಬೋಧನೆಗಳಿಗೆ ವಿಧೇಯರಾಗಬೇಕು.

## "ಆತ್ಮನ ಮುದ್ರೆ"
## The Seal of the Spirit

**"ನಿಮ್ಮ ರಕ್ಷಣೆಯ ವಿಷಯವಾದ ಸುವಾರ್ತೆಯೆಂಬ ಸತ್ಯವಾಕ್ಯವನ್ನು ಕೇಳಿ ಕ್ರಿಸ್ತನಲ್ಲಿ ನಂಬಿಕೆ ಇಟ್ಟವರಾದ ನೀವು ಸಹ ವಾಗ್ದಾನ ಮಾಡಲ್ಪಟ್ಟ ಪವಿತ್ರಾತ್ಮನೆಂಬ ಮುದ್ರೆಯನ್ನು ಹೊಂದಿದಿರಿ. ದೇವರು ಸಂಪಾದಿಸಿಕೊಂಡ ಜನರಿಗೆ ವಿಮೋಚನೆಯಾಗುವುದೆಂಬುದಕ್ಕೆ ಪವಿತ್ರಾತ್ಮನು ನಮ್ಮ ಬಾಧ್ಯತೆಗೆ ಸಂಚಕಾರವಾಗಿದ್ದಾನೆ. ಆ ವಿಮೋಚನೆಯು ದೇವರ ಮಹಿಮೆಗೆ ಎಷ್ಟೋ ಪ್ರಖ್ಯಾತಿಯನ್ನು ಉಂಟು ಮಾಡುವುದು"** (ಎಫೆಸ 1:13–14)

ಹಿಂದಿನ ಕಾಲದಲ್ಲಿ ಮುದ್ರೆಗಳನ್ನು ಅನೇಕ ಉದ್ದೇಶಗಳಿಗಾಗಿ ಉಪಯೋಗಿಸುತ್ತಿದ್ದರು : (1) ಅಂಗೀಕಾರ ಅಥವಾ ಪ್ರಾಮಾಣೀಕರಣದ ಮುದ್ರಿಕೆ ಅಥವಾ ಹಸ್ತಾಕ್ಷರವಾಗಿ (ಸಹಿಯಾಗಿ) (2) ಗುಪ್ತವಾಗಿಡಲು ಅಥವಾ ಯಾರೂ ಒಳನುಗ್ಗದಂತೆ ತಡೆಯುವಂತೆ ಮುದ್ರಿಸಲು (ಉದಾ: ಮತ್ತಾಯ 27:66; ಪ್ರಕ 10:4; 20:3).

ಇವುಗಳಲ್ಲಿನ ಮೊದಲನೆಯ ಅರ್ಥದಲ್ಲಿ ದೇವಜನರು "ವಾಗ್ದಾನ ಮಾಡಲ್ಪಟ್ಟ ಪವಿತ್ರಾತ್ಮನೆಂಬ ಮುದ್ರೆಯನ್ನು ಹೊಂದಿದ್ದಾರೆ" ಎಂದು ಇಲ್ಲಿ ಹೇಳಲಾಗಿದೆ. ಕೆಲವರು ಊಹಿಸುವಂತೆ ಪವಿತ್ರಾತ್ಮನು ಸರಿಸಮಾನರಾದ ಮೂರು ದೇವರನ್ನೊಳಗೊಂಡ ತ್ರೈಯೇಕತ್ವ ಎಂದು ಹೇಳುವುದರ ಒಬ್ಬ ವ್ಯಕ್ತಿಯೋ ಎಂಬಂತೆ ಆತನಿಂದ ನಾವು ಮುದ್ರಿಸಲ್ಪಟ್ಟಿದ್ದೇವೆಂದು ಅಪೋಸ್ತಲನು ಹೇಳುತ್ತಿಲ್ಲ. ನಾವು ವಾಗ್ದಾನವೆಂಬ ಪವಿತ್ರಾತ್ಮನಿಂದ ಮುದ್ರಿಸಲ್ಪಟ್ಟಿದ್ದೇವೆಂದು ಆತನು ಪ್ರಕಟಿಸುತ್ತಾನೆ; ಎಲ್ಲರೂ ಗ್ರಹಿಸಿಕೊಳ್ಳುವಂತೆ ಇದೊಂದು ಪ್ರತ್ಯೇಕವಾದ ಅಲೋಚನೆಯಾಗಿದೆ. ಪವಿತ್ರಾತ್ಮವು ತಂದೆಯಿಂದ ಬಂದುದಾಗಿದೆ; ಆತನು ಕ್ರಿಸ್ತನ ಮೂಲಕ ಪವಿತ್ರಾತ್ಮನಿಂದ ಮುದ್ರಿಸುವವನಾಗಿದ್ದಾನೆ. ಅದುವೇ ಮುದ್ರೆಯಾಗಿದೆ. ಇದನ್ನು ಅಪೋಸ್ತಲನು ಪ್ರಾಮಾಣೀಕರಿಸುತ್ತಾನೆ (ಅ.ಕೃ 2:33 ನೋಡಿರಿ) ಮತ್ತು ಇದು ನಮ್ಮ ಕರ್ತನ ಬಗ್ಗೆ ಇರುವ ದಾಖಲೆಗಳಿಗೆ ತಕ್ಕಂತೆಯೇ ಇದೆ. ಆತನು ಪುತ್ರರ ಮನೆಯಲ್ಲಿ ಆ ರೀತಿಯಾಗಿ ಮುದ್ರಿಸಲ್ಪಟ್ಟವರಲ್ಲಿ ಪ್ರಥಮನು. **"ತಂದೆಯಾದ ದೇವರು ಆತನನ್ನು ನೇಮಿಸಿ ಮುದ್ರೆಹಾಕಿದ್ದಾನೆ"** (ಯೋಹಾನ 6:27) ಎಂದು ಓದುತ್ತೇವೆ.

"ವಾಗ್ದಾನದ ಆತ್ಮನು" ಎಂಬ ಹೇಳಿಕೆಯು ದೇವರ ಪವಿತ್ರ ಪ್ರಭಾವಕ್ಕೆ ಉಪಯೋಗಿಸಲ್ಪಟ್ಟ "ಪವಿತ್ರ ಆತ್ಮನು" "ಸತ್ಯದ ಆತ್ಮನು" ಮುಂತಾದ ಇತರ ಶಬ್ಧಗಳಂತೆ ವಿವರಣಾತ್ಮಕವಾಗಿದೆ. ಈ ಮುದ್ರೆಗೂ ಮತ್ತು ದೇವರು ನಮಗೆ ಮಾಡಿದ ವಾಗ್ದಾನಕ್ಕೂ ಸಂಬಂಧವಿದೆ ಎಂಬುದನ್ನು ಇದು ತೋರಿಸುತ್ತದೆ. ಮುದ್ರಿತರಾದವರೊಂದಿಗೆ ದೇವರು ಮಾಡಿಕೊಂಡ ಒಡಂಬಡಿಕೆಗೆ ಅಂದರೆ "ದೇವರು ತನ್ನ ಪ್ರಭಾವಗುಣಾತಿಶಯಗಳಿಂದ ಅಮೂಲ್ಯವಾಗಿಯೂ ಉತ್ಕೃಷ್ಟವಾಗಿಯೂ ಇರುವ ವಾಗ್ದಾನಗಳನ್ನು ದಯಪಾಲಿಸಿದ್ದಾನೆ" ಎಂಬುದು ಸತ್ಯವಾಗಿವೆ ಎಂಬುದಕ್ಕೆ ಇದು ಪ್ರಮಾಣೀಕರಣ ಅಥವಾ ಸಾಕ್ಷಿಯಾಗಿದೆ. ಮತ್ತು ವಾಗ್ದಾನಮಾಡಲ್ಪಟ್ಟ ಈ ಸಂಗತಿಗಳನ್ನು ಆತನು ದೇವರು ಪ್ರೀತಿ ಮತ್ತು ಶ್ರದ್ಧೆಯಲ್ಲಿ ನೀಡಲಿರುವ ಪರೀಕ್ಷೆಗಳನ್ನು ನಂಬಿಕೆಯಿಂದ ಸಹಿಸಿಕೊಂಡಾಗ ಬಾಧ್ಯಸ್ಥವಾಗಿ ಹೊಂದಿಕೊಳ್ಳುವನು.

ಅಪೋಸ್ತಲನು ಈ ಮುದ್ರೆಯ ಬಗ್ಗೆ ನಂತರದಲ್ಲಿ ಇದೇ ಪತ್ರಿಕೆಯಲ್ಲಿ ಉಲ್ಲೇಖಿಸುವವನಾಗಿ **"ದೇವರ ಪವಿತ್ರಾತ್ಮನನ್ನು ದುಃಖಪಡಿಸಬೇಡಿರಿ; ಆತನಲ್ಲಿಯೇ ವಿಮೋಚನೆಯ ದಿನಕ್ಕಾಗಿ ಮುದ್ರೆಹೊಂದಿದ್ದೀರಲ್ಲಾ"** (ಎಫೆಸ 4:30) ಎಂದಿದ್ದಾನೆ. ಇಲ್ಲಿ ಆತನು ವಾಗ್ದಾನವನ್ನು ವಿಮೋಚನೆಯ ದಿನದೊಂದಿಗೆ ಗುರುತಿಸುತ್ತಾನೆ. ಮತ್ತೊಂದು ಮಾತುಗಳಲ್ಲಿ ವಿಮೋಚನೆಯ ದಿನಕ್ಕಾಗಿ ಪವಿತ್ರಾತ್ಮನ ವಾಗ್ದಾನವೆಂಬ ಮುದ್ರೆ ಎಂಬುದು ಬೇರೊಂದು ರೀತಿಯಲ್ಲಿ ಸಭೆಯವರಾದ ನಾವು ಆತ್ಮನ ಪ್ರಥಮಫಲಗಳನ್ನು ಹೊಂದಿಕೊಳ್ಳುವವರಾಗಿದ್ದೇವೆ ಎಂದು ಹೇಳುವುದಾಗಿದೆ – ಇದು ಕೈ–ಪಾವತಿ, ಇದು ಕರ್ತನು ಮತ್ತು ನಮ್ಮ ನಡುವಣ ಒಡಂಬಡಿಕೆಯನ್ನು ಭದ್ರಪಡಿಸುತ್ತದೆ ಮತ್ತು ನಾವು ಬಲಹೀನರಾಗದೇ ಹೋದಲ್ಲಿ ನಾವು ಈ ವಾಗ್ದಾನಗಳಿಗೆ ಪೂರ್ಣವಾಗಿ ಬಾಧ್ಯರಾಗುತ್ತೇವೆ.

ಪುತ್ರತ್ವ ಮತ್ತು ಭಾಧ್ಯಸ್ಥ ಇವುಗಳ ಸಂಬಂಧಗಳ ಒಡಂಬಡಿಕೆಯ ಈ ಮುದ್ರೆಯು ನಮ್ಮ ಹಣೆಯ ಮೇಲೆ ಹಾಕುವ ಬಾಹ್ಯ ಗುರುತುಗಳಲ್ಲ; ಅಥವಾ ನಮ್ಮ ಭೂಲೋಕ ಸಂಬಂಧ ವ್ಯವಹಾರಗಳಲ್ಲಿ, ಪ್ರಾಪಂಚಿಕ ಸಂಪತ್ತು ಮುಂತಾದವುಗಳಲ್ಲಿ ದೇವರ ಕೃಪೆಯನ್ನು ಪ್ರಕಟಿಸುವ ಗುರುತೂ ಅಲ್ಲ ಅಥವಾ ಇದು ಈಗ ಅಥವಾ ಯಾವಾಗಲಾದರೂ 'ಗುಣಪಡಿಸುವ ವರ' 'ದೇವ ವಾಣಿಗಳನ್ನಾಡುವ ವರ' ಮುಂತಾದವುಗಳಲ್ಲ. ಯಾಕೆಂದರೆ ಈ ಅದ್ಭುತವಾದ ವರಗಳನ್ನು ಹೊಂದಿದ ಅನೇಕರಿಗೆ ಆತ್ಮನ ಮುದ್ರೆಯಾಗಲೀ ಸಾಕ್ಷಿಯಾಗಲೀ ಇರುವುದಿಲ್ಲ – ಅ.ಕೃ. 8:13–23; 1 ಕೊರಿಂಥ 13:1–3.

ಪವಿತ್ರಾತ್ಮನ ಮುದ್ರೆ ಅಥವಾ ವಾಗ್ದಾನದ ಮುದ್ರೆಯು ಮುದ್ರೆ ಹೊಂದಿದವರ ಹೃದಯಗಳಲ್ಲಿ ಅದೆ. ಅದನ್ನು ಹೊಂದಿದವನಿಗೇ ಹೊರತು ಅದು ಇನ್ನ್ಯಾರಿಗೂ ತಿಳಿಯದು (ಪ್ರಕ. 2:17). ಇತರರು ಇದರ ಫಲಗಳನ್ನು ಆತನ ದಿನನಿತ್ಯದ ಜೀವಿತದಲ್ಲಿ ಕಾಣಬಹುದು – **"ನಮ್ಮನ್ನು ಅಭಿಷೇಕಿಸಿ ಕ್ರಿಸ್ತನ ಅನ್ಯೋನ್ಯತೆಯಲ್ಲಿ ಸೇರಿಸಿ ನಮ್ಮನ್ನು ನಿಮ್ಮೊಂದಿಗೆ ಸ್ಥಿರಪಡಿಸುವವನು ದೇವರೇ; ಆತನು ನಮ್ಮ ಮೇಲೆ ಮುದ್ರೆ ಹಾಕಿ ನಮ್ಮ ಹೃದಯಗಳಲ್ಲಿ ಪವಿತ್ರಾತ್ಮನನ್ನು ಸಂಚಕಾರವಾಗಿ ಅನುಗ್ರಹಿಸಿದ್ದಾನೆ"** – 2 ಕೊರಿಂಥ 1:22–23.

ಈ ಪ್ರಾಮಾಣಿಕತೆಯು ಅಥವಾ ಪುತ್ರತ್ವದ ಮುದ್ರೆಯು ತಂದೆಯೊಂದಿಗೆ ಮತ್ತು ಆತನ ಎಲ್ಲಾ ಪವಿತ್ರವಾದ ವ್ಯವಸ್ಥೆಗಳೊಂದಿಗೆ ಸಂಧಾನಗೊಂಡಿದೆ ಮತ್ತು **"ಅಪ್ಪಾ ತಂದೆಯೇ, ನನ್ನ ದೇವರೇ, ನಾನು ನಿನ್ನ ಚಿತ್ತವನ್ನು ನೆರವೇರಿಸಲು ಸಂತೋಷಿಸುತ್ತೇನೆ"** ಎಂದು ಕೂಗಿ ಹೇಳುವ ಧೈರ್ಯ ಕೊಡುತ್ತದೆ ಯಾಕೆಂದರೆ, ಈ ಮುದ್ರೆಯನ್ನು ಅಥವಾ ಪುತ್ರತ್ವದ ಸಂಕೇತವನ್ನು ಹೊಂದಿದವರು ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವರು. ಯಾಕೆಂದರೆ **"ಆತನ ಆಜ್ಞೆಗಳು ಭಾರವಾದವುಗಳಲ್ಲ, ಆನಂದಕರವಾದದ್ದು"** – 1 ಯೋಹಾನ 5:3.

ಮಗನ ಭಾವವನ್ನು ಹೊಂದಿರುವ ಆತ್ಮ ಅಥವಾ ಮಕ್ಕಳೆಂದು ಮುದ್ರಿಸುವುದು, ಪ್ರಥಮ ಫಲಗಳನ್ನು ಹೊಂದಿಕೊಳ್ಳುವುದು ಅಥವಾ ಬರಲಿರುವ ಬಾಧ್ಯತೆಗೆ ನಿಷ್ಠೆಯುಳ್ಳವರು ಎಂದಾದರೆ ಆತ್ಮನು ಸುಧಾರಿಸಿದ ಸಾಕ್ಷ್ಯಗಳಲ್ಲಿ ಒಂದಾಗಿದೆ – ಪ್ರಸ್ತುತ ಕ್ರೈಸ್ತ ಜೀವನದಲ್ಲಿನ ಅನುಸಾರವೇ ಆಗಿದೆ. ಈ ಹಂತದ ಅನುಭವವನ್ನು ಪಡಕೊಳ್ಳುವ ಮೊದಲು ನಾವು ನಮ್ಮ ಪಾಲಿನ ಪ್ರತಿಷ್ಠೆಯ ಪಾಲನ್ನು ಸತ್ಯದ ಆತ್ಮನಿಂದ ಪವಿತ್ರತೆಗೆ ಪಡಕೊಂಡವರಾಗಿ ದೇವರ ಚಿತ್ತವನ್ನು ತಿಳಿದು ಅದರಂತೆ ನಡೆದುಕೊಳ್ಳುವುದರ ಮೂಲಕ ಕ್ರಿಸ್ತನ ಪ್ರತಿಷ್ಠೆಗೊಂಡ ದೇಹವಾದ ಸಭೆಗೆ ಬರುವುದರಿಂದ ಹೊಂದಿಕೊಳ್ಳಬೇಕಾಗುತ್ತದೆ. ಈ ಅನುಭವವು ನಾವು ಆತ್ಮನಿಂದ ಸ್ಪೂರ್ತಿಗೊಂಡವರಾಗಿ ನೀತಿವಂತಿಕೆಯ ಸೇವೆಮಾಡುವುದರಿಂದ ಉಂಟಾಗುತ್ತದೆ; ಹೇಳಬೇಕಾದರೆ, ನಾವು ಭ್ರೂಣ ಸ್ಥಿತಿಯಿಂದ ದೇವರು ನಮ್ಮನ್ನು ಮಕ್ಕಳೆಂದು ಕಂಡುಕೊಳ್ಳುವ ಸ್ಥಿತಿಗೆ ಸೇರಿ ಹಾಗೆಂದು ಮುದ್ರೆಹೊಂದಿಕೊಳ್ಳುವುದಕ್ಕೆ ಇದೊಂದು ಸಾಕ್ಷ್ಯವಾಗಿದೆ.

ಎಲ್ಲಾ ವಿಶ್ವಾಸಿಗಳೂ ಸತ್ಯದ ಆತ್ಮನಾದ ದೇವರ ಪವಿತ್ರಾತ್ಮನನ್ನು ಪ್ರತಿಷ್ಠಿಸುವ ಮತ್ತು ಮಗನ ಭಾವ ಹೊಂದುವ ಪ್ರಭಾವಕ್ಕೆ ಬರಲು ಬಯಸುವುದರಿಂದ – ಈ ರೀತಿಯಾಗಿ ಪುತ್ರತ್ವಕ್ಕೆ ಪಡಕೊಳ್ಳಲ್ಪಟ್ಟವರೆಲ್ಲರೂ ದೇವರೊಂದಿಗೆ ಸಂಪೂರ್ಣ ಸಾಮರಸ್ಯವುಳ್ಳವರಾಗಿ ಆತನು ಅಂಗೀಕರಿಸಿ ಮುದ್ರಿಸುವಂತೆ ಅಂಥಾಃ ಸ್ಥಿತಿಯನ್ನು ಪಡಕೊಳ್ಳಲು ಬಯಸಬೇಕು. ಈ ಸ್ಥಿತಿಯನ್ನು ಪಡಕೊಂಡ ನಂತರ ಎಲ್ಲರೂ ಆ ಮುದ್ರೆಯನ್ನು ಹಾನಿಗೊಳಿಸದಂತೆ ಅಥವಾ ಮಂಕುಗೊಳಿಸದಂತೆ ಈ ಅಮೂಲ್ಯವಾದ ನಿಧಿಯನ್ನು ಶಮನಗೊಳಿಸದಂತೆ, ಆರಿಸದಂತೆ ಎಚ್ಚರಿಕೆ ವಹಿಸಬೇಕು. – ಸಾಂಗತ್ಯ ಮತ್ತು ಭಾವೈಕ್ಯವುಳ್ಳ ಪವಿತ್ರಾತ್ಮನಲ್ಲಿರುವ ಈ ಪ್ರೀತಿಯ ಮತ್ತು ಸಂತೋಷದ ಆತ್ಮನನ್ನು ಭಾರವುಳ್ಳ, ಅಂಧಕಾರಮಯವಾದ ಮತ್ತು ದುಃಖದಾಯಕ ಆತ್ಮವಾಗದಂತೆ ನೋಡಿಕೊಳ್ಳಬೇಕು. ಈ ಮುದ್ರೆಯನ್ನು ಹಾನಿಗೊಳಿಸಬಾರದು. ಆದರೆ ಅದನ್ನು ಸದಾ ಪ್ರಕಾಶಮಾನವಾಗಿ ಮತ್ತು ಚಿರನೂತನವಾಗಿ ಇಡುವುದು ಅದನ್ನು ಪಡಕೊಳ್ಳುವವರೆಲ್ಲರ ನಿರಂತರವಾದ ಪ್ರಯತ್ನವಾಗಿರತಕ್ಕದ್ದು.

* * * * * *